ತಿಂಗಳ ಪತ್ರಿಕೆ ವಿಶೇಷ ಸಂಚಿಕೆ



ಮಾನಸ

ಸಂಪುಟ : ೨ ವಿಶೇಷ ಸಂಚಿಕೆ
ಸೆಪ್ಟೆಂಬರ್–ಅಕ್ಟೋಬರ್ ೧೯೮೯

ಸಂಪಾದಕೀಯ ಮಂಡಳಿ
ರಾಜೇಶ್ವರಿ ಎಚ್. ಎಸ್., ಸರಸ್ವತಿ ದು.,
ಚಂಪಾವತಿ ಎಚ್. ಎಸ್.,
ಸವಿತ ಎ., ಗೀತಾ ಜಿ. ಎಸ್.

ಸಲಹೆ—ಸಹಕಾರ
ಇಳಾವಿಜಯ

ವಿಳಾಸ "ಮಾನಸ ತಿಂಗಳ ಪತ್ರಿಕೆ"
ಪಂಚಾಯಿತಿ ರಸ್ತೆ
ಕಾಡುಗೋಡಿ (ಪೊ.)
ಬೆಂಗಳೂರು—560-067.

ಬಿಡಿಪ್ರತಿ: 2 ರೂ.
ಸೂಚನೆ: ವಾರ್ಷಿಕ ಚಂದಾ :**20**ರೂ.
ಆಜೀವ ಚಂದಾ :**250**ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ ....

ಮುಖಪುಟ : **ಕೆ. ಆರ್. ನಾಗರಾಜ್.**

ನಮಗರಿಯದ ನಮ್ಮ ಚರಿತ್ರೆ

ಲಕ್ಷ್ಮೀಪತಿ.

ತೆಲಂಗಾಣ ರೈತಾಂಗ ಹೋರಾಟದಲ್ಲಿ ಸ್ತ್ರೀ ಪಾತ್ರ ಕುರಿತಂತೆ ಕೆಲವು ಮೂಲಭೂತ ವಿಚಾರ ಮತ್ತು ಪ್ರಶ್ನೆಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಿದಲ್ಲಿ ನಮಗೆ ಕೆಲವು ಮುಖ್ಯ ಸಾಮಾಜಿಕ ಮತ್ತು ರಾಜಕೀಯ ಸತ್ಯಗಳು ಕಾಣಿಸಿಬಿಡಬಲ್ಲವು. ಯಾವುದೇ ಹೋರಾಟ ಮತ್ತು ಚಳುವಳಿ ಪಡೆದುಕೊಳ್ಳಬೇಕಾದ ಸ್ತ್ರೀ ಕುರಿತು ವಿಶಿಷ್ಟ ಆಯಾಮದ ಗಟ್ಟಿ ಅಭಿಪ್ರಾಯಗಳು ಹೊರಹೊಮ್ಮಬಹುದು. ತೆಲಂಗಾಣ ಹೋರಾಟದ ಬಗ್ಗೆ ಸಾಕಷ್ಟು ಪುಸ್ತಕಗಳು ಪ್ರಕಟಗೊಂಡಿದ್ದರೂ ಈ ಹಿನ್ನೆಲೆಯಿಂದ ಚಳುವಳಿಯಲ್ಲಿ ದುಡಿಯುವ ಮಹಿಳೆಯ ಸಮಸ್ಯೆಗಳನ್ನು ಪ್ರಧಾನವಾಗಿಸಿಕೊಂಡು ಬಂದ ಪುಸ್ತಕಗಳೇ ಇಲ್ಲವೆನ್ನಬಹುದು

ರೈತರ ಸಶಸ್ತ್ರ ಹೋರಾಟವೆಂದೊಡನೆ ಚರಿತ್ರಾರ್ಹವಾದ ವೀರ ತೆಲಂಗಾಣ ರೈತಾಂಗ ಹೋರಾಟವೇ ನೆನಪಾಗುತ್ತದೆ. ಬಹುಶಃ ಸ್ವಾತಂತ್ರ್ಯಪೂರ್ವ ಕೃಷಿಕ ಗೆರಿಲ್ಲಾ ಹೋರಾಟಗಳಲ್ಲಿ ತನ್ನ ಅತ್ಯಪೂರ್ವ ಚೈತನ್ಯವಂತಿಕೆ ಮತ್ತು ಪ್ರಖರತೆಯಿಂದಾಗಿ ತೀವ್ರಗಮನ ಸೆಳೆಯುವಂತದ್ದು ತೆಲಂಗಾಣದ ಸಶಸ್ತ್ರ ದಂಗೆಯೇ.

ಈ ಹೋರಾಟದ ಸಂದರ್ಭದಲ್ಲಿ ತೆಲಂಗಾಣದ ವೀರವನಿತೆ ಪುರುಷನಿಗೆ ಸಮ ಸಮನಾಗಿ ಬಂಡೆದ್ದು, ಗುಡುಗಿ ಅಚ್ಚರಿ ಎನಿಸುವಂತೆ ಗಮನ ಸೆಳೆದಿದ್ದಾಳೆ. ಬಹಿರಂಗ ಮತ್ತು ಅಂತರಂಗಿಕವಾದ ಇಬ್ಬಗೆಯ ಹೋರಾಟಗಳ ತೆಲಂಗಾಣದ ಸ್ತ್ರೀ — ಭೂಮಿ ಮತ್ತು ಜಾತಿ ಸಂಬಂಧಗಳಾಚೆಗಿನ ಮನುಷ್ಯ ಸಂಬಂಧಗಳವರೆಗೂ ತನ್ನನ್ನು ವಿಸ್ತರಿಸಿಕೊಂಡು, ಎಲ್ಲ ಕ್ರೂರ ಸಂಕೋಲೆಗಳನ್ನೊಮ್ಮೆಲೇ ಕಳಚಿಕೊಳ್ಳಲು ಮೈ ಕೊಡವಿಕೊಂಡೆದ್ದ, ಇತಿಹಾಸದ ಒಳಮುಖಿ ಪುರುಷ ಪ್ರಧಾನ ಮೌಲ್ಯಗಳ ನಡುವೆ ಹೂತು ಹೋದಂತಿದೆ.

ಚಳುವಳಿ ಮತ್ತು ರಾಜಕೀಯ ಹೋರಾಟಗಳಲ್ಲಿ ಸ್ತ್ರೀ ಸಮುದಾಯ ಭಾಗವಹಿಸುವ ಕ್ರಮ ಎಂತಹುದು? ಅವರಿಗೆದುರಾಗುವ ಸಮಸ್ಯೆಗಳೆಂತಹವು? ಇವತ್ತಿನ ಮಹಿಳೆಯ ಸಮಸ್ಯೆಗೂ ತೆಲಂಗಾಣದ ಅಂದಿನ ಸ್ತ್ರೀ ಹೋರಾಟಕ್ಕೂ ನಡುವಿನ ಸಂಬಂಧ ಎಂತಹುದು? ಸ್ತ್ರೀಯರ ಈ ಬಗೆಯ ಅನುಭವಗಳಿಂದ ಇಂದಿನ ಎಡಪಂಥೀಯ ಪಕ್ಷಗಳು ತಿಳಿಯಬಹುದಾದ ವಿಚಾರಗಳೆಂತಹವು? ಹೊಸ ಪರಿಷ್ಕಾರವೊಂದನ್ನು ಸೂಚಿಸುವುದರ ಮೂಲಕ ಸ್ತ್ರೀ ಕುರಿತಂತೆ ಹೊಸ ಇಮೇಜೊಂದನ್ನು ಅಂದಿನ ಕಮ್ಯೂನಿಸ್ಟ್ ಪಕ್ಷ ಸೃಷ್ಟಿಸಲು ಸಾಧ್ಯವಾಯಿತೆ?

ಈ ಎಲ್ಲ ಮೇಲ್ಕಂಡ ಅಂಶಗಳ ಚರ್ಚೆ ಮತ್ತು ವಿಶ್ಲೇಷಣೆಯ ಆಶಯಗಳೊಂದಿಗೆ ಆಂಧ್ರಪ್ರದೇಶದ "ಸ್ತ್ರೀ ಸಂಘಟನೆ" ಮನಕು ತೆಲಿಯನಿ "ಮನ" ಚರಿತ್ರ — (ನಮಗೆ ತಿಳಿಯದ ನಮ್ಮ ಚರಿತ್ರೆ) ಎಂಬ ಪುಸ್ತಕವೊಂದನ್ನು ಪ್ರಕಟಿಸಿದೆ. ತೆಲಂಗಾಣ ಹೋರಾಟದಲ್ಲಿನ ಮಹಿಳೆಯ ಪಾತ್ರ ಕುರಿತಂತೆ ಶೋಧನೆ ನಡೆಸಿರುವ ಈ ಪುಸ್ತಕ ಹೋರಾಟದಲ್ಲಿ ಭಾಗವಹಿಸಿ ಬದುಕುಳಿದಿರುವ ವೀರವನಿತೆಯರ ಮಾತುಗಳನ್ನು ಯಥಾವತ್ತು ಅವರ ಶೈಲಿ, ಭಾಷೆಯಲ್ಲೇ ಹಿಡಿದಿಟ್ಟಿದೆ. ಜೊತೆಗೆ ಸ್ತ್ರೀ ಶಕ್ತಿ ಸಂಘಟನೆ ತನ್ನ ಸಮಯೋಚಿತ ವಿಶ್ಲೇಷಣೆಗಳನ್ನೂ ದಾಖಲಿಸಿದೆ. ತೆಲಂಗಾಣ ಹೋರಾಟದಲ್ಲಿ ಗುಪ್ತಗಾಮಿನಿಯಾಗಿ ಹರಿದ ಸ್ತ್ರೀ ಶಕ್ತಿಯ ಪರಿಚಯ ಒದಗಿಸುವ ಈ ಪ್ರಯತ್ನ ಚರಿತ್ರೆಯ ಇನ್ನೊಂದು ಮಗ್ಗುಲಿನ ಸೂಕ್ಷ್ಮ ವಿವರಗಳತ್ತ ಬೆಳಕು ಹರಿಸುವ ಗಂಭೀರ ಆಶಯವನ್ನು ಹೊಂದಿದೆ. ಚರಿತ್ರೆ ಸೃಷ್ಟಿಸಿಯೂ ಹೆಸರಿಲ್ಲದೆ ಹೋದ ಸ್ತ್ರೀಯರಿಗೆ ಅರ್ಪಿಸಲಾಗಿರುವ ಈ ಪುಸ್ತಕವನ್ನು ಸ್ತ್ರೀ ಶಕ್ತಿ ಸಂಘಟನೆಯ ಕೆ. ಲಲಿತಾ, ವಸಂತ ಕಣ್ಣಬಿರಾನ್ ಮುಂತಾದ ಸದಸ್ಯೆಯರು ಸಂಪಾದಿಸಿದ್ದಾರೆ.

ಈ ಪುಸ್ತಕದ ಒಳನೋಟಗಳನ್ನು ಅರ್ಥಮಾಡಿಕೊಳ್ಳುವ ಮೊದಲು ತೆಲಂಗಾಣ ಹೋರಾಟದ ಸಂಕ್ಷಿಪ್ತ ಪರಿಚಯವಿರಬೇಕಾದ್ದು ಅತ್ಯಗತ್ಯವೆನಿಸುತ್ತೆ. ತೆಲಂಗಾಣ ಚಳುವಳಿಯ ಸ್ಥೂಲ ಅರಿವಿಲ್ಲದೆ ಹೋದಲ್ಲಿ ಈ ಪುಸ್ತಕ ಎತ್ತುವ ಗಂಭೀರ ಚರ್ಚೆ ಸಹ ಎಲ್ಲೋ ಅಪರಿಪೂರ್ಣ ಎಂದೇ ಅನಿಸಿಬಿಡಬಹುದು.

ಹೈದರಾಬಾದು ಸಂಸ್ಥಾನ ದೇಶದ ಎಲ್ಲ ಸಂಸ್ಥಾನಗಳ ಪೈಕಿ ಅತ್ಯಂತ ದೊಡ್ಡ ಸಂಸ್ಥಾನ. ಹೈದರಾಬಾದು ಸೇರಿ ಎಂಟು ಇತರೆ ಜಿಲ್ಲೆಗಳ ತೆಲಂಗಾಣ ಸಂಸ್ಥಾನದ ಶೇಕಡ ಐವತ್ತು ಭಾಗದ ಪ್ರದೇಶವನ್ನು ಆಕ್ರಮಿಸಿಕೊಂಡರೆ ಉಳಿದರ್ಧ ಪ್ರದೇಶಗಳಲ್ಲಿ ಮರಾಠವಾಡ ಮತ್ತು ಕನ್ನಡ ಭಾಷಿಕರ (ಬೀದರ್, ಕಲಬುರ್ಗಿ, ರಾಯಚೂರ್) ಮೂರು ಜಿಲ್ಲೆಗಳು ಸೇರಿದ್ದವು. ಹೋರಾಟ ಪೂರ್ವ ತೆಲಂಗಾಣವೆಂದರೆ ಅದು ಕೇವಲ ಗುಲಾಮ ಪದ್ಧತಿಯ ಮಧ್ಯಕಾಲೀನ ಸಮಾಜದ ಒಂದು ನಡುಗಡ್ಡೆಯಂತಿದ್ದ ನಿಜಾಂ ರಾಜ್ಯ. ೧೭೧೩ರಲ್ಲಿ ಔರಂಗಜೇಬನು ತನ್ನ ದಕ್ಕನ ಪ್ರಾಂತ್ಯಕ್ಕೆ ಆಸಫ್ ಜಾ ಎಂಬುವನನ್ನು ಸುಬೇದಾರನನ್ನಾಗಿ ನೇಮಿಸಿದನು. ಆಗಿನ ನಿಜಾಂ ಆಸಫ್ ಜಾ ಕಾಲಕ್ರಮೇಣ ತನ್ನನ್ನು ಸ್ವತಂತ್ರ ದೊರೆಯೆಂದು ಘೋಷಿಸಿಕೊಂಡ. ಹೀಗೆ ಈತನೊಂದಿಗೇ ಬಂದು ನೆಲೆಯೂರಿದ ಹಿಂದು — ಮುಸ್ಲಿಂಗಳು ಜಾಗೀರುದಾರರಾಗಿ, ರೆವಿನ್ಯೂ ಅಧಿಕಾರಿಗಳಾಗಿ, ತೆಲಂಗಾಣ ಪ್ರದೇಶದಲ್ಲಿನ ಭೂಮಿ ತೆರಿಗೆ, ಎಕ್ಸೈಜು, ಅರಣ್ಯಸಂಪತ್ತು, ಮೀನು ಮುಂತಾದವುಗಳ ಸರ್ವ ಹಕ್ಕನ್ನೂ ಕಾಲಾನುಕ್ರಮದಲ್ಲಿ ಕಸಿದುಕೊಂಡರು. ಇದಷ್ಟೇ ಅಲ್ಲದೆ ಪೊಲೀಸು ಮತ್ತು ನ್ಯಾಯ ವ್ಯವಸ್ಥೆಯನ್ನೂ ಸಹ ತಮ್ಮ ಹತೋಟಿಗೇ ತೆಗೆದುಕೊಂಡರು. ಈ ಜಾಗೀರುದಾರರು ಬರುವುದಕ್ಕೆ ಮೊದಲು ಅಲ್ಲಿ ಕೆಲವು ಸಣ್ಣ ಪುಟ್ಟ ಹಿಂದೂ ದೊರೆಗಳೂ ಸಹ ಇದ್ದರು. ಆ ನಂತರದಲ್ಲಿ ಇವರು ನಿಜಾಮನಿಗೆ ನಜರಾನ ಸಲ್ಲಿಸಿ ತಮ್ಮ ಹಕ್ಕುಗಳನ್ನು ಉಳಿಸಿಕೊಂಡರು, ಈ ಜಾಗೀರುದಾರಿ ಪದ್ಧತಿ ವಂಶಪಾರಂಪರ್ಯವಾಗಿತ್ತು,

ಒಟ್ಟು ಹೈದರಾಬಾದು ಸಂಸ್ಥಾನದ ಶೇಕಡ ೪೦ ಭಾಗ ಭೂಮಿ ಜಾಗೀರು, ಸಂಸ್ಥಾನಗಳು ಮತ್ತು ಸರ್ಫ್ ಎ ಕ್ಲಾಸ್ (ನಿಜಾಮನ ಸ್ವಂತ ಖರ್ಚುಗಳಿಗಾಗಿ ಮೀಸಲಾದ ಭೂಮಿ) ಗಳಿಗೆ ಹಂಚಿಹೋಗಿತ್ತು. ಇನ್ನುಳಿದ ಶೇ. ೬೦ ಭಾಗ ಜಮೀನುಗಳನ್ನು "ಖಾಲ್ಸಾ" ಅಥವಾ "ದಿವಾನಿ" ಎನ್ನುತ್ತಿದ್ದರು. ಈ ಜಮೀನುಗಳಲ್ಲಿ ತೆರಿಗೆ ವಸೂಲು ಮಾಡುತ್ತಿದ್ದವರೇ ಕಾಲಕ್ರಮೇಣ ದೇಶ್‌ಮುಖ್, ಸರ್ದೇಶ್‌ಮುಖ್, ದೇಸಾಯಿ, ಸರ್ದೇಸಾಯಿ, ಅನ್ನೋ ಬಿರುದುಗಳೊಂದಿಗೆ ಭೂ ಮಾಲೀಕರುಗಳಾಗಿ ಮೆರೆದವರು. ಅತ್ಯಧಿಕ ತೆರಿಗೆಗಳಿಂದ ದಿಕ್ಕುಗಾಣದಾಗಿಸಿ ಈ ಭೂಸ್ವಾಮಿಗಳು ರೈತರನ್ನು ಪಶುಗಳಂತೆ ಗುಲಾಮರಾಗಿಸಿಕೊಂಡು ರೈತರ ಭೂಮಿಗಳಲ್ಲೇ ಅವರನ್ನು ಪರಕೀಯರನ್ನಾಗಿಸಿ ಅವರ ದುಡಿಮೆಯನ್ನೇ ದೋಚತೊಡಗಿದ್ದರು.

ಕೃಷಿಕರ ಚೂರು ಚುಟುಕು ಭೂಮಿಗಳಲ್ಲಿನ ಹುಣಸೆ, ಈಚಲು, ಮಾವು, ತಾಟಿ ಮುಂತಾದ ಮರಗಳು ಸಹ ರೈತರಿಗೆ ಸೇರುವಂತಿರಲಿಲ್ಲ. ಇದರೊಂದಿಗೆ ಹಣ್ಣು ತರಕಾರಿ ಮುಂತಾದ ಎಲ್ಲ ವಿಧದ ಪ್ರಕೃತಿ ಸಂಪನ್ಮೂಲಗಳೂ ಭೂ ಸ್ವಾಮಿಗಳ ಬಂಗಲೆಗಳಿಗೇ ಸೇರುತ್ತಿದ್ದವು. ಇವೆಲ್ಲಕ್ಕಿಂತಲೂ ಹೆಚ್ಚು ಅಮಾನುಷವಾಗಿದ್ದಿದ್ದೆಂದರೆ "ವೆಟ್ಟಿ ಚಾಕರಿ" (ಬಿಟ್ಟಿಚಾಕರಿ) ಎಂಬ ಕ್ರೂರ ಪದ್ಧತಿ. ಯಾವುದೇ ರೀತಿಯ ಕೂಲಿ, ಪ್ರತಿಫಲವಿಲ್ಲದೆ ಎಲ್ಲರೂ ಭೂ ಮಾಲೀಕರ ಹೊಲಗದ್ದೆ, ಮನೆಗಳಲ್ಲಿ ಹಗಲು ರಾತ್ರಿ ಎನ್ನದೆ ಗಾಣದೆತ್ತಿನಂತೆ ದುಡಿಯಬೇಕಿತ್ತು. ಊರಿನ ಇನ್ನಿತರ ಅಗಸ, ಕ್ಷೌರಿಕ, ಕಮ್ಮಾರ ಮುಂತಾದ ಜನಾಂಗಗಳೂ ಭೂ ಮಾಲೀಕರ ಎಲ್ಲ ಕೆಲಸಗಳನ್ನೂ ಬಿಟ್ಟಿಯಾಗಿಯೇ ಮಾಡಿಕೊಡಬೇಕಿತ್ತು. ಊರಿಗೆ ಆ, ಈ ಅಧಿಕಾರಿಗಳು ಬಂದಾಗಲೂ — ಅವರ ಸಕಲ ಸೇವೆಗಳನ್ನೂ ಎದುರಾಡದೆ ರೈತಾಪಿ ಜನ ಮಾಡಬೇಕಿತ್ತು.

ತೆಲಂಗಾಣದಲ್ಲಿ ಹೆಣ್ಣೆಂದರೆ ಕೇವಲದಲ್ಲಿ ಕೇವಲವಾಗಿದ್ದ ಒಂದು ಜೀವಂತ ವಸ್ತು. ಜಮೀನುದಾರರಿಗೆ, ಫಾರೆಸ್ಟು, ರೆವಿನ್ಯೂ, ಎಕ್ಸೈಜು ಮತ್ತು ಪೋಲಿಸು ಅಧಿಕಾರಿಗಳಿಗೆ ಆಕೆಯನ್ನು ತಮಗಿಷ್ಟ ಬಂದ ರೀತಿಯಲ್ಲಿ ಹಗಲಿರುಳೂ ಉಪಯೋಗಿಸಿಕೊಳ್ಳುವ ಸ್ವೇಚ್ಛೆ ಇತ್ತು. ತೆಲಂಗಾಣದ ಈ ಎಲ್ಲ ದೊರೆಗಳಿಗೂ ಸ್ತ್ರೀಯರು ಕೂಡ ಬಿಟ್ಟಿಚಾಕರಿ ಮಾಡಬೇಕಿತ್ತು. ಬೇಕೆಂದಾಗಲೆಲ್ಲ ಆಕೆ ಈ ಎಲ್ಲ ಜನರಿಗೆ ಎಟುಕುವಂತೆಯೇ — ಸಿದ್ಧವಾಗಿರಬೇಕಿತ್ತು.

ತಮ್ಮ ಸ್ವಂತದ ಬೆಳೆಗಳೂ ಅನೇಕ ಬಾರಿ ರೈತರಿಗೆ ಸಿಗುತ್ತಿರಲಿಲ್ಲ. ಕಿಂಚಿತ್ತು ಪ್ರತಿಭಟನೆ ಕಂಡುಬಂದರೂ ಅತ್ಯಂತ ಕ್ರೂರ ಶಿಕ್ಷೆಗಳಿಗೆ ರೈತರು ಒಳಗಾಗಬೇಕಿತ್ತು.

ಬಹುಸಂಖ್ಯಾತ ಜನಸ್ತೋಮಕ್ಕೆ ಯಾವುದೇ ನ್ಯಾಯ ವ್ಯವಸ್ಥೆ ಇರಲಿಲ್ಲ. ರಕ್ಷಣೆಯ ಮಾತಂತೂ ದೂರವೇ ಉಳಿಯಿತು. ಕೇವಲ ದರ್ಪ ಮತ್ತು ಅಧಿಕಾರದಿಂದಷ್ಟೆ ರೈತರು ಬೆಳೆದ ಎಲ್ಲ ಸಂಪತ್ತನ್ನೂ ದುಡಿಮೆಯಿಲ್ಲದೆಯೇ ಭೂ ಸ್ವಾಮಿಗಳು ದೋಚುತ್ತ ಬಹುಸಂಖ್ಯಾತ ವರ್ಗವನ್ನು ಘೋರ ಅವಮಾನದ ಕಷ್ಟದ ಬದುಕಿಗೆ ದೂಡಿದ್ದರು. ಬೆರಳೆಣಿಕೆಯಷ್ಟು ಜನ ಮಾತ್ರ ನಿರ್ಭಯವಾಗಿ ಉಸಿರಾಡುತ್ತಿದ್ದರು. ದುಡಿಯುವ ವರ್ಗದ ಇಡೀ ಪುರುಷ ಸಮೂಹವೇ ಮಾತುಕಳಕೊಂಡವರಂತೆ, ಸೂರ್ಯನನ್ನು ಕೂಡ ನೋಡಲಾಗದಂತೆ— ಅಕ್ಷರಶಃ ತಲೆಬಗ್ಗಿಸಿಕೊಂಡು ಪ್ರಾಣದಿಂದಷ್ಟೇ ಉಳಿದಿದ್ದರು. ಇನ್ನು ಪುರುಷನೇ ಗುಲಾಮನಾಗಿದ್ದ ಪುರುಷಪ್ರಧಾನ ಸಮಾಜದಲ್ಲಿ ಉತ್ಪತ್ತಿಯಲ್ಲಿ

> ಹೆಣ್ಣನ್ನು ಬಲಾತ್ಕಾರದಿಂದ ಭೋಗಿಸುವುದು ತಮ್ಮ ಹಕ್ಕು ಮತ್ತು ಪ್ರತಿಷ್ಠೆ ಎಂದು ತಿಳಿದಿದ್ದ ಭೂಸ್ವಾಮಿಗಳ ಕ್ರೂರ ದೃಷ್ಟಿಯಿಂದ ತಮ್ಮ ಮನೆಯ ಹೆಂಗಸರನ್ನು ಬಚಾವು ಮಾಡುವ ಈ ಪರದಾ ಅನುಕರಣೆ ಆಗಿನ ಪುರುಷನ ಒಂದು ಆಲೋಚನೆಯಾಗಿದ್ದರೆ, ಸಾಂಘಿಕವಾಗಿ ಅದು ಆಡಳಿತ ವರ್ಗದ ಪದ್ಧತಿಯಗಳನ್ನು ಮನ್ನಿಸಿ ಸಾಂಸ್ಕೃತಿಕರಣವಾಗುವುದರ ಮೂಲಕ ವರ್ಗ ರಕ್ಷಣೆಯನ್ನು ಪಡೆಯುವ ಮಧ್ಯಮ ವರ್ಗದ ರಾಜೀತಂತ್ರವಾಗಿತ್ತು.

ಸಮಪಾಲುದಾರಳಾಗಿಯೂ ನಿರ್ಗತಿಕವಾಗಿ, ಪ್ರಾಣ ಮಾನಗಳಿಗೆ ಕಿಂಚಿತ್ತು ರಕ್ಷಣೆಯೂ ಇಲ್ಲದಿದ್ದ ತೆಲಂಗಾಣದ ಮಹಿಳೆಯ ಅವಸ್ಥೆ ಎಷ್ಟು ದಾರುಣವಾಗಿರಬೇಡ? ಅವಳ ಮನಃಸ್ಥಿತಿಯ ಘೋಗವನ್ನು ಕೇವಲ ಊಹೆಗಳಿಂದ ಅನುಭವಕ್ಕೆ ತಂದುಕೊಳ್ಳುವುದು ಸಾಧ್ಯವೇ ಇಲ್ಲವೆನಿಸುತ್ತದೆ,

ತೆಲಂಗಾಣದಲ್ಲಿ ಹೆಣ್ಣೆಂದರೆ ಕೇವಲದಲ್ಲಿ ಕೇವಲವಾಗಿದ್ದ ಒಂದು ಜೀವಂತ ವಸ್ತು. ಜಮೀನುದಾರರಿಗೆ ಫಾರೆಸ್ಟ್, ರೆವಿನ್ಯೂ, ಎಕ್ಸೈಜ್ ಮತ್ತು ಪೊಲೀಸು ಅಧಿಕಾರಿಗಳಿಗೆ ಆಕೆಯನ್ನು ತಮಗಿಷ್ಟ ಬಂದ ರೀತಿಯಲ್ಲಿ ಹಗಲಿರುಳೂ ಉಪಯೋಗಿಸಿಕೊಳ್ಳುವ ಸ್ವೇಚ್ಛೆ ಇತ್ತು. ತೆಲಂಗಾಣದ ಈ ಎಲ್ಲ ದೊರೆಗಳಿಗೂ ಸ್ತ್ರೀಯರೂ ಕೂಡ ಬಿಟ್ಟಿ ಚಾಕರಿ ಮಾಡಬೇಕಿತ್ತು. ಬೇಕೆಂದಾಗಲೆಲ್ಲ ಆಕೆ ಈ ಎಲ್ಲ ಜನರಿಗೆ ಎಟುಕುವಂತೆಯೇ — ಸಿದ್ಧವಾಗಿರಬೇಕಿತ್ತು. ಹೊಲ, ಮನೆ, ಗದ್ದೆಗಳಲ್ಲಿ ಬಿಟ್ಟಿಯಾಗಿ ದುಡಿಯುತ್ತಿರುವಾಗಲೂ ಎಳೆಗೂಸಿಗೆ ಹಾಲೂಡಿಸಲು ಸಹ ಆಕೆಯನ್ನು ಬಿಡುತ್ತಿರಲಿಲ್ಲ. ಪ್ರಸ್ತದ ಮೊದಲ ರಾತ್ರಿ ನವವಧು ಆ ಭಾಗದ ಭೂ ಮಾಲೀಕನೊಂದಿಗೆ ಕಳೆಯುವುದಂತೂ — ಪ್ರಶ್ನಾತೀತ ಪದ್ಧತಿಯಾಗಿ ಹೋಗಿತ್ತು. ಇಷ್ಟೆಲ್ಲ ನಡುವೆಯೂ ಕೆಳವರ್ಗದ ಯಾವ ಹೆಣ್ಣೂ ಹೊಸ ಸೀರೆಯನ್ನು ಉಡುವಂತಿರಲಿಲ್ಲ, ಹೂ ಸಹ ಮುಡಿಯುವಂತಿರಲಿಲ್ಲ, ಯಾವುದೇ ರೀತಿಯಲ್ಲಿ ಅಲಂಕರಿಸಿಕೊಳ್ಳುವುದು ಅಹಂಕಾರವಾಗಿಯೂ ಮತ್ತು ಅಪರಾಧವಾಗಿಯೂ ಪರಿಗಣಿಸಲಾಗುತ್ತಿತ್ತು.

ಉತ್ಪತ್ತಿಯಲ್ಲಿ ಪಾಲುದಾರಳಾಗಿದ್ದ ಮಹಿಳೆಯೇ ವೆಟ್ಟ (ಬಿಟ್ಟಿಚಾಕರಿ) ದೇವದಾಸಿ, ದಾಸಿ, ದುರ್ಬರ ದಾರಿದ್ರ್ಯ, ಅತ್ಯಾಚಾರ, ಭೂ ಸ್ವಾಮಿಗಳ ಮೃಗೀಯ ವರ್ತನೆ ಮತ್ತು ಮೂದಲಿಕೆಗಳೊಂದಿಗೆ ಹೋರಾಟ ಕಾಲದ ನಿಜಾಮನ ನಾಜೀ ಪಡೆಗಳಂತಿದ್ದ ರಜಾಕಾರರ ರಾಕ್ಷಸೀ ನಿರ್ಬಂಧಗಳನ್ನೂ ಸಹಿಸಿಕೊಳ್ಳಬೇಕಿತ್ತು. ತೆಲಂಗಾಣದ ಹಳ್ಳಿ ಹಳ್ಳಿಗಳನ್ನೂ ಸುತ್ತಿರುವ ಧೀಮಂತ ಮಹಿಳಾ ನಾಯಕಿ ಸ್ವರಾಜ್ಯಂ ಕಂಡಂತೆ ಪ್ರತಿ ಹಳ್ಳಿಯ ಪ್ರತಿಮನೆಯಲ್ಲೂ ರಾತ್ರಿ ಗಂಡಂದಿರ ಸುಪ್ತ ರೊಚ್ಚಿಗೆ ಬಲಿಪಶುವಾಗುತ್ತಿದ್ದ ಮಹಿಳೆಯರು ರಾಗವೆತ್ತಿ ರೋಧಿಸುತ್ತಿದ್ದರಂತೆ. ಅನೇಕ ಸಂದರ್ಭಗಳಲ್ಲಿ ಈ ಅಳು ಬೆಳಗಾಗುವವರೆಗೂ ಮುಂದುವರೆಯುತ್ತಿತ್ತಂತೆ. ದುಡಿಯುವ ಮಹಿಳೆಯ ಈ ನಿರಂತರ ಆಕ್ರಂದನದ ಅಪಹಾಸ್ಯ ಎಲ್ಲಿಯವರೆಗೂ ತಲುಪಿತ್ತೆಂದರೆ— ತೆಲಂಗಾಣದ ಗಂಡಸರಿಗೆ ತಮ್ಮ ಹೆಂಡತಿಯರ ರೋಧನದ ಜೋಗುಳವಿಲ್ಲದಿದ್ದರೆ ನಿದ್ರೆಯೇ ಹತ್ತುತ್ತಿರಲಿಲ್ಲವಂತೆ.

ಮಧ್ಯಮ ವರ್ಗದ ಮಹಿಳೆಯ ಸ್ಥಿತಿಯೂ ಕೂಡ ಹೆಚ್ಚು ಭಿನ್ನವಾಗಿರಲಿಲ್ಲ. ಅವರು ದುಡಿಯುವ, ಓದುವ ಯಾವ ಕಾರಣಗಳ ಮೇಲೂ ಳಿಗೋಡೆಗಳ ಉಸಿರುಗಟ್ಟುವ ಬಂಧನದಿಂದ ಹೊರಬರುವಂತೆಯೇ ಇರಲಿಲ್ಲ. ಅನಿವಾರ್ಯ ಪರಿಸ್ಥಿತಿಗಳಲ್ಲಿ ಸರದಾ ಅಥವಾ ಘೋಷ ಇಲ್ಲದೆ ಹೊರಗೆ ಕಾಲಿಡುವಂತೆಯೇ ಇರಲಿಲ್ಲ. ಹೆಣ್ಣನ್ನು ಬಲಾತ್ಕಾರದಿಂದ ಭೋಗಿಸುವುದು ತಮ್ಮ ಹಕ್ಕು ಮತ್ತು ಪ್ರತಿಷ್ಠೆ ಎಂದು ತಿಳಿದಿದ್ದ ಭೂ ಸ್ವಾಮಿಗಳ ಕ್ರೂರ ದೃಷ್ಟಿಯಿಂದ ತಮ್ಮ ಮನೆಯ ಹೆಂಗಸರನು ಬಚಾವು ಮಾಡುವ ಈ

ಪರದೆ ಅನುಕರಣೆ ಆಗಿನ ಪುರುಷನ ಒಂದು ಆಲೋಚನೆಯಾಗಿದ್ದರೆ, ಸಾಂಘಿಕವಾಗಿ ಅದು ಆಡಳಿತ ವರ್ಗದ ಪದ್ಧತಿಗಳನ್ನ ಮನ್ನಿಸಿ ಸಾಂಸ್ಕೃತೀಕರಣವಾಗುವುದರ ಮೂಲಕ ವರ್ಗ ರಕ್ಷಣೆಯನ್ನು ಪಡೆಯುವ ಮಧ್ಯಮ ವರ್ಗದ ರಾಜೀ ತಂತ್ರವಾಗಿತ್ತು.

ಹೋರಾಟಪೂರ್ವ ತೆಲಂಗಾಣದ ಸ್ತ್ರೀಯ ಚರಿತ್ರೆ ೧೯ನೇ ಶತಮಾನದ ಕಪ್ಪು ಪುಟಗಳ ಇತಿಹಾಸದಂತಿದೆ. ಹೋರಾಟದಲ್ಲಿ ಪಾಲುಗೊಂಡಿದ್ದ ಕಮಲಮ್ಮ ಎಂಬಾಕೆ ತನ್ನ ಮಾತೃಪರಂಪರೆಯನ್ನು ಗುರುತಿಸಿಕೊಡುತ್ತ ತನ್ನ ಅಜ್ಜಿಯನ್ನೋ ಅವರ ತಾಯಿಯನ್ನೋ ಹೊಟ್ಟೆಗೆ ಹಿಡಿಕೂಳೂ ಗತಿಯಿಲ್ಲದಾದಾಗ ಒಂದು ಸೊಲಿಗೆ ಅಕ್ಕಿ ಮತ್ತು ಒಂದು ರೂಪಾಯಿಗೆ ಬ್ರಾಹ್ಮಣರ ಮನೆಯವರೊಬ್ಬರಿಗೆ ಮಾರಿದ್ದನ್ನು ನೆನಪಿಸಿಕೊಳ್ಳುತ್ತಾಳೆ. ಅಲ್ಲಿಂದಾಚೆಗೆ ಬಾನಿಸ (ಗುಲಾಮ) ಕುಟುಂಬವಾಗಿಯೇ ಮುಂದುವರೆದ ಅವರ ತಾಯಿಯನ್ನು ಯಾರು ಯಾರೋ "ಇಟ್ಟುಕೊಂಡಿದ್ದು" ತನ್ನಕ್ಕನನ್ನು ಮತ್ತ್ಯಾರೋ ಹಾಳುಗೆಡವಿ ಆಕೆಯ ಸಾವಿಗೆ ಕಾರಣವಾಗಿದ್ದು ಮುಂತಾದ್ದನ್ನು ಕಮಲಮ್ಮ ಹೇಳುತ್ತ ತೆಲಂಗಾಣದ ಅಂದಿನ ಸಮಾಜದ ಸ್ತ್ರೀಯ ದಾರುಣ ಸ್ಥಿತಿಗತಿಗಳಿಗೆ ಜೀವಂತ ಕನ್ನಡಿಯಾಗುತ್ತಾಳೆ. ಹೀಗೆ ತೆಲಂಗಾಣದ ಸ್ತ್ರೀ ಅಲ್ಲಿನ ಶೋಷಿತ ಪುರುಷನಿಗಿಂತಲೂ ದುಪ್ಪಟ್ಟು ಹಿಂಸೆ, ಯಾತನೆಗಳನ್ನು ಅನುಭವಿಸಿದ್ದಾಳೆ.

ಸ್ತ್ರೀಯರ ಸಮರೋತ್ಸಾಹವನ್ನು ಒಂದು ಕಡೆ ಹೀಗೆ ತಣ್ಣಗಾಗಿಸುತ್ತ ಮತ್ತೊಂದು ಕಡೆ ಚರಿತ್ರೆಯ ಸೃಷ್ಟಿಕರ್ತರು ಅವರನ್ನು ಕೆಲಸ ವಿಭಜನೆಯಲ್ಲಿ ಸ್ತ್ರೀಯರು ಕಲ್ಲುಗಳನ್ನು ನೀಡುತ್ತಿದ್ದರೆ ಗಂಡಸರು ಕವಣೆ ಬೀರುತ್ತಿದ್ದರು, ಎಂಬ ಪುರುಷ ಕಣ್ಣಿನ ಮೂಲಕವೇ ಭೇದವೆಣಿಸಿದೆ. ರಾಜೇಶ್ವರ ರಾವು ಸಹ ಪಾರ್ಟಿ ಸ್ತ್ರೀ ಸಂಘಟನೆಯ ಮಹತ್ವಕ್ಕೆ ಪ್ರತ್ಯೇಕ ಗಮನವನ್ನು ನೀಡಿ ಯಾವ ಕಾರ್ಯಕ್ರಮವನ್ನು ಹಾಕಲಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ.

ಹೀಗಿದ್ದ ತೆಲಂಗಾಣದ ಕ್ರೂರ ಭೂಸ್ವಾಮ್ಯದ ವಿರುದ್ಧ ಕ್ರಮೇಣ ಸಾಂಸ್ಕೃತಿಕ ಹಂತದಲ್ಲಿ ಮತ್ತು ಅಮೂರ್ತ ಸ್ವರೂಪದಲ್ಲಿ ಸಂಘಟನೆ, ಸಮಾವೇಶಗಳು ತಲೆಯೆತ್ತಲಾರಂಭಿಸಿದವು. ಉರ್ದು ಭಾಷೆ ನಿಜಾಂ ಸಂಸ್ಥಾನದ ಅಧಿಕೃತ ಆಡಳಿತ ಭಾಷೆಯಾಗಿದ್ದರೂ ತೆಲುಗು, ಕನ್ನಡ, ಮರಾಠ ಭಾಷೆಗಳಾಡುವ ಜನ ತೆಲಂಗಾಣದಲ್ಲಿ ವಾಸಿಸುತ್ತಿದ್ದರಷ್ಟೆ. ತೆಲಂಗಾಣದ ಒಂದು ಕೋಟಿ ಅರವತ್ತು ಲಕ್ಷ ಜನಸಂಖ್ಯೆಯಲ್ಲಿ ಬಹುಸಂಖ್ಯಾತರಾದ ಶೇ. ೮೮ ಭಾಗದ ಜನರಿಗೆ ತಮ್ಮ ಭಾಷಾಪರವಾದ ಸಾಂಸ್ಕೃತಿಕ ಹಕ್ಕು, ಸವಲತ್ತುಗಳಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ೧೯೨೧ರಲ್ಲಿ ಮಾಡಪಾಟಿ ಹನುಮಂತರಾವು (ಆಂಧ್ರ ಪಿತಾಮಹ) ಎಂಬುವವರು ಮೊದಲಬಾರಿಗೆ ಆಂಧ್ರ ಜನಸಂಘ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಆಂಧ್ರ ಜನಸಂಘದ ಹುಟ್ಟೇ ತೆಲಂಗಾಣದ ಐತಿಹಾಸಿಕ ಸಾಯುಧ ಹೋರಾಟಕ್ಕೆ ನಾಂದಿಯಾಯಿತೆನ್ನಬಹುದು.

ಪುಸ್ತಕಗಳ ಪ್ರಕಟನೆ, ಪತ್ರಿಕೆಗಳನ್ನು ಹೊರಡಿಸುವುದು (ನೀಲಗಿರಿ ಮತ್ತು ಗೋಲ್ಕಂಡ ಪತ್ರಿಕೆ) ತೆಲುಗುಕಲೆ, ಭಾಷಾಭಿವೃದ್ಧಿಯಂತಹ ಆಂಧ್ರ ಜನಸಂಘದ ಪ್ರಾರಂಭಿಕ ಕಾರ್ಯಕ್ರಮಗಳು ಕ್ರಮೇಣ ಬಿಟ್ಟಿಚಾಕರಿಯ ನಿರ್ಮೂಲನೆ, ಲೆವಿ ನಿರ್ಬಂಧ, ಬಾಲ್ಯವಿವಾಹ, ಸ್ತ್ರೀ ವಿದ್ಯೆಯಿಂದ ಮೊದಲ್ಗೊಂಡು ನಿಜಾಂ ಸಂಸ್ಥಾನದ ಜಾಗೀರುದಾರಿಯ ಎಲ್ಲ ದಬ್ಬಾಳಿಕೆಗಳನ್ನೂ ವಿರೋಧಿಸಿ ಪ್ರಬಲ ಚಳುವಳಿಯಾಗಿ ರೂಪುಗೊಂಡಿದ್ದೊಂದು ಅಸಾಧಾರಣವಾದ ಐತಿಹಾಸಿಕ ಪ್ರಕ್ರಿಯೆಯಾಗಿದೆ. ಆಂಧ್ರ ಜನಸಂಘದ ಸಣ್ಣಪುಟ್ಟ ತೊರೆಗಳೆಲ್ಲ ಒಂದಾಗಿ "ಆಂಧ್ರ ಮಹಾಸಭೆ" ಎಂಬ ಒಂದು ಮಹಾನದಿಯಾಗಿ ಮೈದಾಳಿದ ಸಂಘಟನೆ ತೆಲಂಗಾಣದ ದಿಕ್ಕೆಟ್ಟ ರೈತರ ದಂಗೆಗೆ ಒಂದು ಮೂರ್ತರೂಪದ ಚೌಕಟ್ಟು ಒದಗಿಸಿತು. ಜನಾಂದೋಲನದ ಆಶಯಗಳಿಗೆ ತಕ್ಕಂತೆ ಮಿಡಿಯುವಂತಾಯಿತು.

೧೯೨೧ರಿಂದ ೧೯೪೫ರವರೆಗೂ ೧೨ ಆಂಧ್ರಮಹಾಸಭಾದ ಸಮಾವೇಶಗಳು ನಡೆದವು. ೧೯೪೪ರ ಬಮ್ಮಂ ಸಮಾವೇಶದಲ್ಲಿ ಹಿಂದೂ ಪುನರುತ್ಥಾನವಾದಿಗಳಿಂದ ಬಿಡಿಸಿಕೊಂಡ ಆಂಧ್ರಮಹಾಸಭಾ ಸಂಪೂರ್ಣ ರಾಜಕೀಯ ವೇದಿಕೆಯಾಗಿಯೇ ರೂಪುತಳೆಯಿತು. ಇದರೊಂದಿಗೆ ವಿದ್ಯಾರ್ಥಿಗಳ ವಂದೇ ಮಾತರಂ ಚಳುವಳಿ ಸ್ಟೇಟ್ ಕಾಂಗ್ರೆಸ್, ಕಾರ್ಮಿಕ ಚಳುವಳಿ, ಆಂಧ್ರಮಹಿಳಾಸಭಾ, ವರ್ತಕ ಚಳುವಳಿ, ಮಹಾರಾಷ್ಟ್ರ ಪರಿಷತ್ತು, ಕರ್ನಾಟಕ ಪರಿಷತ್ತು ಮುಂತಾದ ಸಂಘಟನೆಗಳೂ — ಪ್ರತ್ಯೇಕವಾಗಿ ಹಾಗೂ ಪೂರಕವಾಗಿ ಬೆಳೆದವು. ಮಹಿಳಾ ಸಭೆಗಳು ಸ್ತ್ರೀವಿದ್ಯೆ, ವಿಧವಾ ವಿವಾಹ, ಪರದಾ ನಿಷೇಧ, ವಿಚ್ಛೇದನ, ಆಸ್ತಿ

ಹಕ್ಕು ಮುಂತಾದ ಸಮಸ್ಯೆಗಳ ಕುರಿತು ಚರ್ಚಿಸಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಿದ್ದವು. ಪತ್ರಿಕೆಗಳೂ ಸಹ ಪ್ರಜಾಪ್ರಭುತ್ವ, ಸೆಕ್ಯುಲರಿಸಂ, ಮೂಢ ನಂಬಿಕೆ, ಮತಾಂಧತೆ, ಸಾಮ್ರಾಜ್ಯಶಾಹಿ ವಿರುದ್ಧ ಸಾಹಿತ್ಯ ಸೃಷ್ಟಿಸುತ್ತ ಸದ್ದಿಲ್ಲದೆ ತೆಲಂಗಾಣದ ಚಳುವಳಿಗೆ ಕಮ್ಯುನಿಸ್ಟ್ ಭಾವನೆಗಳ ಬೀಜ ಬಿತ್ತಿದವು. ಇವುಗಳ ಬೆನ್ನಿಗೇ ನಿಜಾಂ ಆಂಧ್ರ ಮಹಾಸಭಾ ಮತ್ತು ಕಮ್ಯೂನಿಸ್ಟ್ ಪಕ್ಷಗಳನ್ನು ನಿಷೇಧಿಸಿದನು. ಚಳುವಳಿನಿರತ ಜನಸಮುದಾಯದ ಮೇಲೆ ಉಗ್ರಕ್ರಮಗಳನ್ನು ಕೈಗೊಳ್ಳತೊಡಗಿದನು. ಅತ್ಯಧಿಕ ತೆರಿಗೆ ವಿರುದ್ಧ, ಲೆವಿನಿರ್ಬಂಧ, ಬಿಟ್ಟಿಚಾಕರಿ ನಿರ್ಮೂಲನೆ, ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಜನ ಅಲ್ಲಲ್ಲಿ ಸತ್ಯಾಗ್ರಹಗಳನ್ನು ತೀವ್ರಗೊಳಿಸುತ್ತಿದ್ದರು. ವಿದ್ಯಾರ್ಥಿಗಳು, ಕಮ್ಯೂನಿಷ್ಟರು, ಸ್ಟೇಟ್ ಕಾಂಗ್ರೆಸ್‌ನ ಸಹಸ್ರಾರು ಮಂದಿ ಈ ಹಂತದಲ್ಲಿ ಬಂಧನಕ್ಕೊಳಗಾದರು.

ರಜಾಕಾರರ ಸರ್ವಾಧಿಕಾರ, ನಿಜಾಮನ ನಿರಂಕುಶ ಆಡಳಿತದಿಂದ ರೋಚ್ಚಿಹೋಗಿದ್ದ ಜನ ಸುಸಂಘಟಿತ ಹೋರಾಟದ ಮನೋಭಾವನೆಯೊಂದಿಗೆ ಸಿದ್ಧವಾಗಿದ್ದ ೧೯೪೭ರ ನವೆಂಬರ್ ತಿಂಗಳದು. ಕಮ್ಯೂನಿಷ್ಟರು ಅದುವರೆವಿಗೂ ನಡೆಸಿದ್ದ ಹೋರಾಟಗಳಿಗಿಂತಲೂ ಭಿನ್ನವಾಗಿ ಪ್ರತ್ಯೇಕ ರಾಜಕೀಯ ವಿಮುಕ್ತಿಯ ಘೋಷಣೆಯೊಂದಿಗೆ ಸಶಸ್ತ್ರ ತೆಲಂಗಾಣ ರೈತಾಂಗ ಹೋರಾಟವನ್ನು ಪ್ರಾರಂಭಿಸಿದರು. ಚಳುವಳಿ ತೀವ್ರಗೊಳ್ಳುತ್ತಿದ್ದ ಆತಂಕದಿಂದ ನಿಜಾಂ ಇತ್ತೇಹಾದುಲ್ ಮುಸಲ್ಮಾನ್ ಎಂಬ ಸಂಘಟನೆಯನ್ನು ಸಶಸ್ತ್ರ ಪಡೆಗಳನ್ನಾಗಿ ರೂಪಿಸಲು ಮಿರ್ಜಾ ಇಸ್ಮಾಯಿಲ್ ಎಂಬ ಹೊಸ ಪ್ರಧಾನಿಗೆ ಆದೇಶವಿತ್ತನು. ಸ್ಟೆನ್‌ಗನ್, ಭಲ್ಲೆ, ತುಪಾಕಿ, ಕತ್ತಿಗಳಿಂದ ಮಿರ್ಜಾ "ರಜಾಕಾರರ" ರಾಕ್ಷಸೀ ತುಕಡಿಗಳನ್ನು ನಿರ್ಮಿಸಿದನು. ರಜಾಕಾರರು ನಿಜಾಮನ ಅಂಕುಶ ಮೀರಿ ದಾಳಿ, ಲೂಟಿ, ಮಾನಭಂಗ, ಬೆಂಕಿಸ್ಪರ್ಶ, ಕೊಲೆಗಳಂತಹ ವಿಧ್ವಂಸಕ ಕೃತ್ಯಗಳಿಗಿಳಿದರು. ಇಡೀ ನಾಗರಿಕ ಜಗತ್ತೇ ತಲ್ಲಣಗೊಳ್ಳುವಂತಹ ನರಮೇಧಗಳು ನಡೆದುಹೋದವು. ಮಾಚಿರೆಡ್ಡಿ ಪಲ್ಲಿಯಲ್ಲಿ ರಜಾಕಾರರಿಂದ ಅನೇಕ ಸ್ತ್ರೀಯರು ಅತ್ಯಾಚಾರಕ್ಕೊಳಗಾದರು. (ಈ ಕುರಿತು ಗಾಂಧೀಜಿ ಸರೋಜಿನಿ ನಾಯ್ಡು ಅವರ ಮಗಳಾದ ಪದ್ಮಜಾ ನಾಯ್ಡು ಅವರ ನೇತೃತ್ವದಲ್ಲಿ ತನಿಖಾ ಆಯೋಗ ನೇಮಿಸಿ ವರದಿಯನ್ನು ಸಹ ತರಿಸಿಕೊಂಡರು.)

ಆದಾಗಲೇ ತೀವ್ರಗತಿಯಲ್ಲಿ ಕಾರ್ಯೋನ್ಮುಖವಾಗಿದ್ದ ಕಮ್ಯೂನಿಷ್ಟ್ ಪಕ್ಷವು ರೈತರನ್ನು ಗೆರಿಲ್ಲಾಪಡೆ, ಗ್ರಾಮರಕ್ಷಣಾಪಡೆ ಮತ್ತು ಮಿಲಿಟರಿ ಹಾದಿಗಳನ್ನು ಧ್ವಂಸ ಮಾಡುವ ರಣಕಾರರ ಪಡೆಗಳನ್ನಾಗಿ ರಚಿಸಿ ಅವರಿಗೆ ನಿವೃತ್ತಸೈನಿಕರಿಂದ ತರಬೇತಿ ಕೊಡಿಸಿ ಕಾರ್ಯರಂಗಕ್ಕಿಳಿಸಿತು. ರಜಾಕಾರರ ಮತ್ತು ಪೋಲೀಸರ ಆಯುಧಗಳನ್ನೇ ವಶಪಡಿಸಿಕೊಂಡ ವಿಪ್ಲವ ಪ್ರಜಾಸೈನ್ಯ ನಿಜಾಮನ ಬೆಂಬಲಿಗರಾದ ಜಾಗೀರುದಾರರು, ಜಮೀನುದಾರರು, ದೇಶಮುಖರು, ದೇಶಪಾಂಡೆಗಳನ್ನು ಹಳ್ಳಿಗಳಿಂದಲೇ ಹೊಡೆದೋಡಿಸಿದರು. ಅತಿಕ್ರೂರ ಭೂಮಾಲೀಕರನ್ನಂತೂ ನಿರ್ದಾಕ್ಷಿಣ್ಯವಾಗಿ ಕೊಲೆ ಮಾಡಲಾಯಿತು. ನಲ್ಲಗೊಂಡ, ವಾರಂಗಲ್, ಖಮ್ಮಂ, ಕರೀಂನಗರ, ಅದಿಲಾಬಾದ್, ಮೇಡಕ್‌ನ ೪೦೦೦ ಹಳ್ಳಿಗಳಲ್ಲಿ ಫ್ಯೂಡಲ್ ವ್ಯವಸ್ಥೆಯನ್ನು ನಾಶಗೊಳಿಸಿ ಗ್ರಾಮಸಮಿತಿ, ಪ್ರಜಾಕೋರ್ಟುಗಳನ್ನು ಸ್ಥಾಪಿಸಲಾಯಿತು. ಸುಮಾರು ಹತ್ತುಲಕ್ಷ ಎಕರೆಯನ್ನೂ ಭೂರಹಿತ ಬಡವರಿಗೆ ಹಂಚಲಾಯಿತು. ವಲ್ಲಭಬಾಯಿ ಪಟೇಲರ ಅಮಾನುಷ ಪೋಲೀಸ್ ಕಾರ್ಯಾಚರಣೆ ನಡೆಯುವವರೆಗೂ, ಅಂದರೆ ಒಂದು ವರ್ಷಕ್ಕೂ ಹೆಚ್ಚು ಕಾಲ ಕಮ್ಯೂನಿಷ್ಟ್ ಗೆರಿಲ್ಲಾ ಪಡೆಗಳ ಅದ್ವಿತೀಯ ಸಶಸ್ತ್ರ ಹೋರಾಟ ಚೈತ್ರಯಾತ್ರೆಯಾಗಿ ಮುಂದುವರೆಯಿತು. ಹೆಚ್ಚೂ ಕಡಿಮೆ ನಿಜಾಮನ ವಿರುದ್ಧ ತೆಲಂಗಾಣ ರೈತಾಂಗ ಜಯಗಳಿಸಿ ತನ್ನ ಆಡಳಿತ ಸ್ಥಾಪಿಸಿತ್ತು ಎಂದೇ ಹೇಳಬಹುದು.

ಕೃಷಿಕ ಕಮ್ಯೂನಿಷ್ಟ್ ಚಳವಳಿಯನ್ನು ಕಿಂಚಿತ್ತೂ ಗೌರವಿಸದ ವಲ್ಲಭಬಾಯಿ ಪಟೇಲ್ ನಿಜಾಮನೊಂದಿಗೆ ಒಡಂಬಡಿಕೆಯೊಂದನ್ನು ಈ ಹಿಂದೆಯೇ ಮಾಡಿಕೊಂಡಿದ್ದರು. ನಿಜಾಂ ೧೯೪೮ರಲ್ಲಿ ತನ್ನ ಸತ್ತೆಯನ್ನು ಸ್ವತಂತ್ರವಾಗಿಯೇ ಉಳಿಸಿಕೊಳ್ಳಲೋಸುಗ ಯುಎನ್‌ಓಗೆ ದೂರನ್ನು ಒಯ್ದಾಗ ಭಾರತ ಸರ್ಕಾರ ಪೋಲೀಸ್ ಕಾರ್ಯಾಚರಣೆಯ ಅನಿವಾರ್ಯ ನಿರ್ಧಾರ ಮಾಡಿತು. ೧೯೪೮ರ ಸೆಪ್ಟೆಂಬರ್‌ನಲ್ಲಿ ಬೀದರ್ ಮತ್ತು ವಿಜಯವಾಡದ ಎರಡು ದಿಕ್ಕುಗಳಿಂದ ಭಾರತದ ಮಿಲಿಟರಿ ಪಡೆಗಳು ಆಕ್ರಮಣ ನಡೆಸಿ ನಾಲ್ಕು ದಿನಗಳ ಕಾಲ ಅಲ್ಲಲ್ಲಿ ನಿಜಾಮನ ಸೈನ್ಯವನ್ನೆದುರಿಸಿ, ೧೭ರಂದು ಹೈದರಾಬಾದು ಸಂಸ್ಥಾನವನ್ನು ವಶಪಡಿಸಿಕೊಂಡಿತು. ಡಕ್ಕನ್ ರೇಡಿಯೋದಲ್ಲಿ ತನ್ನ ಸೋಲನ್ನು ಒಪ್ಪಿಕೊಂಡ ನಿಜಾಂ ೨೨೪ ವರ್ಷಗಳ ಅಫ್ಜಲ್ ಖಾನ್ ವಂಶದ ರಾಜ್ಯಭಾರಕ್ಕೆ ಚರಮಗೀತೆ ಹಾಡಿದನು. ಇಲ್ಲಿಗೆ ತೆಲಂಗಾಣ ರೈತರ ಹೋರಾಟ ಮುಗಿಯಿತೆಂದೇ ಅನೇಕರು ಭಾವಿಸುವರಾದರೂ - ತೆಲಂಗಾಣದ ಉತ್ತರಾರ್ಧ ಹೋರಾಟ

ಈ ಘಟ್ಟದಿಂದಾಚೆಗೇನೆ ಇದ್ದು – ಅತ್ಯಂತ ಕಷ್ಟಕರ ರೀತಿಯಲ್ಲಿ ಮುಂದುವರೆಯಿತು.

ನಿಜಾಂ ಶರಣಾಗತಿಯ ನಂತರ ಆಗಿನ ಕೇಂದ್ರ ಗೃಹಮಂತ್ರಿ ಪಟೇಲರ ಕೆಂಗಣ್ಣು ಕಮ್ಯುನಿಷ್ಟರ ಮೇಲೆ ಹರಿಯಿತು. ಕಮ್ಯುನಿಷ್ಟ ಚಳವಳಿಯನ್ನು ದಮನ ಮಾಡುವ ಭರದಲ್ಲಿ ಸೈನ್ಯವನ್ನು ಸ್ವಾಗತಿಸಿದ್ದ ಪ್ರಜೆಗಳ ಮೇಲೆಯೇ ಮಿಲಿಟರಿಗಳು ದಾಳಿ ನಡೆಸಿದವು, ಲಜ್ಜೆಗೇಡಿ ಸ್ವತಂತ್ರ ಭಾರತದ ಸೈನ್ಯ ಯಾವ ರಜಾಕಾರರಿಗೂ ಕಡಿಮೆಯಿಲ್ಲದಂತೆ ೨ ವರ್ಷಗಳಿಗೂ ಮಿಕ್ಕಿ ಅಮಾಯಕ ರೈತರನ್ನು ಭೇಟಿಯಾಡಿತು. ಕಂಡಕಂಡಲ್ಲಿ ಅತ್ಯಾಚಾರ, ಸುಲಿಗೆ, ಚಿತ್ರಹಿಂಸೆಗಳ ಭೀಭತ್ಸ ದಮನ ಕಾಂಡವನ್ನೇ ಪುನರಾರಂಭಿಸಿತು. ಹಳ್ಳಿಗಳಿಂದ ಓಡಿ ಹೋಗಿದ್ದ ಭೂಮಾಲಿಕರು ಸೈನಿಕರ ನೆರವಿನೊಂದಿಗೆ ಪುನಃ ಕಾಂಗ್ರೆಸ್ ಟೋಪಿ ಧರಿಸಿ ಅದೇ ಹಳ್ಳಿಗಳಿಗೆ ವಾಪಸ್ಸಾಗಿ ತಮ್ಮ ಪಾಳೆಯಗಳನ್ನು ಬಲಪಡಿಸಿಕೊಂ



ಡರು. ಭೂಮಾಲೀಕರು ಮತ್ತು ರಜಾಕಾರರೊಂದಿಗೆ ಹೋರಾಡಿದ್ದ ಕಮ್ಯುನಿಷ್ಟ ಗೆರಿಲ್ಲಾ ಪಡೆಗಳು ಅಷ್ಟೇ ದೀರ್ಘಕಾಲ ಮಿಲಿಟರಿ ಪಡೆಗಳೊಂದಿಗೂ ಹೋರಾಡಬೇಕಾಯಿತು. ವಾಸ್ತವ ಸಂಗತಿಯೆಂದರೆ, ಆದಾಗಲೇ - ದುರ್ಬಲನಾಗಿದ್ದ ಹೈದರಾಬಾದು ನಿಜಾಮನಿಂದ ಸಂಸ್ಥಾನವನ್ನೂ ವಶಪಡಿಸಿಕೊಂಡು ಭಾರತದ ಒಕ್ಕೂಟಕ್ಕೆ ಸೇರಿಸುವ ನೆಪದಲ್ಲಿ ನೆಹರು. ಪಟೇಲ್ ರಾಜಾಜಿಯವರಂತಹ ಮೇಲ್ಜಾತಿಯ ಕಾಂಗ್ರೆಸ್ ಧುರೀಣರು ೫೦,೦೦೦ದ ಸೈನ್ಯವನ್ನು ಪ್ರಬಲರಾಗಿದ್ದ ಕಮ್ಯುನಿಷ್ಟರನ್ನು ಆ ಭಾಗದಲ್ಲಿ ನಿರ್ನಾಮಗೊಳಿಸಲೆಂದೇ ಕಳುಹಿಸಿದ್ದರೆನ್ನುವುದು.

ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿದ್ದ ಭಾರತದ ೫೦,೦೦೦ ಸಂಖ್ಯೆಯ ಪೊಲೀಸು, ಅರೆಮಿಲಿಟರಿಗಳನ್ನೆದುರಿಸಲಾಗದ — ನಾಡಬಂದೂಕು, ಕವಣೆ, ದೊಣ್ಣೆಗಳ ಕೃಷಿಕ ಗೆರಿಲ್ಲಾ ಪಡೆಗಳು ಸಹಜವಾಗಿಯೇ ಆಮರಾಬಾದು, ನಲ್ಲಮಲೈ, ಮುಲುಗು ಅರಣ್ಯಗಳೊಳಕ್ಕೆ ರಕ್ಷಣೆಗಾಗಿ ತಲೆತಪ್ಪಿಸಿಕೊಂಡು ಹೋದವು. ಈ ಹೋರಾಟದಲ್ಲಿ ಅನೇಕ ಕಾರ್ಯಕರ್ತರು ತಮ್ಮ ಪ್ರಾಣಗಳನ್ನು ಕಳಕೊಂಡರು. ಪಕ್ಷವೂ ನಿಸ್ಸಹಾಯಕವಾಗಿತ್ತು. ನಿಜಾಮನ ವಿರುದ್ಧದ ಹೋರಾಟದಲ್ಲಿ - ತಾವಾಗಿಯೇ ಸಹಾಯ ನೀಡಿದ ಮಧ್ಯಮ ವರ್ಗದ ರೈತರು, ಧನಿಕ ವರ್ತಕರು ಸಹ ತಾವಾಗಿಯೇ — ತಮ್ಮ ವರ್ಗ ಆಶಯಗಳು ಈಡೇರಿದೊಡನೆ ಗೆರಿಲ್ಲಾಗಳಿಂದ ದೂರ ಸರಿದುಬಿಟ್ಟರು.

ಚಳವಳಿ ದುರ್ಬಲವಾಗುತ್ತ. ಭಾರತದ ಮಿಲಿಟರಿ ಅವ್ಯಾಹತವಾಗಿ ಮುಂದುವರೆಯುತ್ತಿರುವುದನ್ನೂ ಗಮನಿಸಿ ಪುನರ್ರಚಿತವಾದ ಕಮ್ಯುನಿಷ್ಟ ಪಕ್ಷದ ಪಾಲಿಟ್‌ಬ್ಯೂರೋ ಹೋರಾಟದ ಬಗ್ಗೆ ಸಾಕಷ್ಟು ಸುದೀರ್ಘ ಚರ್ಚೆ ನಡೆಸಿ ಚಳವಳಿಯನ್ನು ಹಿಂತೆಗೆದುಕೊಳ್ಳಲು ಗೆರಿಲ್ಲಾ ರೈತರ ಇಚ್ಛೆಗೆ ವಿರುದ್ಧವಾಗಿ ತೀರ್ಮಾನಿಸಿತು. ಆನಂತರ ಭಾರತದ ಹಿರಿಯ ಕಮ್ಯುನಿಷ್ಟ ನಾಯಕರನೇಕರು ರೈತಾಂಗವನ್ನೂ ಹೋರಾಟದ ಪಥದಿಂದ ಹಿಂದೆ ಸರಿಯುವಂತೆ ಮಾಡಲು ತೆಲಂಗಾಣಕ್ಕೆ ಧಾವಿಸಿ ಅವರ ಮನವೊಲಿಸಬೇಕಾಯಿತು.

ತೆಲಂಗಾಣ ರೈತರ ಸಾಯುಧ ಹೋರಾಟದಿಂದಾಗಿಯೇ ಕ್ರಾಂತಿಕಾರಕ ಗೇಣಿಹಕ್ಕಿನ ಕಾನೂನಾದ ಹೈದರಾಬಾದ್ ಟೆನನ್ಸಿ ಆಂಡ್ ಅಗ್ರಿಕಲ್ಚರಲ್ ಆಕ್ಟ್ ೧೯೫೦ ಜಾರಿಗೆ ಬಂತು. ಪುನರ್ ಹಂಚಿತವಾದ ಭೂಮಿಗಳು ಆಯಾ ರೈತರಿಗೇ ದೊರಕಿದವು. ಅತ್ಯಂತ ಮುಖ್ಯವಾಗಿ ಬಿಟ್ಟಿ ಚಾಕರಿ ಪದ್ಧತಿ ಮತ್ತು ಜಾಗೀರುದಾರಿ ವ್ಯವಸ್ಥೆಗಳು ರದ್ದಾದವು. ಇದರಿಂದ ತೆಲಂಗಾಣದ ಮಹಿಳೆಯ ಮೇಲಿನ ಸಾಂಸ್ಕೃತಿಕ ನಿರ್ಬಂಧಗಳನೇಕವು ತಂತಾನೇ ಸಡಿಲುಗೊಂಡವು. ಹೋರಾಟದಲ್ಲಿ ವಿಧವೆಯಾದವರಿಗೆ ಜಮೀನುಗಳನ್ನು ನೀಡಲಾಯಿತು. ಮಧ್ಯಮ ವರ್ಗದ ಮಹಿಳೆ ನಾಲ್ಕು ಗೋಡೆಗಳ ಆಚೆ ಬಂದು ನಿರಾಳವಾಗಿ ಉಸಿರಾಡುವಂತಾಯಿತು.


ತೆಲಂಗಾಣ ಚಳವಳಿಯಲ್ಲಿ ಎಲ್ಲ ತರಹದ ಮಹಿಳೆಯರೂ ಇದ್ದರು. ರೈತ ಕುಟುಂಬದಿಂದ ಬಂದವರು, ಮಧ್ಯಮ ವರ್ಗದಿಂದ (ಮನೆಯ ಅಣ್ಣನೋ ತಮ್ಮನೋ ಅಥವ ಗಂಡನೋ ಚಳವಳಿಯಲ್ಲಿದ್ದುದರಿಂದ ಬಂದ ಮಹಿಳೆಯರ ಸಂಖ್ಯೆಯೇ ಹೆಚ್ಚು) ಅನಾಥಾಶ್ರಮಗಳಲ್ಲಿ ಬೆಳೆದವರು, ಗಂಡನ ಹಿಂಸೆಗಳನ್ನು ತಾಳಲಾರದೆ ಬಂದವರು, ಜಮೀನ್ದಾರರ ಕುಟುಂಬಗಳಿಂದ

ಬಂದ ವಿದ್ಯಾವಂತೆಯರು (ತಾತ್ವಿಕ ಆಕರ್ಷಣೆಗೆ ಸಿಕ್ಕಿದವರು) ದೇವದಾಸೀ ಮತ್ತು ದಾಸೀ ಕುಟುಂಬಗಳಿಂದ. ಹೀಗೆ ನಾನಾ ಹಿನ್ನೆಲೆಗಳಿಂದ, ನಾಲ್ಕು ಗೋಡೆಗಳ ನಡುವೆ ಭಿನ್ನ ಭಿನ್ನ ಪರಿಸರಗಳಲ್ಲಿ — ಹೆಣ್ಣೆಂಬ ಒಂದೇ ಕಾರಣದಿಂದ ತುಳಿಯಲ್ಪಟ್ಟಿದ್ದವರು ಒಮ್ಮೆಲೇ ಚರಿತ್ರೆಯ ನಿರ್ಮಾತೃಗಳಾಗಿ ಚಳವಳಿಯ ಮುಖ್ಯ ಪ್ರವಾಹಕ್ಕೆ ಧುಮಿಕಿದರು.

ಕೋಟಾ ವೆಂಕಟರೆಡ್ಡಿ ಎನ್ನುವವರು ತೆಲಂಗಾಣದ ಬಗ್ಗೆ ಬರೆಯುತ್ತ ಮೊದಲ ಬಾರಿಗೆ ಚರಿತ್ರೆಯಲ್ಲಿ ಹೆಣ್ಣು — ಗಂಡಿನ ನಡುವೆ ಸಮಾನತೆ ಸಾಧ್ಯವಾಯಿತು- ಎಂದಿದ್ದಾರೆ. ಆದರೆ ಚಳವಳಿಯ ಹಿರಿಯ ನಾಯಕರಾಗಿದ್ದ ಪಿ. ಸುಂದರಯ್ಯನವರು ಮಾತ್ರ ಚಳವಳಿಯಿಂದ ದೊರೆಯಬಹುದಾಗಿದ್ದ ಅನೇಕ ಉತ್ತಮ ಅವಗಾಹನೆಗಳೂ ಸಹ ಪಿತೃಪ್ರಧಾನ ಭಾವಗಳಡಿ ಸರಿಯಾದ ರೀತಿಯಲ್ಲಿ ಚರ್ಚೆಗೇ ಬರಲಿಲ್ಲ ಎಂದಿದ್ದಾರೆ. ಹೆಣ್ಣೆಂದರೇನೆ ಸಮಸ್ಯೆ ಎಂಬ ಗೊಡ್ಡು ಭಾವನೆಯೇ ಚಳವಳಿಯಲ್ಲೂ ಇತ್ತು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪಿ. ಸುಂದರಯ್ಯನವರು "ತೆಲಂಗಾಣ ಹೋರಾಟ: ಗುಣ ಪಾಠಗಳು" ಎಂಬ ತಮ್ಮ ಪುಸ್ತಕದಲ್ಲಿ ನರ್ಸಮ್ಮ ಎಂಬಾಕೆ ಕಮ್ಯೂನಿಸ್ಟ್ ಪಕ್ಷಕ್ಕೆ ೧೯೫೦ ರಲ್ಲಿ ಬರೆದ ಪತ್ರವೊಂದನ್ನು ಇಡಿಯಾಗಿ ಪ್ರಕಟಿಸಿದ್ದಾರೆ. ಪತ್ರದಲ್ಲಿ ನರ್ಸಮ್ಮ ಪಕ್ಷ ಮತ್ತು ದಳದ ಸದಸ್ಯರು ಹೆಂಗಸರನ್ನು ಇನ್ನೂ ಹಳೇ ಭಾವದಿಂದಲೇ ನೋಡುತ್ತಿರುವುದನ್ನು ಪ್ರಸ್ತಾಪಿಸಿ ನಾವು ಕೊಂಚ ಸ್ವೇಚ್ಛೆ ತೋರಿಸಿದರೂ ಸಾಕು, ನಮ್ಮನ್ನು ಅನುಮಾನದಿಂದ ನೋಡಲಾಗುತ್ತದೆ. ಎಂದು ನೊಂದು ಮಾತನಾಡಿದ್ದಾಳೆ. ಪಕ್ಷದ ತಪ್ಪು ನಿಲುವುಗಳನ್ನು ಎತ್ತಿ ತೋರಿಸುತ್ತಾ "ಶತ್ರುವಿನ ಮೇಲೆ ನಡೆಸುವ ಗೆರಿಲ್ಲಾ ದಾಳಿಗಳಲ್ಲಿ ಸ್ತ್ರೀಯರಿಗೇಕೆ ನೀವು ಭಾಗವಹಿಸುವುದಕ್ಕೆ ಬಿಡುವುದಿಲ್ಲ" ಎಂದು ಕೆರಳಿ ಪ್ರಶ್ನಿಸಿದ್ದಾಳೆ.

ಸ್ತ್ರೀಯರ ಸಮರೋತ್ಸಾಹವನ್ನು ಒಂದು ಕಡೆ ಹೀಗೆ ತಣ್ಣಗಾಗಿಸುತ್ತ ಮತ್ತೊಂದು ಕಡೆ ಚರಿತ್ರೆಯ ಸೃಷ್ಟಿಕರ್ತರು ಅವರನ್ನು ಕೆಲಸವಿಭಜನೆಯಲ್ಲಿ "ಸ್ತ್ರೀಯರು ಕಲ್ಲುಗಳನ್ನು ನೀಡುತ್ತಿದ್ದರೆ ಗಂಡಸರು ಕವಣೆ ಬೀರುತ್ತಿದ್ದರು" ಎಂಬ ಪುರುಷ ಕಣ್ಣಿನ ಮೂಲಕವೇ ಭೇದವನ್ನೆಣಿಸಿದೆ. ರಾಜೇಶ್ವರ ರಾವು ಸಹ ಪಾರ್ಟಿ ಸ್ತ್ರೀಶಕ್ತಿ ಸಂಘಟನೆಯ ಮಹತ್ವಕ್ಕೆ ಪ್ರತ್ಯೇಕ ಗಮನವನ್ನು ನೀಡಿ ಯಾವ ಕಾರ್ಯಕ್ರಮವನ್ನೂ ಹಾಕಲಿಲ್ಲವೆಂದೇ ಅಭಿಪ್ರಾಯಪಟ್ಟಿದ್ದಾರೆ.

ತೆಲಂಗಾಣದ ಬಗ್ಗೆ ಬಂದ ಪುಸ್ತಕಗಳಲ್ಲೆಲ್ಲ ಪಿ. ಸುಂದರಯ್ಯನವರದೇ ಅತ್ಯುತ್ತಮ ಎನ್ನುವಂತಿದ್ದರೂ, ಸ್ತ್ರೀ ಕುರಿತ ಹೋರಾಟ ಚರಿತ್ರೆಯ ಅಮೂಲ್ಯ ಮತ್ತು ಅಧ್ಯಯನ ಯೋಗ್ಯ ವಿವರಗಳನ್ನು ಲೇಖಕರು ಕಲೆಹಾಕಿರುವರಾದರೂ – ಸ್ತ್ರೀ ಬಗ್ಗೆ ಅವಳ ಸ್ವಭಾವದಲ್ಲೂ ಮತ್ತು ಕ್ರಾಂತಿಕಾರೀ ಸಂಘಟನೆಗಳ ಪುರುಷ ವರ್ಗದ ಸ್ವಭಾವದಲ್ಲೂ ಮೂಲಭೂತ ಬದಲಾವಣೆ ಆಗಬೇಕೆಂಬ ಒಳಸತ್ಯಗಳನ್ನವರು ಕಾಣಿಸಿಕೊಟ್ಟಿಲ್ಲವೆಂದು ಸ್ತ್ರೀ ಶಕ್ತಿ ಸಂಘಟನೆ ಆ ಪುಸ್ತಕದ ಬಹುಮುಖ್ಯ ಲೋಪದತ್ತ ಗಮನ ಸೆಳೆಯುತ್ತದೆ. ಪಶ್ಚಿಮ ಬಂಗಾಳದ ರೇಣು ಚಕ್ರವರ್ತಿ ಎಂಬ ಲೇಖಕಿ ಬರೆದ "ಕಮ್ಯೂ



ಚಿಟ್ಯಾಲ ಐಲಮ್ಮ - ಪಾಲಕುರ್ತಿ

ನಿಸ್ಟ್ ಇನ್ ದಿ ಇಂಡಿಯನ್ ವುಮೆನ್ಸ್ ಮೂವ್‌ಮೆಂಟ್" ಪುಸ್ತಕದಲ್ಲೂ ತೆಲಂಗಾಣ ಮಹಿಳೆಯ ಬಗ್ಗೆ ಇಂತಹ ಲೋಪಗಳೇ ಇರುವುದನ್ನು ಸ್ತ್ರೀ ಶಕ್ತಿ ಸಂಘಟನೆ ಗಮನಿಸುತ್ತ ತಮ್ಮ ವಿಶಿಷ್ಟ ಪ್ರಯತ್ನದ ಸೂಕ್ಷ್ಮ ಸೀಮೆಗಳನ್ನು ಖಚಿತವಾಗಿ ಗುರುತಿಸುತ್ತಾರೆ.

ಹೋರಾಟಗಾರ್ತಿಯರೆಲ್ಲರ ಸಂದರ್ಶನದಲ್ಲೂ ಹೆಣ್ಣು - ಗಂಡಿನ ಸಂಬಂಧದ ಸಮಸ್ಯೆ, ವಿವಾಹ, ಮಕ್ಕಳು ಮತ್ತು ಚಳವಳಿಗೆ ದುಮುಕಿದ್ದರಿಂದ ಹಿನ್ನೆಲೆಯ ಬಗ್ಗೆ ಸಾಕಷ್ಟು ಮಾತುಗಳು ಕೇಳಿ ಬರುತ್ತವೆಯೇ ಹೊರತು ಪಾರ್ಟಿಯ ಮೀಟಿಂಗು, ನಿರ್ಣಯಗಳು ಹೋರಾಟದ ಪ್ಲಾನುಗಳು, ಸಮಸ್ಯೆ ಕುರಿತು ಚರ್ಚೆ ನಡೆಸಿದ್ದು ಮತ್ತಿತ್ಯಾದಿಗಳ ಬಗ್ಗೆ

ಯಾರಿಂದಲೂ ಮಾತು ಕೇಳಿಬರುವುದಿಲ್ಲ. ಅಂದರೆ ತೆಲಂಗಾಣದ ಹೋರಾಟದಲ್ಲಿ ಮಹಿಳೆ ರಾಜಕೀಯ ಅಸ್ಪೃಶ್ಯತೆಗೆ ಈಡಾಗಿದ್ದಳು ಎಂಬ ಮುಖ್ಯ ಸತ್ಯವೊಂದನ್ನು ಮೇಲ್ನೋಟಕ್ಕೇ ನಾವು ಕಾಣಬಹುದಾಗಿದೆ. ಈ ಸತ್ಯ ಎಷ್ಟರ ಪ್ರಮಾಣದ್ದು, ಯಾವ ಸ್ವರೂಪದ್ದು ಎಂದು ಖಚಿತವಾದ ಮಾತುಗಳಲ್ಲಿ ಹೇಳಲಾಗುವುದಿಲ್ಲ. ಯಾಕೆಂದರೆ ಈ ಕುರಿತು ಸಂದರ್ಶನ ನಡೆಸಿದವರೂ ಸಹ ಪ್ರಶ್ನೆ ನೇರವಾಗಿ ಕೇಳಿರಲಿಲ್ಲವಾಗಿ ಹೋರಾಟಗಾರ್ತಿಯರ ಉತ್ತರ ಅಥವ ಚಳವಳಿಯಲ್ಲಿನ ತಮ್ಮ ಪಾತ್ರ ನಿರೂಪಣೆಯು ಸಹ ಆ ದೃಷ್ಟಿಯಿಂದ ಬಂದಿಲ್ಲದೆಯೂ ಇರಬಹುದು. ಆಕಸ್ಮಾತ್ ಚಳವಳಿಯ ಮೂಲಕ ರಾಜಕೀಯ ಅಧಿಕಾರ ಲಭಿಸಿದ್ದಿದ್ದರೆ, ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಹಿಳೆಯರನೇಕರಿಗೆ ದೊರೆಯುತ್ತಿದ್ದ ರಾಜಕೀಯ ಹೊಣೆಗಾರಿಕೆಯ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. (ಆನಂತರವೂ - ಪಕ್ಷದ ರಾಜಕಾರಣದಲ್ಲಿ – ಹೋರಾಡಿದ ಕೆಲವು ಮಹಿಳೆಯರು ಮುಂದುವರೆದಂತಹ ಉದಾಹರಣೆಗಳೂ ಇವೆ.)

ಕ್ರಾಂತಿಕಾರೀ ಕಾರ್ಯಕ್ರಮಗಳಲ್ಲಿ ಮಹಿಳೆಯ ಸ್ಥಾನ ಮತ್ತು ಪುರುಷವರ್ಗದೊಂದಿಗಿನ ಆಕೆಯ ಸಂಬಂಧದ ಸ್ವರೂಪಗಳನ್ನು ನಿರ್ಧರಿಸುವಲ್ಲಿ ಪುರುಷ ಪ್ರಧಾನ ಮನಸ್ಸಿನ ಸಾಂಪ್ರದಾಯಿಕ ಆಲೋಚನೆಗಳು ಬೆರೆತುಬಿಟ್ಟಾಗ ಉಂಟಾಗುವ ಸೂಕ್ಷ್ಮ ಸಂದಿಗ್ಧಗಳಿಗೆ ತೆಲಂಗಾಣ ಹೋರಾಟದ ಅಧ್ಯಯನ ಒಂದು ಉತ್ತಮ ಉದಾಹರಣೆಯಾಗಬಲ್ಲದು. ಈ ಹೇಳಿಕೆಗೆ ಪೂರಕವಾಗಬಲ್ಲಂತಹ ತೆಲಂಗಾಣ ಸ್ತ್ರೀಯ ಅನುಭವ ಮತ್ತು ಮಾತುಗಳತ್ತ ನಾವು ಗಮನ ಹರಿಸಬಹುದಾಗಿದೆ.

ಹೋರಾಟದಲ್ಲಿನ ಎಷ್ಟೋ ಸಂತತಿಗಳು ನಮಗೇ ತಿಳಿಯುತ್ತಿರಲಿಲ್ಲ ಎನ್ನುತ್ತಲೇ ಪ್ರತಿಯೊಬ್ಬರೂ ತಮ್ಮ ತಮ್ಮ ಅನುಭವ, ಸಾಹಸ ಮತ್ತು ನೋವುಗಳನ್ನು ದೀರ್ಘವಾಗಿಯೇ ವಿವರಿಸಿದ್ದಾರೆ. ಸುಶಿಕ್ಷಿತ ಮತ್ತು ಮಧ್ಯಮ ವರ್ಗದಿಂದ - ಹೋರಾಟಕ್ಕೆ ಬಂದವರು ಸಹಜವಾಗಿಯೇ ಶಿಷ್ಟ ಭಾಷೆಯಲ್ಲಿ ಮಾತನಾಡಿದ್ದರೆ, ಹಳ್ಳಿಗಾಡಿನ ಸ್ತ್ರೀಯರು ತೆಲಂಗಾಣದ ದೇಸೀ ಭಾಷೆಯಲ್ಲಿ ನಿರೂಪಣೆ ನೀಡಿದ್ದಾರೆ. ಪಾಲಕುರ್ತಿಯ ಐಲಮ್ಮ, ಕಮಲಮ್ಮ, ದಾಯನಿ ಪ್ರಿಯಂವದ, ಪ್ರಮೀಲಾತಾಯಿ, ಸ್ವರಾಜ್ಯಂ, ಅಚ್ಚಮಾಂಬ,

ದೀರ್ಘ ಕಾಲದ ಚಳುವಳಿಯ ನಂತರವೂ ತೆಲಂಗಾಣದ ಮಹಿಳೆಯ ಬದುಕಿನಲ್ಲಿ ನಿರೀಕ್ಷಿತ ಬದಲಾವಣೆಗಳು ಆಗಲಿಲ್ಲ. ಕಮೂನಿಷ್ಟರ ಆದರ್ಶದ ಸಮಸಮಾಜದ ಕರೆಯ ಕಲ್ಪನೆಯಿಂದ ಆಕರ್ಷಿತಳಾಗಿ – ಸಾವು ಇಲ್ಲವೇ ಸಂಪೂರ್ಣ ವಿಮೋಚನೆ ಎಂಬ ನಂಬಿಕೆಯೊಂದಿಗೆ ಚಳುವಳಿಗೆ ಇಳಿದ ಮಹಿಳೆಯ ಕನಸುಗಳು ಕೆಲವು ಕನಸುಗಳಾಗಿಯೇ ಉಳಿದ ನಿರಾಶೆಯಲ್ಲಿ ಅತ್ಯಂತ ಗಟ್ಟಿ ಮಾತುಗಳನ್ನು ಆಕೆ ಆಡಿದ್ದಾಳೆ. ತನಗೆ ಗೊತ್ತಿಲ್ಲದಂತೆಯೇ – ಆಲೋಚನೆಗೆ ಹೊಸ ದಿಕ್ಕನ್ನು ಸೂಚಿಸಿದ್ದಾಳೆ ಈ ದೃಷ್ಟಿಯಿಂದ ಸ್ತ್ರೀ ಶಕ್ತಿ ಸಂಘಟನೆಯ ಪ್ರಯತ್ನವಂತೂ ತುಂಬಾ ಮೌಲಿಕವಾದುದಾಗಿದೆ.

ತಮ್ಮ ಕುರಿತು ಪ್ರಾರಂಭದಲ್ಲಿ ಹೇಳಿಕೊಂಡಿರುವ ಸ್ತ್ರೀ ಶಕ್ತಿ ಸಂಘಟನೆಯ ಸದಸ್ಯೆಯರು 'ಹೋರಾಟ ಮಾರ್ಗದಲ್ಲಿನ ಬೊಲಿವಿಯಾ ಮಹಿಳೆಯರು' ಎಂಬ ಪುಸ್ತಕದಿಂದ ಪ್ರೇರಿತರಾಗಿ ತಾವು ಈ ಪ್ರಯತ್ನ ನಡೆಸಿದ್ದಾಗಿ ತಿಳಿಸಿದ್ದಾರೆ, ಪ್ರಾರಂಭದಲ್ಲಿ ತೆಲಂಗಾಣ ಚಳುವಳಿ - ಅತ್ಯಂತ ಬಲಯುತವಾಗಿದ್ದ ನಲ್ಲಗೊಂಡು, ವರಂಗಲ್ ಮತ್ತು ಕರೀಂನಗರದ ಹತ್ತಾರು ಊರುಗಳಲ್ಲಿ ಸುತ್ತಿ ವೃದ್ಧೆಯರಾಗಿರುವ - ತೆಲಂಗಾಣ ವೀರವನಿತೆಯರನ್ನು ಸಂದರ್ಶಿಸಿ, ಟೇಪ್ ಮಾಡಿಕೊಂಡ ಅವರ ಮಾತುಗಳೊಂದಿಗೇ ತಮ್ಮ ಆಲೋಚನೆಯನ್ನು ಪಕ್ಕ ಪಕ್ಕದಲ್ಲಿಟ್ಟು ವಿಚಾರದ ತೌಲನಿಕ ನೋಟ ಒದಗಿಸಿದ್ದಾರೆ

ಸ್ತ್ರೀ ಚರಿತ್ರೆಯ ಕುರಿತಂತೆ ವ್ಯಾಖ್ಯಾನ ನೀಡಿರುವ ಸ್ತ್ರೀ ಶಕ್ತಿ ಸಂಘಟನೆಯವರು ತಮ್ಮ ಅಭಿಪ್ರಾಯಗಳನ್ನು ಹೀಗೆ ಮಂಡಿಸುತ್ತಾರೆ: ಚರಿತ್ರೆಯುದ್ದಕ್ಕೂ ಮಹಿಳೆ ವ್ಯವಸ್ಥಿತವಾಗಿ ವಂಚಿಸಲ್ಪಟ್ಟಿದ್ದಾಳೆ. ಸ್ತ್ರೀ ಚರಿತ್ರೆಯೆಂದರೆ ಕೇವಲ ಗಂಡಿನ ಪ್ರೀತಿಗೆ ಪಾತ್ರಳಾದ ಮಮ್ತಾಜಳ ಸೌಂದರ್ಯ ಅಥವಾ ಪುರುಷನ ಸ್ಥಾನದಲ್ಲಿ ನಿಂತು ಹೋರಾಡಿದ ಝಾನ್ಸಿಯ ಶೌರ್ಯ ಮಾತ್ರವಲ್ಲ. ಎಲ್ಲೆಡೆಯ, ಎಲ್ಲ ಬಗೆಯ ಹೋರಾಟಗಳಲ್ಲಿ ಧೈರ್ಯ ಸಾಹಸಗಳೊಂದಿಗೆ ಪ್ರಾಣತ್ಯಾಗ ಮಾಡಿದ ಸಹಸ್ರಾರು ಸ್ತ್ರೀಯರ ಬದುಕಿನ ತ್ಯಾಗದ ಕಥೆ ಅದು. ಜನ ಚರಿತ್ರೆಗೆ ಮೂಲ ಆಧಾರವಾಗಿರುವ ಮೌಖಿಕ ಚರಿತ್ರೆ ಬಹುಪಾಲು ಸ್ತ್ರೀಯರಿಗೆ ಸಂಬಂಧಿದ್ದೇ ಆಗಿರುತ್ತದೆ. ಸೂರ್ಯೋದಯವನ್ನೇ ನೋಡದ ದಮನಿತ ಸ್ತ್ರೀ ವರ್ಗ ತನ್ನೊಳಗೇ ಎಂಬಂತೆ ಪರಸ್ಪರರಿಗೆ ಹೇಳಿಕೊಂಡು ಬಂದ ಕಥೆಗಳೇ ಈ ಮೌಖಿಕ ಚರಿತ್ರೆಯ ಹೂರಣವಾಗಿದೆ. ಇತಿಹಾಸಕಾರರ ಅವಗಾಹನೆಯಿಂದ ಸಂಪೂರ್ಣ ಹೊರಗುಳಿದಿರುವ ಇಂತಹ "ಸಮಾನಾಂತರ ಪ್ರಪಂಚ"ವೇ ಈ ಮಹಿಳಾ ಚರಿತ್ರೆ, ಇದನ್ನು ಅರ್ಥ ಮಾಡಿಕೊಳ್ಳಲು ನಿಶ್ಯಬ್ಧ ಭಾಷೆಯನ್ನು ಆಲಿಸುವ ಸಾಮರ್ಥ್ಯವಿರಬೇಕು.

ಉದಯಂ ಮುಂತಾದವರ ಅನುಭವದ ನೆನಪು ಮತ್ತು ಮಾತುಗಳು ಮಹತ್ವದ್ದೆನಿಸುತ್ತವೆ. ಅನೇಕರ ಅನುಭವಗಳು ತೆಲಂಗಾಣ ಹೋರಾಟದ ಒಳನೋಟಗಳನ್ನೇ ತೆರೆದಿಡಬಲ್ಲಷ್ಟು ಶಕ್ತವಾಗಿವೆ.

ತಮ್ಮ ಹಳೆಯ ನೆನಪುಗಳನ್ನು ಕೆದಕಿಕೊಂಡಾಗ ಹೋರಾಟಗಾರ್ತಿಯರನೇಕರು ಗಳಗಳ ಅತ್ತು ಸಂದರ್ಶಿಸಲು ಹೋದವರ ಕರುಳನ್ನೇ ಕದಲಿಸಿದ್ದಾರೆ. ಕೆಲವರಂತೂ ಭಾವುಕರಾಗಿ ಸಂದರ್ಶಿಸಲು ಬಂದವರು ತಮ್ಮ ಹಳೆಯ ನೆಂಟರೆಂಬಂತೆ ನಡೆದುಕೊಂಡಿದ್ದಾರೆ. ಉದಯಂ ಎಂಬಾಕೆಯಂತೂ ಮಾತನಾಡಿದಷ್ಟೂ ಹೊತ್ತು ಪಕ್ಕೆಗಳು ನೋಯುವಂತೆ, ಕಣ್ಣಲ್ಲಿ ನೀರು ಹರಿಯುವಂತೆ ನಗಿಸಿದ್ದಾಳೆ. ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತ ಉದಯಂ ಭೂಗತ ಚಳವಳಿಗಾರರಿಗೂ ಮತ್ತು ಸೆರೆಮನೆಯಲ್ಲಿದ್ದವರಿಗೂ ನಡುವೆ ಗುಪ್ತ ಸಂಧೇಶಗಳನ್ನು ಒಯ್ಯುತ್ತ ತಾನು ಬಚಾವಾಗುತ್ತ ಇದ್ದ ಪೇಚಿನ ಸನ್ನಿವೇಶಗಳನ್ನು ಆಕೆಗೆ ಸಹಜವಾದ ಹಾಸ್ಯದ ಲೇಪನದಿಂದಲೇ ವಿವರಿಸಿದ್ದಾಳೆ. ಸುದ್ದಿ ತಲುಪಿಸಲು ಮತ್ತು ಗೆರಿಲ್ಲಾ ದಾಳಿ ನಡೆಸುವ ಸಂದರ್ಭಗಳಲ್ಲಿ ತೆಲಂಗಾಣದ ಮಹಿಳೆ ಗಂಡಿನಂತೆ ವೇಷ ಧರಿಸಿದ್ದೂ ಉಂಟು.

ಹೋರಾಟ ದಳದಲ್ಲಿನ ನೈತಿಕ ಮೌಲ್ಯಗಳನ್ನು ಕಾಪಾಡುವ ಹೊಣೆಯನ್ನು ಆಯಾ ದಳದ ಸ್ತ್ರೀಯರ ಮೇಲೆಯೇ ಹೊರೆಸಲಾಗುತ್ತಿತ್ತಂತೆ. ಆಕೆಯ ಶೀಲ ಯಾವಾಗಲೂ ಕಟ್ಟುನಿಟ್ಟಿನ ಪರೀಕ್ಷೆಗೆ ಒಳಪಡುತ್ತಿತ್ತು. ಒಮ್ಮೆ ದಳದ ಗೆರಿಲ್ಲಾಗಳಿಗೆ ವೈದ್ಯೆಯಾಗಿದ್ದ ಹಳ್ಳಿಗಾಡಿನ ಹೆಂಗಸು ಅಚ್ಚಮಾಂಬಳಿಗೂ ದಳದ ನಾಯಕರೊಬ್ಬರಿಗೂ – ಸಂಬಂಧವಿದೆಯೆಂಬ ಗುಲ್ಲು ಹಬ್ಬಿತ್ತಂತೆ. ಆಗ ಯಾರೂ ಸಂಬಂಧಪಟ್ಟ ಪುರುಷನನ್ನು ತನಿಖೆ ಮಾಡದೆ ಕೇವಲ ಅಚ್ಚಮಾಂಬಳನ್ನೇ ಗುರಿಮಾಡಿದ್ದಾಗ, ಅಚ್ಚಮಾಂಬ "ನಾನು ಸಾವಿಗೆ ಹೆದರುವವಳೇ ಆಗಿದ್ದಿದ್ದರೆ ಈ ಚಳವಳಿಗೇ ಬರುತ್ತಿರಲಿಲ್ಲ. ಸುದ್ದಿ ನಿಜವೆಂದು ನೀವು ಸಾಬೀತು ಪಡಿಸಬಲ್ಲಿರಾದರೆ ನನ್ನನ್ನು ತುಪಾಕಿಯಿಂದ ಸುಟ್ಟುಬಿಡಿ" ಎಂದು ಎದೆಯೊಡ್ಡಿ ನಿಂತಳಂತೆ. ಆದರೂ ಅಚ್ಚಮಾಂಬಳನ್ನು ಪಕ್ಷದಿಂದ ಉಚ್ಚಾಟಿಸಿ, ಪುನಃ ಆಕೆಯ ಅಗತ್ಯ ಮನಗಂಡು ದಳದಲ್ಲಿ ಸೇರಿಸಿಕೊಳ್ಳಲಾಯಿತು. ಆದರೆ ಹೆಣ್ಣಿನ ಶೀಲದ ವಿಷಯದಲ್ಲಿ ಇಷ್ಟು ಕಟುವಾಗಿದ್ದ ಅದೇ ಪಾರ್ಟಿ ಒಮ್ಮೊಮ್ಮೆ ಪರಿಸ್ಥಿತಿಗಳ ಒತ್ತಡದಿಂದಾಗಿ ಗಂಡು ಹೆಣ್ಣನ್ನು ಉಪಯೋಗಿಸಿಕೊಂಡರೂ – ಆ ಸಣ್ಣ ಪುಟ್ಟ ವಿಷಯಗಳನ್ನು ದೊಡ್ಡದು ಮಾಡದೆ ಅನುಸರಿಸಿಕೊಂಡು ಹೋಗಬೇಕೆಂದು ಹೇಳಿಕೆ ನೀಡುತ್ತಿತ್ತಂತೆ. ಪಾರ್ಟಿಯ ಈ ನಿಲುವು ಪುರುಷ ವರ್ಗದ ಅನುಕೂಲ ಸಿಂಧು ನೀತಿ ಮತ್ತು ದ್ವಂದ್ವ ಮನಸ್ಸಿಗೆ ಅನುಗುಣವಾಗಿಯೇ ಇದೆ.

ಸುಗುಣಮ್ಮ ತನ್ನ ಅನುಭವವನ್ನು ಹೇಳುತ್ತ ಡೆನ್ಸ್‌ನಲ್ಲಿ (ಭೂಗತ ಚಳವಳಿಗಾರರು — ಮಹಿಳಾ ಸದಸ್ಯರ ಜೊತೆ ಕುಟುಂಬ ರೂಪದಲ್ಲಿ ಇರುವ ತಾತ್ಕಾಲಿಕ ಮನೆ.) ಒಂದಿಬ್ಬರು ತನ್ನನ್ನು ಉಪಯೋಗಿಸಿಕೊಳ್ಳಬೇಕೆಂದು ಪ್ರಯತ್ನಿಸಿದಾಗ ಪಾರ್ಟಿಯಲ್ಲೂ ಇಂತಹ ಜನ ಇರಬಹುದೆ ಅಂತ ಆಶ್ಚರ್ಯಪಟ್ಟಳಂತೆ. ಇಂತಹ ಸಂದರ್ಭಗಳಲ್ಲಿ ರಕ್ಷಣೆಗಾಗಿ ಮದುವೆಯಾಗುವುದೇ ಸೂಕ್ತವೆನಿಸಿದರೂ, ಖಾಸಗಿ ವಿಷಯಗಳನ್ನು ಹೇಳಿಕೊಳ್ಳಲೂ ಯಾರೂ ಸಿಗದಂತಹ ಒಂಟಿತನದಲ್ಲಿ ನರಳಿದಳಂತೆ.

ತೆಲಂಗಾಣದ ಅಪ್ರತಿಮ ಹೋರಾಟಗಾರ್ತಿ ಸ್ವರಾಜ್ಯಂ ಇಂತಹ ಘಟನೆಗಳ ಕುರಿತು ಮಾತನಾಡುತ್ತ "ನಾವೆದುರಿಸಬೇಕಾಗಿದ್ದ ಕಷ್ಟಗಳ ಬಗ್ಗೆ ನಮಗೆ ನೋವಿರಲಿಲ್ಲ. ನಮ್ಮ ಬಗ್ಗೆ ಹುಟ್ಟಿಕೊಂಡ ಪುಕಾರುಗಳ ಬಗ್ಗೆಯೇ ಇಂದಿಗೂ ನಾವು ನೋವು ಪಡುತ್ತಿದ್ದೇವೆ" ಎಂದಿದ್ದಾಳೆ.

ವಾರಂಗಲ್‌ನ ಕಮಲಮ್ಮನ ಅನುಭವವಂತೂ ಅತ್ಯಂತ ದಾರುಣವಾದದ್ದು. ಈಕೆ ಗರ್ಭಿಣಿಯಾಗಿದ್ದಾಗಲೇ ಪೊಲೀಸರ ದಾಳಿಗಳಿಂದ ತಪ್ಪಿಸಿಕೊಳ್ಳಲು ಕಾಡುಗಳಲ್ಲಿ ವಿಶ್ರಾಂತಿ ಇಲ್ಲದವಳಂತೆ ಓಡಿದವಳು. ಹೆರಿಗೆಯ ಸಮಯದಲ್ಲಂತೂ ಸೂಲಗಿತ್ತಿಗಾಗಿ ತಡಕಾಡುವಂತಾಗಿತ್ತು. ಆಗ ಕಮಲಮ್ಮನಿದ್ದ ಕಾಡಿನ ಸುತ್ತಲ ಎಲ್ಲ ಊರುಗಳಲ್ಲೂ ಪೊಲೀಸು ಕ್ಯಾಂಪುಗಳಿದ್ದವು. ಕೊನೆಗೆ ರಾತ್ರೋರಾತ್ರಿ ಸಾಂಪೇಟ ಎನ್ನುವ ಹಳ್ಳಿಯಿಂದ ಸೂಲಗಿತ್ತಿ ಒಬ್ಬಾಕೆಯನ್ನು ಕರೆತಂದು ಪೊದೆಯೊಂದರ ಕೆಳಗೆ ಹೆರಿಗೆ ಮಾಡಿಸಿ, ಬೆಳಗಾಗುವ ವೇಳೆಗೆ ಆ ಸೂಲಗಿತ್ತಿಯನ್ನು ವಾಪಸು ಕಳಿಸಲಾಯಿತಂತೆ. ಎಳೇ ಕೂಸನ್ನು ಹೊತ್ತುಕೊಂಡು ಪುನಃ ಜೀವ ಭಯದಿಂದ ಕಾಡಿನಲ್ಲಿ ಅಲೆದಾಟ. ಕೂಸಿಗೆ ೬ ತಿಂಗಳಾದಾಗ, ಮಗುವಿನ ಅಳುವಿನಿಂದ ಶತ್ರುಗಳಿಗೆ ತಮ್ಮ ಇರವು ಸುಲಭವಾಗಿ ಪತ್ತೆ ತಿಳಿಯುವುದರಿಂದ ಮಗುವನ್ನು ಯಾರಿಗಾದರೂ ಕೊಟ್ಟು ಬಿಡಬೇಕು ಇಲ್ಲವೆ

"ನಮಗೆ ಸಾಕಲಿಕ್ಕಾಗದೆ ಬಿಟ್ಟು ಹೋಗುತ್ತಿದ್ದೇವೆ" ಎಂದು ಚೀಟಿ ಬರೆದು ಮಗುವನ್ನು ಪೊಲೀಸರು ಗಸ್ತಿ ತಿರುಗುವ ಜಾಗದಲ್ಲಿ ಬಿಟ್ಟುಬರಬೇಕೆಂದು ಪಾರ್ಟಿಯ ಆದೇಶ, ಯಾವ ತಾಯಿಗೆ ಅಂತಹ ಸಾಹಸ ಮಾಡಲು ಸಾಧ್ಯವೆಂದು ಹೇಳಿ ಕಮಲಮ್ಮ ಕಣ್ಣೀರಿಟ್ಟಾಗ ದಳದ ನಾಯಕರೊಬ್ಬರು "ಇದು ಕಾರ್ಮಿಕ ವರ್ಗಕ್ಕೆ ತಕ್ಕ ಚೈತನ್ಯವಲ್ಲಮ್ಮ" ಎಂದು ಮೂದಲಿಸಿದರಂತೆ. ಕೊನೆಗೆ ೨ ದಿನ ಕಾಡಿನಲ್ಲೇ ನಡೆದು ೬ ತಿಂಗಳ ಕೂಸನ್ನು ಅಪರಿಚಿತರೊಬ್ಬರ ಕೈಯಲ್ಲಿಟ್ಟು ವಾಪಸ್ಸಾಗುವಾಗ "ನನ್ನ ಮನಸ್ಸು ನನ್ನ ಕೈಯಲ್ಲಿರಲಿಲ್ಲ; ನಾನು ನಾನಾಗಿರಲಿಲ್ಲ. ಕಣ್ಣಿಂದ ಒಂದೇ ಸಮ ನೀರಧಾರೆ" — ಎನ್ನುತ್ತಾಳೆ ಗದ್ಗದಿತಳಾಗಿ ಕಮಲಮ್ಮ, ಆದಾಗಿ ೩೬ ವರ್ಷಗಳೇ ಕಳೆದಿವೆ. ಇಂದಿಗೂ ಕಮಲಮ್ಮನಿಗೆ ತನ್ನ ಕೂಸು ಸಿಕ್ಕಿಲ್ಲ. ಆಗೀಗ ಕೇಳುವವರೆದುರು ಅಳುವುದೂ ತಪ್ಪಿಲ್ಲ. ಕಮ್ಯುನಿಷ್ಟ್ ನಾಯಕರೊಬ್ಬರು ಆಕೆಯನ್ನು ಸಮಾಧಾನ ಪಡಿಸುತ್ತ "ತೆಲಂಗಾಣದ ಆದರ್ಶವಂತ ಹೆಣ್ಣು ನೀನು. ನಿನ್ನ ಬದುಕು ಒಂದು ಚರಿತ್ರೆಯಾಗುತ್ತದೆ. ಮಗುವನ್ನು ಕಳಕೊಂಡೆನೆಂದು ದುಃಖಿಸಬೇಡ" ಎಂದರಂತೆ.

ದೈಹಿಕವಾಗಿಯೂ ಮಾನಸಿಕವಾಗಿಯೂ ತೆಲಂಗಾಣದ ಮಹಿಳೆ ನಾಗರಿಕ ಜಗತ್ತು ತಲ್ಲಣಗೊಳ್ಳುವಂತಹ ಚಿತ್ರಹಿಂಸೆಗಳಿಗೆ ಈಡಾಗಿದ್ದಾಳೆ. ಚಳವಳಿಯಲ್ಲಿ ಭಾಗವಹಿಸಿದ ಎಲ್ಲರೂ ಪಾರ್ಟಿ ಮತ್ತು ಕಾರ್ಯಕರ್ತರಿಂದಲೂ ಸಹ ಒಂದಲ್ಲ ಒಂದು ವಿಧದಲ್ಲಿ ಅವಮಾನಿತರಾಗಿದ್ದಾರೆ. ಇದಕ್ಕೆ ಕಮ್ಯುನಿಷ್ಟ್ ಪಕ್ಷ ಕಾರಣವೆಂದು ಹೇಳಲಾಗದು. ಯಾಕೆಂದರೆ ಹೆಣ್ಣು ಅಂದಿನ ಸಮಾಜದ ಯಾವ ವರ್ಗಕ್ಕೆ ಸೇರಿದವಳಾಗಿದ್ದರೂ ಒಟ್ಟಾರೆ ಪುರುಷ ವರ್ಗದ ದೃಷ್ಟಿಯಲ್ಲಿ "ಅಬಲೆ......... ಕೈಲಾಗದವಳು" ಎಂದೇ ಪರಿಗಣಿಸ್ಪಡುತ್ತಿದ್ದಳು.

ಆದರೆ ತೆಂಗಾಣದ ಹೆಣ್ಣು ಹೆಗಲಿಗೆ ತುಪಾಕಿ ಏರಿಸಿ ಗೆರಿಲ್ಲಾ ಹೋರಾಟಗಳಲ್ಲಿ ಭಾಗವಹಿಸಿದ್ದಿದೆ. ಸ್ವರಾಜ್ಯಂ ತಾನೇ ಒಂದು ದಳದ ನಾಯಕಿಯಾಗಿದ್ದವಳು. ವೆಂಕಟಮ್ಮ ಎಂಬ ಕೋಯಾ ಆದಿವಾಸಿ ಮಹಿಳೆ ಗಂಡಿನಂತೆ ವೇಷ ಧರಿಸಿ ದಾಳಿಗಳಲ್ಲಿ ಭಾಗವಹಿಸುತ್ತಿದ್ದಳಲ್ಲದೆ ಆನಂತರ ಆಕೆ ದಳವೊಂದರ ಕಮಾಂಡರ್ ಸಹ ಆಗಿದ್ದಳು. ಮಗದೊಮ್ಮೆ ಸ್ತ್ರೀ ಗೆರಿಲ್ಲಾ ಒಬ್ಬಾಕೆ ಪುರುಷರಿಗಿಂತ ಮುಂದೆಹೋಗಿ ಪೊಲೀಸರ ಮೇಲೆ ದಾಳಿ ನಡೆಸಿ - ಸಮಯೋಚಿತ ಧೈರ್ಯ, ಸಾಹಸಗಳನ್ನು ಪ್ರದರ್ಶಿಸಿದ್ದಿದೆ. ದಳದ ವೈದ್ಯೆಯಾಗಿದ್ದ ಅಚ್ಚಮಾಂಬ ಗಾಯಗೊಂಡ ಗೆರಿಲ್ಲಾ ಒಬ್ಬನನ್ನು ಹೆಗಲಿಗೆ ಹಾಕಿಕೊಂಡು ಬೆನ್ನುಹತ್ತಿದ್ದ ಪೊಲೀಸರಿಂದ ತಪ್ಪಿಸಿಕೊಂಡು ಕಾಡಿನೊಳಗೇ ಸುರಕ್ಷಿತ ಸ್ಥಳಕ್ಕೆ ಓಡಿಹೋದದ್ದುಂಟು. ಅನೇಕ ಸ್ತ್ರೀಯರು ಗೆರಿಲ್ಲಾ ಹೋರಾಟಗಳಲ್ಲಿ ಭಾಗವಹಿಸಬೇಕೆಂಬ ಇಚ್ಛೆಯುಳ್ಳವರಾಗಿದ್ದರೂ ಪಕ್ಷವೇ ಹಿಂಜರಿಯುತ್ತಿತ್ತು. ಕಾರ್ಯಕರ್ತರನ್ನು ಪೊಲೀಸರು ಎಳೆದೊಯ್ಯುವಾಗ ಮಹಿಳೆಯರು ಒನಕೆ, ಕಾರದಪುಡಿ ಹಿಡಿದು ಅಡ್ಡಗಟ್ಟಿ ತಮ್ಮವರನ್ನು ಬಿಡಿಸಿಕೊಂಡು ಪೊಲೀಸರನ್ನು ಊರಿನಿಂದಲೇ ಓಡಿಸಿದ್ದಾರೆ. ಅನೇಕ ಮಹಿಳೆಯರು ಹೋರಾಟದ ದೆಸೆಯಿಂದ ಬಂಧನಕ್ಕೊಳಗಾಗಿ ಜೈಲುಶಿಕ್ಷೆಯನ್ನು ಅನುಭವಿಸಿದ್ದೂ ಉಂಟು.

ದೈಹಿಕವಾಗಿಯೂ ಮಾನಸಿಕವಾಗಿಯೂ ತೆಲಂಗಾಣದ ಮಹಿಳೆ ನಾಗರಿಕ ಜಗತ್ತು ತಲ್ಲಣಗೊಳ್ಳುವಂತ ಚಿತ್ರಹಿಂಸೆಗಳಿಗೆ ಈಡಾಗಿದ್ದಾಳೆ. ಚಳವಳಿಯಲ್ಲಿ ಭಾಗವಹಿಸಿದ ಎಲ್ಲರೂ ಪಾರ್ಟಿ ಮತ್ತು ಕಾರ್ಯಕರ್ತರಿಂದಲೂ ಸಹ ಒಂದಲ್ಲ ಒಂದು ವಿಧದಲ್ಲಿ ಅವಮಾನಿತರಾಗಿದ್ದಾರೆ. ಇದಕ್ಕೆ ಕಮ್ಯೂನಿಷ್ಟ್ ಪಕ್ಷ ಕಾರಣವೆಂದು ಹೇಳಲಾಗದು ಯಾಕೆಂದರೆ ಹೆಣ್ಣು ಅಂದಿನ ಸಮಾಜದಲ್ಲಿ ಅಬಲೆ ಕೈಲಾಗದವಳು ಎಂದೇಪ ರಿಗಣಿಸಲ್ಪಡುತ್ತಿದ್ದಳು.

ಸ್ತ್ರೀ ಮತ್ತು ಪುರುಷ ಸಂಬಂಧಗಳ ಇಂತಹ ಸ್ಥಿತ್ಯಂತರದ ಆರಂಭ ಘಟ್ಟವೊಂದರಲ್ಲಿ (ತೆಲಂಗಾಣದ ಹಿನ್ನೆಲೆಯಲ್ಲಿ ಮಾತ್ರ) ಸಮ ಸಮಾಜದ ಕನಸು ನೀಡಿದ್ದ ಕಮ್ಯುನಿಷ್ಟ್ ಪಕ್ಷ ಸ್ತ್ರೀ ಕುರಿತಂತೆ ಎಂತಹ ನಿಲುವು ತಳೆದಿತ್ತು? ಹೋರಾಟದಲ್ಲಿ ಮಹಿಳೆಯ ಭಾಗವಹಿಸುವಿಕೆ ಕುರಿತಂತೆ ಪಕ್ಷ ಎಂತಹ ನೀತಿಗಳನ್ನು ರೂಪಿಸುವುದು ಸಾಧ್ಯವಾಯಿತು? ಪಾರ್ಟಿಯು ನಡೆಸಿದ ಚಳವಳಿಯಿಂದ ತೆಲಂಗಾಣದ ಮಹಿಳೆಯ ಬದುಕಿನಲ್ಲಿ ಎಂತಹ ಗುಣಾತ್ಮಕ ಬದಲಾವಣೆಗಳಾದವು? ಪಕ್ಷದ ಬಗ್ಗೆ ಸ್ತ್ರೀ ಗೆರಿಲ್ಲಾಗಳಲ್ಲಿ ಎಂತಹ ಅಭಿಪ್ರಾಯ ಮೂಡುವುದು ಸಾಧ್ಯವಾಯಿತು?

ಪೆಂಪಟಿ ಕೌಸಲ್ಯ ಹೇಳುವಂತೆ ೪ ಗೋಡೆಗಳ ನಡುವೆಯೇ ಇದ್ದ ಮಧ್ಯಮ ವರ್ಗದ ಮಹಿಳೆ ಹೋರಾಟದಿಂದಾಗಿಯೇ ಹೊರಬಂದು ಜಗತ್ತನ್ನು ನೋಡುವಂತಾಯಿತು. ಪರದಾ ಅಥವ ಘೋಷ

ಇಲ್ಲದೆ ನಿರ್ಭಯವಾಗಿ ಕೆಲಸ ಕಾರ್ಯಗಳ ಮೇಲೆ ಹೊರಗೆ ದುಡಿಯುವ ಹಾಗೆ ಆಯಿತು. ಇದು ಕೇವಲ ಚಳವಳಿಯಲ್ಲಿ ಭಾಗಿಗಳಾಗಿದ್ದ ಮಹಿಳೆಯರಿಗಷ್ಟೇ ಅಲ್ಲದೆ ತೆಲಂಗಾಣದ ಇಡೀ ಸ್ತ್ರೀ ಸಮೂಹಕ್ಕೇ ದೊರೆತ ಸ್ವಾತಂತ್ರ್ಯದ ಮೊದಲ ಸವಿ ಎನ್ನಬಹುದಾಗಿದೆ. ಅದೇ ಸಂದರ್ಭದ ಭಾರತದ ಇನ್ನಿತರ ಭಾಗಗಳಿಗಿಂತ ನಿಜಾಂನ ಹೈದರಾಬಾದು ಸಂಸ್ಥಾನದಲ್ಲಿನ ಸಾಮಾಜಿಕ ಸಂದರ್ಭ, ಸಾಂಸ್ಕೃತಿಕ ಪರಿಸರ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿನ ಮನುಷ್ಯ ಸಂಬಂಧಗಳ ಸ್ವರೂಪ ಸಂಪೂರ್ಣ ಭಿನ್ನವಾಗಿತ್ತೆಂಬುದನ್ನು ನಾವಿಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.

ತೂರ್ಪುಗೂಡೆಂನ ದಾಯನಿ ಪ್ರಿಯಂವದ ಜನಾಂದೋಲನದಲ್ಲಿ ಭಾಗಿಯಾಗಿ ಭಾಷಣ ಬಿಗಿಯುತ್ತಿದ್ದರೆ, ರೋಮಾಂಚಿತರಾದ ಸಭಿಕ ಸಮೂಹ ಆಕೆ ಬಿ. ಎ. ಓದಿರುವವಳೋ ಎಂ. ಎ. ಓದಿರುವವಳೋ ಎಂದು ಕೇಳುತ್ತಿದ್ದರಂತೆ. ಆದರೆ ಕೇವಲ ನಾಲ್ಕನೆಯ ತರಗ

ಮರುಹಂಚಿಕೆಯ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಾರ್ಟಿ ಸ್ತ್ರೀಯರನ್ನು ಸ್ವತಂತ್ರ ವ್ಯಕ್ತಿತ್ವದವರೆಂದು ಪರಿಗಣಿಸಿ ಅವರಿಗೆ ಭೂಮಿಯನ್ನು ಹಂಚಲೇ ಇಲ್ಲ. ಇದರಿಂದ ಕಮ್ಯುನಿಷ್ಟರ ಸಮ ಸಮಾಜದ ಕರೆ ಮಹಿಳೆಯರ ಪಾಲಿಗೆ ಮಾತ್ರ ಅರ್ಥಶೂನ್ಯ ಘೋಷಣೆಯಾಗಿ ಹೋಯಿತು. ಅದಷ್ಟೇ ಅಲ್ಲದೆ ಸ್ತ್ರೀ ಆರ್ಥಿಕ ಸ್ವಾವಲಂಬನೆ ಸಾಧಿಸಲಾಗದೆ ಎಂದಿನಂತೇ ಪುರುಷ ವರ್ಗದ ಮೇಲೆ ಅವಲಂಬಿತವಾಗುವಂತಾಯಿತು. ಇದು ಪಾರ್ಟಿಯ ಮೂಲಭೂತ ತತ್ವ ಮತ್ತು ಚಿಂತನೆಗಳಿಗೇ ಧಕ್ಕೆ ತಂದ ಸಂಗತಿಯಾಗಿದೆ. ಬಹುಶಃ ಸ್ತ್ರೀಯರನ್ನು ಪಾರ್ಟಿಯ ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ಹಂತದಲ್ಲಿ ಸಕ್ರಿಯವಾಗಿ ಒಳಗೊಳಿಸಿಕೊಳ್ಳದೇ ಹೋದ ಕಾರಣದಿಂದಾಗಿಯೇ ಈ ವಿಪರ್ಯಾಸ ಸಂಭವಿಸುವಂತಾಯಿತು. ಕಮ್ಯುನಿಷ್ಟ ನಾಯಕತ್ವದ ಕಳಕಳಿಯನ್ನು ಪ್ರಶ್ನಿಸದೆ ಮಾತನಾಡುವುದಾದರೆ, ಪಕ್ಷಕ್ಕೆ ಕೇವಲ ತತ್ವಬದ್ಧತೆಯಿಂ

ಭೂಮಿಯ ಮರುಹಂಚಿಕೆಯ ಸಂದರ್ಭದಲ್ಲಿ ಕಮ್ಯೂನಿಷ್ಟ್ ಪಾರ್ಟಿ ಸ್ತ್ರೀಯರನ್ನು ಸ್ವತಂತ್ರ ವ್ಯಕ್ತಿತ್ವದವರೆಂದು ಪರಿಗಣಿಸಿ ಅವರಿಗೆ ಭೂಮಿಯನ್ನು ಹಂಚಲೇ ಇಲ್ಲ. ಇದರಿಂದಲೇ ಕಮ್ಯೂನಿಷ್ಟ ಸಮಸಮಾಜದ ಕರೆ ಮಹಿಳೆಯ ಪಾಲಿಗೆ ಮಾತ್ರ ಅರ್ಥಶೂನ್ಯ ಘೋಷಣೆಯಾಗಿ ಹೋಯಿತು. ಅದಕಷ್ಟೇ ಅಲ್ಲದೇ ಸ್ತ್ರೀ ಆರ್ಥಿಕ ಸ್ವಾವಲಂಬನೆ ಸಾಧಿಸಲಾಗದೆ ಎಂದಿನಂತೇ ಪುರುಷ ವರ್ಗದ ಮೇಲೆ ಅವಲಂಬಿತವಾಗುವಂತಾಯಿತು.

ತಿಯವರೆಗೆ ಮಾತ್ರವೇ ಓದಿದ್ದ ಪ್ರಿಯಂವದ ತನಗೆ ಅಂತಹ ಚೈತನ್ಯ ಮತ್ತು ಪ್ರಾಪಂಚಿಕ ಜ್ಞಾನವನ್ನು ಕಮ್ಯುನಿಸ್ಟ್ ಪಕ್ಷ ನೀಡಿತು ಎಂದೇ ಹೇಳುತ್ತಾಳೆ. ಈ ಮಾತನ್ನೇ ಬಹಳಷ್ಟು ಮಹಿಳೆಯರು ಬೇರೆ ಬೇರೆ ರೀತಿಯಲ್ಲಿ ಹೇಳಿರುವುದರ ಮೇಲೆ ಕಮ್ಯುನಿಷ್ಟ್ ಪಕ್ಷ ಮಹಿಳೆಯರ ಆತ್ಮಸ್ಥೈರ್ಯಕ್ಕೆ ನೈತಿಕ ಆಸರೆಯನ್ನಂತೂ ಒದಗಿಸಿತ್ತೆಂದೇ ಹೇಳಬೇಕು.

ಹೀಗೆ ತಮಗೆ ಹೋರಾಟದ ಅರಿವನ್ನು ಕಮ್ಯುನಿಷ್ಟ್ ಪಕ್ಷ ನೀಡಿತೆಂಬ ವಿಷಯದಲ್ಲಿ ಪ್ರಾಯಶಃ ಯಾವ ಮಹಿಳೆಯೂ ಭಿನ್ನಮತ ಹೊಂದಿದಂತಿಲ್ಲ. ಆದರೂ ಕೆಲವರು ಪಕ್ಷದ ನಿಲುವುಗಳನ್ನು ಸಮಾಜದ ಒಳಗಣ್ಣಿನಿಂದೆಂಬಂತೆ ನೋಡಿ ತುಂಬಾ ಮುಖ್ಯ ಎನ್ನುವಂತಹ ಅಭಿಪ್ರಾಯಗಳನ್ನು ಹೊರಗೆಡವಿದ್ದಾರೆ. ಪೆಂಪಟಿ ಗ್ರಾಮದ ಸೋಮಕ್ಕ ಎನ್ನುವ ಮಹಿಳೆ ಇಂದಿನ ಎಲ್ಲ ಎಡ ಸಂಘಟನೆಗಳಿಗೂ ಅನ್ವಯಿಸುವಂತಹ ಗಂಭೀರ ಮಾತನ್ನು ಆಡಿದ್ದಾಳೆ. ಭೂಮಿಯ

ದಷ್ಟೇ ಸೋಮಕ್ಕನ "ಮೌನಗಣ್ಣು" ಲಭಿಸುವುದು ಸಾಧ್ಯವಿರಲಿಲ್ಲ. ಖಚಿತ ಧ್ವನಿಯಲ್ಲಿ ಮಾತನಾಡುವ ಸೋಮಕ್ಕ ತೆಲಂಗಾಣದ ಸ್ತ್ರೀಗೆ ಸಾಕಷ್ಟು ಸಾಮಾಜಿಕ ಸ್ವಾತಂತ್ರ್ಯ ಸಿಕ್ಕಿದ್ದರೂ ಆಕೆಯ ಸಮಸ್ಯೆಗಳನೇಕವು ಹಾಗೇ ಮುಂದುವರೆದವು ಎನ್ನುತ್ತಾಳೆ. ಪೆಂಪಟಿ ಸೋಮಕ್ಕನ ಈ ಅಮೂರ್ತ ರೂಪದ ಹತಾಶೆ ಎಲ್ಲರ ಮಾತಿನಾಳದಲ್ಲೂ ನಮಗೆ ಕಾಣಿಸುತ್ತದೆ. ತಮ್ಮ ನಂಬಿಕೆಯ ತತ್ವ ತಮ್ಮ ಕಣ್ಣೆದುರೇ ಕುಸಿದು ಬೀಳುವ ಸಾಂಸ್ಕೃತಿಕ ಸೋಲಿನ ಅನುಭವದಿಂದ ತೆಲಂಗಾಣ ಮಹಿಳೆಯ ಸೂಕ್ಷ್ಮ ಮನಸ್ಸು ಹೀಗೆ ಹತಾಶೆಯೊಂದರ ಅಂಚಿಗೆ ಬಂದು ನಿಂತಿರಬಹುದು. ಅದು ಆಕೆಯನ್ನು ಸುಧಾರಿತ ರೂಪದ "ವೆಟ್ಟಿ" ಮತ್ತು ಗುಲಾಮ ಪದ್ಧತಿಯಲ್ಲೇ ಮುಂದುವರೆಯುವಂತೆ ಮಾಡಿದೆ ಎನಿಸುತ್ತೆ.

ತೆಲಂಗಾಣ ಚಳವಳಿಯು ಎಲ್ಲ ಮಹತ್ವ ಸಾಧನೆಗಳ ಆಚೆಗೆ ನಿಂತು ನಾವು ಇನ್ನಷ್ಟು ಆರೋ

ಗ್ಯಕರ ಧೋರಣೆಗಳಿಗಾಗಿ ನಿಷ್ಠುರ ಚರ್ಚೆಯನ್ನು ನಡೆಸಲೇಬೇಕಿದೆ. ಚಳವಳಿಯ ಹಂತದಲ್ಲಾಗಲೀ, ಆನಂತರವಾಗಲೀ – ಸ್ತ್ರೀಯರಿಗೆ ಸಂಬಂಧಿಸಿದಂತೆ – ಕಮ್ಯುನಿಸ್ಟ್ ಪಾರ್ಟಿ ಯಾವ ಪಾಲಿಸಿಯನ್ನು ರೂಪಿಸಲಿಲ್ಲ. ಅವರ ಪ್ರತ್ಯೇಕ - ಸಂಘಟನೆಯ ಅವಶ್ಯಕತೆಯನ್ನು ತಾತ್ವಿಕವಾಗಿ ಮನಗಾಣಲಿಲ್ಲ. ಚಳವಳಿಯ ಹುರುಪಲ್ಲಿ ಸ್ತ್ರೀಯರು ತಾವು ತಾವಾಗೇ ಸಂಘಟಿತರಾದ ಮತ್ತು ದಳಗಳಿಗೆ ಸೇರಿದ್ದನ್ನು ವಿಮೋಚನೆಯತ್ತ ಅವರಿಗಿದ್ದ ತೀವ್ರ ತುಡಿತ ಮತ್ತು ಅಂತಹುದೊಂದು ವೇದಿಕೆಗಾಗಿ ಅವರು ಕಾತರಿಸಿದ್ದಕ್ಕೆ ನಾವು ಉದಾಹರಣೆಯನ್ನಾಗಿಸಬಹುದಾಗಿದೆಯೇ ಹೊರತು ಪಾರ್ಟಿಯ ಗುರುತರ ಸಾಧನೆಯನ್ನಾಗಿ ಅಲ್ಲ. ಒಟ್ಟು ಸಮಾಜವೇ ಕಬಲಿದಾಗ ತೆಲಂಗಾಣದ ಮಹಿಳೆ ಸಹಜ ಜೈವಿಕ ವ್ಯತ್ಯಾಸಗಳನ್ನು ಕೂಡ ಮರೆತು ತಾನೂ ಹೋರಾಡುವ ಉಮೇದಿನಿಂದಲೇ ಕಣಕ್ಕಿಳಿದಿದ್ದಾಳೆ. ಆದರೆ 'ಆ ಹೋರಾಟ ಆಕೆಯನ್ನು ಎಂತಹ ತೀರಗಳಿಗೆ ಒಯ್ದಿತು ಎಂಬುದರಿಂದಲಷ್ಟೆ ಚಳವಳಿ ಯಶಸ್ಸನ್ನು ನಾವು ಸ್ತ್ರೀನೆಲೆಯಿಂದ ವಾಖ್ಯಾನಿಸಬಹುದಾಗಿದೆ. ಅಥವ ಚಳವಳಿ ತೆಲಂಗಾಣದ ಮಹಿಳೆಯನ್ನೆಷ್ಟರ ಮಟ್ಟಿಗೆ ಸ್ವಾತಂತ್ರ್ಯಗೊಳಿಸಿತು ಎಂಬುದನ್ನು ಅರಿಯಬಹುದಾಗಿದೆ.

ಪಾರ್ಟಿಯ ಬಹಿರಂಗ ಸಭೆಗಳಿಗೆ ಬರುತ್ತಿದ್ದವರಲ್ಲಿ ಕೂಡ ಶೇಕಡ ಐವತ್ತು ಭಾಗ ಮಹಿಳೆಯರೇ ಆಗಿರುತ್ತಿದ್ದರು. ಮೆರವಣಿಗೆ, ಸಭೆಗಳಲ್ಲಿ ಅಧಿಕ ಸಂಖ್ಯೆಯು ಸ್ತ್ರೀಯರು ಭಾಗವಹಿಸುತ್ತಿದ್ದ ಬಗ್ಗೆ ಪಾರ್ಟಿಯ ಡಾಕ್ಯುಮೆಂಟರಿಗಳೇ ತಿಳಿಸುತ್ತವೆ. ಆದರೂ ಅಂದಿನ ಸಮಾಜದ ಮೌಲ್ಯಗಳಿಗೆ ವಿರುದ್ಧವಾಗಿ ಮಹಿಳೆಯರನ್ನು ಪಕ್ಷದ ಸದಸ್ಯೆಯರನ್ನಾಗಿಸಿಕೊಳ್ಳುವಲ್ಲಿ ಪಾರ್ಟಿಯೇ ಹಲವಾರು ಬಾರಿ ಹಿಂದೇಟು ಹಾಕಿತೆಂದು ಹೋರಾಟಗಾರ್ತಿಯರೇ ಹೇಳುತ್ತಾರೆ. ಸ್ತ್ರೀ ಕುರಿತಂತಹ ಇಂತಹ ಧ್ವಂದ್ವ ನೀತಿ ಪಕ್ಷ ಮತ್ತು ಪುರುಷ ವರ್ಗಗಳಲ್ಲಿ ಸಾಕಷ್ಟಿದ್ದವು. ಇವೆಲ್ಲದರ ನಡುವೆ ಚಳವಳಿನಿರತ ಸ್ತ್ರೀಯರ ಬಗ್ಗೆ ಅನುಚಿತವಾಗಿ ವರ್ತಿಸಿದ ದಳದ ಪುರುಷರನ್ನು ಪ್ರಜಾಕೋರ್ಟು ಶಿಕ್ಷಿಸಿದ ಉದಾಹರಣೆಗಳೂ ಹಲವಾರಿವೆ. ಆದರೆ ಇಂತಹ ಕ್ರಮಗಳು ಸ್ತ್ರೀ ಕುರಿತು ಸಮಗ್ರ ನೀತಿಯೊಂದನ್ನು ರೂಪಿಸುವತ್ತ ಒಯ್ಯಲೇ ಇಲ್ಲ.

ಪ್ರಾಣದ ಹಂಗು ತೊರೆದು ಗೆರಿಲ್ಲಾ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಿಳೆಯರೆಲ್ಲಾ ಬಹುತೇಕ ಸಂವೇದನಾಶೀಲ ಸ್ತ್ರೀಯರೇ ಆಗಿದ್ದಾರೆ. ಅವರ ಕಳಕಳಿಯ ಮಾತಗಳನೇಕವು ಓದುಗರಲ್ಲಿ ಪದೇ ಪದೇ ರಿಂಗಣಗುಣಿಸುವಂತಿವೆ. ಚಳವಳಿ ಮುಗಿದ ನಂತರದ ಅಗಾಧ ಶೂನ್ಯ ಮತ್ತು ಒಂಟಿತನವನ್ನು ಸಹಿಸಿಕೊಳ್ಳಲಾಗದೆ ಪ್ರಿಯಂವದೆ ಅನೇಕ ಬಾರಿ ಆತ್ಮಹತ್ಯೆಯ ಯೋಚನೆಯನ್ನು ಮಾಡಿದ್ದಳಂತೆ. ವಿಮುಕ್ತಿಯ ಚಳವಳಿ ಪ್ರಿಯಂವದೆಯ ಮನಸ್ಸನ್ನು ಹೇಗೆಲ್ಲ ಆಕ್ರಮಿಸಿಕೊಂಡು ಆಲೋಚನೆಯ ಸೂಕ್ಷ್ಮ ಬೇರುಗಳನ್ನು ಕದಲಿಸಿಬಿಟ್ಟಿತ್ತೆನ್ನುವುದಕ್ಕೆ ಆಕೆಯ ಈ ಮಾತು ಕನ್ನಡಿಯಾಗುವಂತಿದೆ. ಅಂದಿನ ಮತ್ತು ಇಂದಿನ ಎಲ್ಲ ಬಗೆಯ ಚಳವಳಿಗಳ ತೀವ್ರ ನಿರಾಸೆಯ ಮನಸ್ಸುಗಳ ಅಭಿವ್ಯಕ್ತಿಗೆ ಪ್ರಿಯಂವದೆ ಎಲ್ಲೋ ಧ್ವನಿಯಾಗಿದ್ದಾಳೇನೋ ಎನಿಸಿಬಿಡುತ್ತದೆ ಒಂದು ಕ್ಷಣ. ಎಲ್ಲ ಮುಗಿದ ಮೇಲೆ ಇನ್ನೇನು ಎನ್ನುವ ಬದುಕಿನ ಗೊಂದಲಗಳಿಗೆದುರಾಗುವ ನಿಗೂಢ ಪ್ರಶ್ನೆಯಿಂದಾಗಿ ಸಮಾಜವಾದೀ ಮನಸ್ಸು ಕೂಡ ಅಮೂರ್ತ ಆಧ್ಯಾತ್ಯದ ವಲಯಕ್ಕೆಲ್ಲೋ ಹಾರಿಬಿಡುವ ಸಂತಸ್ಥಿತಿ ಪ್ರಿಯಂವದೆಯದು ಕೂಡ ಅಂತ ಅನಿಸದಿರದು.

ಹೋರಾಟ ಮುಗಿದು ಇಷ್ಟು ವರ್ಷಗಳಾದ ನಂತರದ ಸ್ಥಿತಿಗತಿಗಳು ಹೇಗಿವೆ ಎಂದರೆ, ಪ್ರಿಯಂವದೆ ಹೋರಾಟಗಾರ್ತಿಯರೆಲ್ಲರ ದೀರ್ಘ ಮೌನವನ್ನು ಮಾತಾಗಿಸುವವಳಂತೆ, "ಎಕ್ಕಡುನ್ನಾವೆ ಗೊಂಗಡಿ ಅಂಟೆ ವಸಿನ ಚೋಟನೆ ಕಂಬಳಿ" ಎನ್ನುವಂತಿದೆ ಎಂದಿದ್ದಾಳೆ (ಎಲ್ಲಿದ್ದೀಯೆ ಗೊಂಗಡಿ ಅಂದ್ರೆ ಹಾಕಿದ ಜಾಗದಲ್ಲೇ ಅನ್ನೋ ಹಂಗೆ). ತೆಲಂಗಾಣದ ಉದ್ದಕ್ಕೂ ಪ್ರಿಯಂವದೆಯ ಈ ಚಡಪಡಿಕೆಯ ಹೃದಯವೇ ನಮಗೆದುರಾದರೆ ಆಶ್ಚರ್ಯವೇನಿಲ್ಲ.

ಸಾಟಿ ಇಲ್ಲದ ಹೋರಾಟಗಾರ್ತಿ ಎಂದೇ ಕರೆಸಿಕೊಂಡ ಸ್ವರಾಜ್ಯಂ ಕುರಿತಂತೆ ಇದೇ ಪ್ರಿಯಂವದ ಹತ್ತು ವರ್ಷಗಳ ನಂತರ ಸಿಕ್ಕಿದ ಆಕೆಯ ಗಂಡನನ್ನು "ಸ್ವರಾಜ್ಯಂ ಈಗ ಹೇಗಿದ್ದಾಳೆ?" ಅಂತ ಕೇಳಿದಾಗ ಆತ "ಹೇಗಿರ್ತಾಳೆ .... ಅಡಿಗೆ ಮಾಡಿಟ್ಟು ಬಡ್ಸಿಕೊಂಡು ತಿನ್ತಾಳೆ" ಅಂದನಂತೆ ಉದಾಸೀನವಾಗಿ. ಪ್ರಿಯಂವದೆಗೆ ಎಂತಹ ಆಘಾತವಾಗಿರಬೇಡ?

ಚಳವಳಿಯನ್ನು ಹಿಂತೆಗೆದುಕೊಂಡು, ಹೋರಾಟಗಳೆಲ್ಲ ಮುಗಿದಾದ ಮೇಲೆ ಕಮ್ಯುನಿಸ್ಟ್ ಪಕ್ಷ ಮಹಿಳೆಯರಿಗೆಲ್ಲ "ನೀವಿನ್ನು ನಿಮ್ಮ ನಿಮ್ಮ ಕುಟುಂಬಗಳಿಗೆ

ಳಿಗೆ ಹಿಂದಿರುಗಿ" ಎಂದಾಗಲಂತೂ ಪ್ರಮೀಲಾತಾಯಿ, ಸ್ವರಾಜ್ಯಂರವರಿಗೆ ಉಸಿರಾಡುವುದೇ ಕಷ್ಟವಾಯಿತಂತೆ. ಹೋರಾಟದ ಒಡನಾಟದಿಂದ ಬೇರ್ಪಡಿಸಿಕೊಳ್ಳುವುದು ಮತ್ತು ಸಾವು ಅವರಿಗೆ ಸಮ ಎನಿಸಿರಲಿಕ್ಕೂ ಸಾಕು. "ತುಪಾಕಿ ಹೆಗಲಿಗೇರಿಸಿ ಹೋರಾಡಿದ ನಾವೀಗ ಹೊಲಿಗೆಯಂತ್ರಗಳ ಮುಂದೆ ಕೂತು ಬಟ್ಟೆ ಹೊಲೆಯಬೇಕಾಗಿ ಬಂದಿದೆ" ಎನ್ನುತ್ತಾಳೆ ಬ್ರಿಜ್ ರಾಣಿ. ಚಳವಳಿಯ ಸಂದರ್ಭಗಳಲ್ಲಿ "ನೀವು ಚರಿತ್ರೆ ಸೃಷ್ಟಿಸುತ್ತಿದ್ದೀರಿ ಎಂದಿದ್ದರಾದರೂ—ಅಂದಿನಿಂದ ಇಂದಿನವರೆಗೂ ನಮ್ಮನ್ನು ಪುನಃ ನೀವು ಯಾರು ಅಂತ ವಿಚಾರಿಸಿದವರೇ ಇಲ್ಲ" ಎಂದು ಕಮಲಮ್ಮ ನೋವಿನಿಂದ ಹೇಳುತ್ತಾಳೆ. ನಾಲ್ಕು ಗೋಡೆಗಳ ಒಳಗೆ ನೆಟ್ಟಿಸಿಕೊಳ್ಳಲಿಕ್ಕೇ ಇಷ್ಟೆಲ್ಲ ಹೋರಾಟಗಳು ಯಾಕೆ ಬೇಕಿತ್ತು? ಎಂಬ ಪ್ರಶ್ನೆಯನ್ನೇ ಎಲ್ಲರೂ ಒಂದಲ್ಲ ಒಂದು ವಿಧದಲ್ಲಿ ಕೇಳುತ್ತಾರೆ.

ತೆಲಂಗಾಣದ ಮಹಿಳೆ ಭೂಸ್ವಾಮಿಗಳ, ರಜಾಕಾರರ, ಪೊಲೀಸರ ಚಿತ್ರಹಿಂಸೆಗಳೊಂದಿಗೆ ಶೋಷಿತ ಪುರುಷವರ್ಗದ ಶೀತಲ ದುರ್ದಮನವನ್ನೂ ಸಹಿಸಿಕೊಂಡು ವಿಮೋಚನೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕಿತ್ತು. ಹೀಗೆ ಸಮಸ್ಯೆಗಳನ್ನು ಅತ್ಯಂತ ಸಮರ್ಥವಾಗಿ ಎದುರಿಸಿದ ದೃಷ್ಟಿಯಿಂದ ಪುರುಷರಿಗಿಂತಲೂ ತೆಲಂಗಾಣದ ಮಹಿಳೆಗೇ ಹೆಚ್ಚು ಆತ್ಮಸ್ಥೈರ್ಯವಿತ್ತು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೂ ಚಳವಳಿಯ ಪ್ರಮುಖ ನಾಯಕರಲ್ಲೊಬ್ಬರಾದ ರಾವಿ ನಾರಾಯಣ ರೆಡ್ಡಿಯವರು ಮಹಿಳೆಯರನ್ನು ಹೋರಾಟ ರಂಗಕ್ಕೆ ಹೆಚ್ಚು ಬಿಡದಿರಲು ಕಾರಣ ನೀಡುತ್ತ—ತುಪಾಕಿ ಹಿಡಿದು ಹೋರಾಡುವ ಚೈತನ್ಯ ಎಷ್ಟಾದರೂ ಆ ಹೆಂಗಸರಿಗೆ ಇರೋಲ್ಲವಲ್ಲ ಎಂದೇ ಭಾವಿಸಿದ್ದಾಗಿ ತಿಳಿಸುತ್ತಾರೆ. ಹೀಗೆ ಹೆಣ್ಣಿನ ಶಾರೀರಕ ಬಲಹೀನತೆಯನ್ನು ಮುಂದುಮಾಡುವವರಿಗೆ—ಸಾಮರ್ಥ್ಯವೆಂದರೆ ಮಾನಸಿಕಸ್ಥೈರ್ಯ ಎಂಬ ಸರಳಸತ್ಯವನ್ನ ಸ್ಪಷ್ಟವಾಗಿ ಮನಗಾಣಿಸುವ ಪ್ರಯತ್ನಗಳು ಇಂದಿನವರೆಗೂ ಇನ್ನೂ ನಡದೇ ಇಲ್ಲವೆಂದು ಸ್ತ್ರೀ ಶಕ್ತಿ ಸಂಘಟನೆ ನೋವಿನಿಂದಲೇ ಹೇಳಿದೆ.

ಹೋರಾಟದ ಬದುಕಿನುದ್ದಕ್ಕೂ ಸ್ತ್ರೀಯರು ಸಮಸ್ಯೆಗಳನ್ನು ಎದುರಿಸಲೇಬೇಕಿತ್ತು. ಹೀಗೆ ತೆಲಂಗಾಣದ ಮಹಿಳೆ ಎದುರಿಸಿದ ಇನ್ನೊಂದು ಬಹುಮುಖ್ಯ ಸಮಸ್ಯೆಯೆಂದರೆ ಗರ್ಭ ಧರಿಸುವುದರ ಕುರಿತದ್ದು. ಕಮಲಮ್ಮನ ಪ್ರಸಂಗವನ್ನು ಈ ಹಿಂದೆಯೇ ತಿಳಿಸಲಾಗಿದೆಯಷ್ಟೆ. ಆದರೂ ಆ ಕಾಲದಲ್ಲಿ ಗರ್ಭನಿರೋಧಕದಂತಹ ಪದ್ಧತಿಗಳು ಹೆಚ್ಚು ಬಳಕೆಯಲ್ಲಿ ಇರಲಿಲ್ಲವಾಗಿ ಈ ಬಗೆಯ ಸಮಸ್ಯೆಗಳು ತಲೆದೋರಿವೆ ಎನ್ನುವುದು ನಿಜವಾದರೂ ಹೆಣ್ಣೆಂದರೇನೇ ಸಮಸ್ಯೆ ಎಂದುಕೊಳ್ಳುತ್ತಲೇ—ಮಕ್ಕಳನ್ನು ಹೆರಬೇಕೆ, ಬಿಡಬೇಕೆ—ಲೈಂಗಿಕ ಸಮಸ್ಯೆ ಸ್ತ್ರೀ—ಪುರುಷರಿಬ್ಬರಿಗೂ ಸಂಬಂಧಿಸಿದ ಸಮಸ್ಯೆಯೇ ಅಲ್ಲವೇ ಎಂಬ ವಿಷಯದಲ್ಲಿ ಅಜ್ಞಾನ, ಗೊಂದಲಗಳನ್ನು ಉಳಿಸಿಕೊಂಡೂ ಚಳವಳಿ ಮಹಿಳೆಯ ಅಗತ್ಯವನ್ನು ಬಯಸುತ್ತಿತ್ತು. ಬಾಹ್ಯ ಸಮಾಜದಲ್ಲಿನ ಈ ವಿಚಾರಗಳ ಕುರಿತು ಇರುವ ಗೊಂದಲ ಮತ್ತು ಅಸ್ಪಷ್ಟತೆಗಳನ್ನು ಗಮನಿಸಿದರೆ, ಪಾರ್ಟಿಯಲ್ಲೂ ಈ ವಿಚಾರಗಳ ಕುರಿತಂತೆ ಅಸ್ಪಷ್ಟತೆ ಯಾಕಿದೆಯೆಂಬುಮ ನಮಗೆ ತಿಳಿಯುತ್ತದೆ ಎನ್ನುತ್ತಾರೆ ಸ್ತ್ರೀ ಶಕ್ತಿ ಸಂಘಟನೆಯ ಸದಸ್ಯೆಯರು.

ಚಳವಳಿಯ ಹೊರಗೂ ಮತ್ತು ಒಳಗೂ ಮಹಿಳೆ ಎದುರಿಸಬೇಕಿದ್ದ ಇನ್ನೊಂದು ತಾಂತ್ರಿಕ ಸಮಸ್ಯೆ ಲೈಂಗಿಕ ಸಂಬಂಧಗಳ ಸ್ವರೂಪ ಕುರಿತಂತಾದ್ದಾಗಿದೆ. ಈ ವಿಚಾರದಲ್ಲೂ ಪಾರ್ಟಿಯಲ್ಲಿ ಖಚಿತತೆ ಇರಲಿಲ್ಲ. ಇಂತಹ ವೈರುಧ್ಯಗಳಿಗೆಲ್ಲ ಬಹುಶಃ ಅಂದಿನ ಪರಿಸ್ಥಿತಿಯ ಮಿತಿಗಳೂ ಕಾರಣವಾಗಿರಬಹುದು. ಆದರೂ ಪುರುಷನಲ್ಲಿ ಅಂತಹ ಕೋರಿಕೆ ಹುಟ್ಟಲು ಮೂಲ ಕಾರಣ ಹೆಣ್ಣೇ ಎಂಬ ಏಕಪಕ್ಷೀಯ ವಾದ ಮತ್ತು ಅಜ್ಞಾನದ ಮಾಮೂಲಿ ನಿಂದೆಯನ್ನು ಸ್ತ್ರೀ ಮೇಲೇ ಹೊರಿಸಲಾಗುತ್ತಿತ್ತಾದ್ದರಿಂದ, ಅಂತಹವೇ ಅಭಿಪ್ರಾಯಗಳು ಪಾರ್ಟಿಯ ಅನೇಕರಲ್ಲೂ ಇರುತ್ತಿತ್ತು. ಅನೇಕ ಸ್ತ್ರೀಯರೂ ಸಹ ಪುರುಷ ಪ್ರಧಾನ ಮೌಲ್ಯಗಳಿಗೆ ಬಗ್ಗಿಹೋದ ಮನಃಸ್ಥಿತಿಯಲ್ಲಿ ಅದನ್ನು ನಿಜವಿರಬೇಕೆಂದೇ ನಂಬಿದ್ದರಂತೆ!

ಚಳವಳಿಯಂತಹ ಅನಿವಾರ್ಯ ಸಂದರ್ಭಗಳಲ್ಲಿ ಕಲೆತು ಬದುಕುವಾಗ ಹುಟ್ಟುವ ಸಮಸ್ಯೆಗಳಿಗೆ—ಸಿದ್ಧಾಂತದ ಅನುಕೂಲಕ್ಕೆ ತಕ್ಕಂತಹ ತಕ್ಷಣದ ಮತ್ತು ಸಾಂದರ್ಭಿಕ ಪರಿಹಾರಗಳನ್ನು ಹುಡುಕದೆ, ಸಮಸ್ಯೆಯನ್ನೇ ಪಕ್ಕಕ್ಕಿಟ್ಟುಬಿಡುವ ಪರಿಪಾಠದಿಂದಾಗಿಯೇ ಇಂದಿಗೂ ಹೆಣ್ಣಿನ ಬಗೆಗಿನ ಅಪನಂಬಿಕೆ, ಅನುಮಾನಗಳು ಮನಸ್ಸಿನ ರೋಗಗ್ರಸ್ತ ಭಾಗವಾಗಿ ಉಳಿದುಬರುವಂತಾಗಿದೆ. ಇಂತಹ ಸಮಸ್ಯೆಗಳಿಗೆ ಪರಿಹಾರ ದೊರೆಯದೇ ಹೋಗುವವರೆಗೂ ಚಳವಳಿಗ

18ನೇ ಪುಟ ನೋಡಿ.

ಮಹಿಳೆ ಮತ್ತು ಕನ್ನಡ ಸಾಹಿತ್ಯ

ಸಾಹಿತ್ಯವನ್ನು ಮಹಿಳಾ ಸಾಹಿತ್ಯ, ಪುರುಷ ಸಾಹಿತ್ಯ ಎಂದು ವಿಭಜಿಸಿ ನೋಡುವುದು ಅತ್ಯಂತ ಕೃತಕವಾದರೂ, ಯೂನತ್ತಿನಿಂದಲೋ ಪುರುಷ ಪ್ರಧಾನ ಮೌಲ್ಯಗಳ ಮೇಲುಗೈ ಆಗಿರುವ ನಮ್ಮ ದೇಶದ ಸಾಮಾಜಿಕ ಪರಿಸರದಲ್ಲಿ, ಮಹಿಳೆಯ ಮನಸ್ಸು ತನ್ನನ್ನು ತಾನು ಸಾಹಿತ್ಯಾಭಿವ್ಯಕ್ತಿಯ ಮೂಲಕ ಪ್ರಕಟಿಸಿಕೊಂಡಿರುವ ಕ್ರಮವನ್ನು ವಿಶ್ಲೇಷಿಸಿ ನೋಡುವುದು ಅಗತ್ಯವಾಗಿದೆ. ಅದರಲ್ಲಿಯೂ ಮಹಿಳೆಯರೇ ಮಹಿಳೆಯರ ಬರಹಗಳನ್ನು ಕುರಿತು ವಿಚಾರ ಮಾಡುವ ಒಂದು ಸಂದರ್ಭವನ್ನು ಕಲ್ಪಿಸಿರುವುದು ಈ ವಿಚಾರ ಸಂಕಿರಣದ ವೈಶಿಷ್ಟ್ಯವಾಗಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ.

ಈ ಮೇಲ್ಕಂಡ ಉದ್ದೇಶದಿಂದ 7-10-89ರಂದು ಹಾಸನದಲ್ಲಿ 'ಮಹಿಳೆ ಮತ್ತು ಕನ್ನಡ ಸಾಹಿತ್ಯ' ವೆಂಬ ವಿಚಾರ ಸಂಕಿರಣ ನಡೆಯಿತು. ಡಾ. ದೇ. ಜವರೇಗೌಡ ಇವರಿಂದ ಉದ್ಘಾಟಿಸಲ್ಪಟ್ಟ ಈ ಸಂಕಿರಣದಲ್ಲಿ ಅನೇಕ ಲೇಖಕಿಯರು ಭಾಗವಹಿಸಿದ್ದರು.

ಮೊದಲ ಘೋಷ್ಠಿಯಲ್ಲಿ 'ಪರಂಪರೆ ಮತ್ತು ಮಹಿಳೆ' ಕುರಿತು ಮಾತನಾಡಿದ ಬಿ. ಎಸ್. ವೆಂಕಟಲಕ್ಷ್ಮಿ ಇವರು ಕೊಡಗಿನ ಗೌರಮ್ಮ, ಸರಸ್ವತೀಬಾಯಿ ರಾಜವಾಡೆ, ತ್ರಿವೇಣಿ, ಇಂದಿರಾ, ವಾಣಿ, ಅನುಪಮ, ರಾಜಲಕ್ಷ್ಮಿ, ವೀಣಾ ಮುಂತಾದವರ ಬರಹಗಳ ಉಲ್ಲೇಖಿಸಿ ಮಾತನಾಡಿದರು. ಜೊತೆಗೆ ಮಹಿಳಾ ಬರಹಕ್ಕೆ ಸಾಮಾಜಿಕ ಮಿತಿಗಳು ಕಾರಣವಾಗಿಲ್ಲ, ಆಗಬೇಕಿಲ್ಲ ಎಂದು ನುಡಿದರು.

'ಕನ್ನಡ ಸಾಹಿತ್ಯ' — ಒಂದು ಸ್ತ್ರೀ-ಪರ ದೃಷ್ಟಿ ಕುರಿತು ಮಾತನಾಡಿದ ಡಾ. ಸುಮಿತ್ರಾಬಾಯಿ ಸ್ತ್ರೀ — ಪರ ಎನ್ನುವ ಅನುಕಂಪದ ಹಿಂದಿನ ಕಲ್ಪನೆ ಹಾಗೂ ಈಗ ಕೇಳಿಬರುತ್ತಿರುವ ಸ್ತ್ರೀ — ವಾದದ ಹಿಂದಿನ ಪರಿಕಲ್ಪನೆಗೂ ವ್ಯತ್ಯಾಸ ಇದೆ ಎಂದು ಹೇಳಿ — ತಮ್ಮ ಲೇಖನದಲ್ಲಿ ಸ್ತ್ರೀ — ಪರ ದೃಷ್ಟಿಕೋನ ಕುರಿತು ಮಾತನಾಡಿದರು. ಸಾಹಿತ್ಯದಲ್ಲಿ ಪುರುಷ ಕೇಂದ್ರಿತ ಸಾಂಸ್ಕೃತಿಕ ಮೌಲ್ಯಗಳಿವೆ ಎಂದು ನುಡಿದ ಇವರು 1899 ರಲ್ಲಿ ಬಂದ ಗುಲ್ವಾಡಿ ವೆಂಕಟರಾವ್‌ರವರ 'ಇಂದಿರಾಬಾಯಿ' ಯ ಕಾದಂಬರಿಯಿಂದ ವಾಸುದೇವಾಚಾರ್ಯರ 'ಇಂದಿರಾ', ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹರಾಯ', ಕಾರಂತರ 'ಸರಸಮ್ಮನ ಸಮಾಧಿ' ಮಿರ್ಜಿ ಅಣ್ಣಾರಾಯರ 'ನಿಸರ್ಗ' ಇಂತಹ ಕಾದಂಬರಿಗಳಲ್ಲಿನ ಸ್ತ್ರೀ-ಪರವಾದ ದೃಷ್ಟಿಕೋನ ಕುರಿತು ಮಾತನಾಡಿದರು.

ವೆಂಕಟಲಕ್ಷ್ಮಿ ಹಾಗೂ ಡಾ॥ ಸುಮಿತ್ರಾ ಬಾಯಿ ಇಬ್ಬರ ಲೇಖನಗಳೂ ಸಹ ತಾವು ಆರಿಸಿಕೊಂಡ ಸಾಹಿತ್ಯದ ಬರಹಗಳಲ್ಲಿ ಮಹಿಳೆಯರ ಪಾತ್ರ ಸಂಪ್ರದಾಯ ಬದ್ಧವಾಗಿದೆಯೋ ಅಥವಾ ಪ್ರಗತಿಪರವಾಗಿದೆಯೋ ಎನ್ನುವ ಹಂತದಲ್ಲಿಯೇ ಮುಕ್ತಾಯವಾಯಿತು. ಆದರೆ ಸ್ತ್ರೀ — ವಾದದ ಪ್ರಶ್ನೆಗಳು ಸಾಹಿತ್ಯದಲ್ಲಿ ಹುಟ್ಟಿಕೊಳ್ಳಲು ಅಸಮರ್ಥವಾದುದನ್ನು ಯಾವುದೇ ಒಂದು ತಾತ್ವಿಕ ಚೌಕಟ್ಟಿನಲ್ಲಿ ಹಿಡಿದಿಡುವತ್ತ ಸಾಗಿರದಿದ್ದುದು ನಿರಾಶಾದಾಯಕವಾಗಿತ್ತು.

ಇದೇ ಘಾಟಿಯಲ್ಲಿ 'ಪ್ರಾಚೀನ ಕನ್ನಡ ಲೇಖಕಿಯರು, ಮರು ಪರಿಶೀಲನೆ' ಯನ್ನು ವಿಮರ್ಶಿಸಿದ ಲೀಲಾವತಿ ಎಸ್. ರಾವ್‌ರವರು ಪ್ರಗತಿಶೀಲ ಲೇಖಕ ನಿರಂಜನರ 'ಬನಶಂಕರಿ' ಯಿಂದ ತಮ್ಮ ಮಾತುಗಳನ್ನು ಪ್ರಾರಂಭಿಸಿದರು. ವಚನ ಸಾಹಿತ್ಯದಲ್ಲಿ ಇದ್ದ ಚಳವಳಿಯಿಂದಾಗಿ ಅಕ್ಕ ಮಹಾದೇವಿಗಿದ್ದ ಸವಲತ್ತನ್ನು, ರಾಜಾಶ್ರಯದಲ್ಲಿದ್ದ ಹೊನ್ನಮ್ಮನಿಗಿದ್ದ ಸವಲತ್ತನ್ನು ಪ್ರಸ್ತಾಪಿಸಿದ ಇವರು ಇವೆರಡು ಇರದ ಗಿರಿಯಮ್ಮ ಬೆಳಕಿಗೆ ಬರಲಿಲ್ಲ ಎಂದರು. ಈಕೆಯ ಸಾಹಿತ್ಯ ಸಂಚಿ ಹೊನ್ನಮ್ಮನಿಗಿಂತ ಉತ್ತಮವಾಗಿತ್ತು ಎಂದು ಇವರು ನುಡಿದರು. ಈಗಿನ ಪರಿಸ್ಥಿತಿಯಲ್ಲೂ ಬೆಳಕಿಗೆ ಬರಲು ಯಾರನ್ನೋ ಅವಲಂಬಿಸುವ ಸ್ಥಿತಿಯೇ ಇದೆ ಎಂದ ಇವರು, ಶೃಂಗಾರಮ್ಮ, ಚಲುವಮ್ಮ, ಅಕ್ಕಮಹಾದೇವಿ, ಹೊನ್ನಮ್ಮ, ಇವರ ಸಾಹಿತ್ಯಕ್ಕೆ ಭಕ್ತಿಯೇ ಪ್ರೇರಣೆಯಾಗಿತ್ತು ಎಂದರು.

ವೀಣಾ ಶಾಂತೇಶ್ವರ್‌ರವರ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿದ್ದ ಎಚ್. ಎಸ್. ಪಾರ್ವತಿ ಇವರು ಮಹಿಳೆಯರು ಬಲಹೀನರು ಎಂಬ ಪ್ರಶ್ನೆಯೇ ಸಾಹಿತ್ಯದಲ್ಲಿ ಉದ್ಭವಿಸುವುದಿಲ್ಲ, ಮಹಿಳೆಯರು ಬಲ ಹೀನರಾಗಿದ್ದರೆ, ಎಲ್ಲಾ ಜಟ್ಟಿಗಳೂ ಒಳ್ಳೆಯ ಸಾಹಿತಿಗಳಾಗಬೇಕಿತ್ತು ಎಂದು ಮಹಿಳೆಯರು ಬಲಹೀನರು ಎನ್ನುವವರನ್ನು ತರಾಟೆಗೆ ತೆಗೆದುಕೊಂಡರು. ಶ್ರೀರಂಗರ ಕಾದಂಬರಿಗಳಲ್ಲಿ ಹೆಣ್ಣಿನ ಪಾತ್ರದ ಸೃಷ್ಟಿ ಮಹತ್ವದ್ದಾಗಿದೆ ಎಂದರು.

ಎರಡನೇ ಘೋಷ್ಠಿಯಲ್ಲಿ ಡಾ॥ ಶಕುಂತಲಾ ದುರಗಿಯವರು 1913—30 ರವರೆಗಿನ ಸಾಹಿತ್ಯದ ಹಿಂದಿನ ಸಾಮಾಜಿಕ ಪ್ರೇರಣೆಗಳನ್ನು ಗುರುತಿಸಿದರು.

ಕನ್ನಡ ಸಾಹಿತ್ಯದಲ್ಲಿ ಸ್ತ್ರೀ — ಸಂವೇದನಾ ಜಾಗೃತಿ

ಮತ್ತು ಮಹಿಳಾ ಚಳವಳಿ ಕುರಿತು ಮಾತನಾಡಿದ ಡಾ॥ ವಿಜಯಾ ದಬ್ಬೆಯವರು ಮಹಿಳಾ ಚಳವಳಿಯ ಇತಿಹಾಸ ಹಾಗೂ ಮಹಿಳಾ ಸಾಹಿತ್ಯದ ಮೇಲೆ ಅದರ ಪ್ರಭಾವ ಕುರಿತು ವಿಶ್ಲೇಷಣಾತ್ಮಕವಾಗಿ ಮಾತನಾಡಿದರು. ಪಂಡಿತ ರಮಾಬಾಯಿಯವರ ಹೋರಾಟವನ್ನು ನೆನಪಿಸಿದ ಇವರು, 19ನೇ ಶತಮಾನದಲ್ಲಿ ಉದಾರವಾದಿಗಳಿಂದ ಪ್ರಾರಂಭವಾದ ಮಹಿಳಾ ಚಳವಳಿಯನ್ನು ಗುರುತಿಸುತ್ತಾ ಈ ಹಂತದಲ್ಲಿ ಜೆಂಡರ್ ಪ್ರಶ್ನೆಗಳು ಮೂಲಭೂತವಾಗಿ ಚರ್ಚೆಗೊಳಗಾಗಲಿಲ್ಲ ಎಂದರು. 70 ರ ದಶಕದ ಸ್ವಾಯತ್ತ ಮಹಿಳಾ ಚಳವಳಿ ರಾಜಕೀಯ ಪಕ್ಷಗಳ ಆಶಯಗಳಿಗಿಂತ ಭಿನ್ನ ಆಶಯ ಹೊಂದಿದೆ ಎಂದರು. ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ ಹಾಗೂ ಸೆಕ್ಸಿಸ್ಟ್ ನಡತೆಗಳ ವಿರುದ್ಧ ಹೋರಾಡುವುದು ಮಹಿಳಾ ಚಳವಳಿಯ ಹೋರಾಟದ ಗುರಿ ಆಗಿದೆ ಎಂದರು (ಪಿತೃ ಪ್ರಧಾನ ಸಂಸ್ಥೆ ಹಾಗೂ ಸೆಕ್ಸಿಸ್ಟ್ ನಡತೆಗಳ ವಿರುದ್ಧ ಎಂದು ಹೇಳಿದ ಇವರ ತಾತ್ವಿಕ ಪರಿಕಲ್ಪನೆ ಭಾರತದಲ್ಲಿನ ಮಹಿಳಾ ಚಳವಳಿಯ ಕಲ್ಪನೆಯಲ್ಲ. ಭಾರತದಲ್ಲಿನ ಮಹಿಳಾ ಗುಂಪುಗಳು ಪಿತೃಪ್ರಧಾನ ಸಂಸ್ಥೆಯ ಜೊತೆ ಬಂಡವಾಳ ಶಾಹಿ, ಫ್ಯೂಡಲ್ ವ್ಯವಸ್ಥೆ, ಜಾತಿ ಇತ್ಯಾದಿ ಬೇರೆ ಬೇರೆ ರಾಜಕೀಯ ಕಲ್ಪನೆಗಳೊಡನೆ ಮಹಿಳಾ ಸಮಸ್ಯೆಗಳನ್ನು, ಪ್ರಶ್ನೆಗಳನ್ನು ಹೊಸೆದುಕೊಂಡೇ ಕೆಲಸ ಮಾಡುತ್ತಿವೆ. ಬರಿಯ ಪಿತೃ ಪ್ರಧಾನ ಸಂಸ್ಥೆ ಹಾಗೂ ಸೆಕ್ಸಿಸ್ಟ್ ನಡತೆಗಳ ವಿರುದ್ಧದ ಚಳವಳಿಗಳು ಪಾಶ್ಚಿಮಾತ್ಯ ದೇಶಗಳಲ್ಲಿ ಮಾತ್ರ ಕಂಡು ಬರುತ್ತಿವೆ ಎಂಬುದು ನನ್ನ ಅನ್ನಿಸಿಕೆ. ಹಾಗೂ ಈ ದೃಷ್ಟಿಕೋನ ಬಹಳ ಸೀಮಿತವಾದದ್ದು ಎನ್ನಿಸುತ್ತದೆ.)

ಗಾಂಧೀವಾದದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಪೂರ್ವ ಲೇಖಕಿಯರ ಸಂವೇದನೆ ಹೇಗಿತ್ತು ಎಂಬುದನ್ನು ಕ್ರೋಢೀಕರಿಸಿದ ಇವರು 70 ರ ದಶಕದ ನಂತರದ ಮಹಿಳಾ ಚಳವಳಿ ಮಹಿಳಾ ಸಾಹಿತ್ಯದ ಮೇಲೆ ಉಂಟು ಮಾಡಿದ ಪ್ರಭಾವವನ್ನು ಗುರುತಿಸಿದರು. ಫೆಮಿನಿಸ್ಟ್ ಅಂದರೆ ಇನ್ನೊಂದು ಮುಖ ಫ್ಯೂಮನಿಸ್ಟ್ ಆಗಿರುವ ಫೆಮಿನಿಸಂನ ಆಶಯಗಳನ್ನು ಸಾಹಿತ್ಯದಲ್ಲಿ ಪ್ರತಿನಿಧಿಸುವ ಅಗತ್ಯವಿದೆ ಎಂದ ವಿಜಯರವರು ಬರಹಗಾರ್ತಿಯರು ಚಳವಳಿಯ ಭಾಗವಾಗಿಯೋ ಅಥವಾ ಆಗದೆಯೂ ಇದರಿಂದ ಪ್ರಭಾವಿತರಾಗಿದ್ದಾರೆ ಎಂದರು. ಈ ರೀತಿಯ ನಮ್ಮ ಪ್ರಯತ್ನಗಳು ಬಹುಶಃ ಮುಂದೆ ಈ ಎಲ್ಲಾ ಅಂಶಗಳನ್ನು ವ್ಯಕ್ತಿತ್ವದಲ್ಲಿ ತೊಡಗಿಸಿಕೊಂಡು ಬರೆಯುವ ಮಹಿಳೆಯರು ಸೃಷ್ಟಿಸುವ ಸಾಹಿತ್ಯಕ್ಕೆ ಸಿದ್ಧತೆಗಳಾಗಬಹುದು ಎಂದು ನುಡಿದರು.

ಕೊನೆಯದಾಗಿ ಸ. ಉಷಾರವರು ಕನ್ನಡ ಸಾಹಿತ್ಯದಲ್ಲಿ ಮಹಿಳಾ ವಿಮರ್ಶಕಿಯರ ಕೊಡುಗೆ / ಮಿತಿ ಕುರಿತು ವಿಶ್ಲೇಷಿಸಿದರು. ಅಧ್ಯಕ್ಷತೆ ವಹಿಸಿದ್ದ ಭಾನು ಮುಷ್ತಾಕ್ ಲೇಖಕಿಯರಿಗೆ ಹೆಣ್ಣೇ ಬಂಡವಾಳ ಎಂದರು. ಮಹಿಳೆಯರನ್ನು ಹಿಂದಕ್ಕೆ ತಳ್ಳಲು ಈಗ ಉಪಯೋಗಿಸಲ್ಪಡುತ್ತಿರುವ ತಂತ್ರ – ಚಾರಿತ್ರಿಕವಸಿ ಎಂದು ಹೇಳಿದ ಇವರು ಈ ಕಾರಣದಿಂದ ಸಾಕಷ್ಟು ಮಹಿಳೆಯರು ಮಹಿಳಾ ಹೋರಾಟಗಳಲ್ಲಿ ಕ್ರಿಯಾಶೀಲರಾಗುವುದಿಲ್ಲ ಎಂದರು. ಮಿಥ್ಯ ಬುದ್ಧಿ ಜೀವಿಗಳಿಂದ ಅನೇಕ ಸವಾಲುಗಳನ್ನು ಪ್ರಸ್ತುತದಲ್ಲಿ ಎದುರಿಸಬೇಕಾದುದರಿಂದ, ಇವರನ್ನು ವಿರೋಧಿಸುತ್ತಾ, ಇವರಿಗೆ ಪ್ರತ್ಯುತ್ತರ ಕೊಡುತ್ತಲೇ ನಾವು ಕಾರ್ಯಗತರಾಗುವುದು ಅಗತ್ಯವಾಗಿದೆ ಎಂದು ಇವರು ನುಡಿದರು.

ಎಚ್. ಎಸ್. ಸಿ.

ಸ್ತ್ರೀಯರ ವಿದ್ಯಾಭ್ಯಾಸ

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿ ಕೊಟ್ಟಿದ್ದಾಗ್ಯೂ ಹುಡುಗರ ಮತ್ತು ಹುಡುಗಿಯರ ವಿದ್ಯಾಭ್ಯಾಸದಲ್ಲಿ ವ್ಯತ್ಯಾಸಗಳನ್ನು ಇಂದು ಕಾಣಬಹುದಾಗಿದೆ. ಹೀಗಿದ್ದರೂ ಕಳೆದ ಮೂವತ್ತೈದು ವರ್ಷಗಳಲ್ಲಿ ಸ್ತ್ರೀಯರ ವಿದ್ಯಾಭ್ಯಾಸದಲ್ಲಿ ಗಮನೀಯವಾದ ಬದಲಾವಣೆ ಕಂಡುಬಂದಿರುವುದು ಈ ಕೆಳಗಿನ ಅಂಕಿ ಅಂಶಗಳಿಂದ ಕಂಡುಬರುತ್ತದೆ.

		1950–51	1975–76
ಶಾಲೆಗೆ ಸೇರಿದ ಹುಡುಗಿಯರು 1–5 ನೇತರಗತಿಯವರೆಗೆ	6-11 (ವಯಸ್ಸು)	57·71	251·55 ಸಾವಿರ
ಶಾ. ಸೇ. ಹು. 6-8 ನೇತ. ವರೆಗೆ	11-14 (ವಯಸ್ಸು)	6·04	50·40 ಸಾವಿರ

ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಸಂಬಂಧ ಪಟ್ಟ ಸಮಸ್ಯೆಗಳನ್ನು ಆಳವಾಗಿ ಅಧ್ಯಯನ ಮಾಡುವ ಹಾಗೂ ಹುಡುಗಿಯರ ಮತ್ತು ಹುಡುಗರ ನಡುವೆ ಇರುವ ಅಂತರವನ್ನು ಕಡಿಮೆ ಮಾಡುವ ಉದ್ದೇಶದಿಂದ 1959 ರಲ್ಲಿ ಒಂದು ರಾಷ್ಟ್ರೀಯ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯ ಸಲಹೆಯ ಮೇರೆಗೆ 1959ರಲ್ಲಿ ನ್ಯಾಶನಲ್ ಕೌನ್ಸಿಲ್ ಒಂದನ್ನು ರಚಿಸಲಾಯಿತು. ಈ ಕೌನ್ಸಿಲ್ ಹುಡುಗಿಯರ ವಿದ್ಯಾಭ್ಯಾಸ ಮತ್ತು ಮಹಿಳೆಯರ ಅಭ್ಯುದಯಕ್ಕೆ ಸಂಬಂಧ ಪಟ್ಟ ಕಾರ್ಯಕ್ರಮ, ಯೋಜನೆಗಳಿಗೆ ಸಂಬಂಧ ಪಟ್ಟಂತ ವಿವಿಧ ರೀತಿಯ ಸಲಹೆಗಳನ್ನು ನೀಡಿತು. ರಾಷ್ಟ್ರೀಯ ಸಮಿತಿ ಮಾಡಿದ ಸಲಹೆಗಳನ್ನು ಕೌನ್ಸಿಲ್ ಸಾಮಾನ್ಯವಾಗಿ ಒಪ್ಪಿಕೊಂಡಿದ್ದರೂ, ವಿಶ್ವವಿದ್ಯಾನಿಲಯದ ಹಂತದಲ್ಲಿ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ಒಟ್ಟಿಗೆ ಓದಬೇಕೆಂಬುದನ್ನು ಕಡ್ಡಾಯ ನಿಯಮ ಮಾಡಬೇಕೆಂಬುದನ್ನು ಮತ್ತು ಮಹಿಳೆಯರಿಗಾಗಿಯೇ ಪ್ರತ್ಯೇಕ ಕಾಲೇಜುಗಳನ್ನು ತೆರೆಯುವುದನ್ನು ಪ್ರೋತ್ಸಾಹಿಸಬಾರದೆಂಬ ಸಲಹೆಗಳನ್ನು ತಳ್ಳಿಹಾಕಿತು. ಇಂತಹ ಸಲಹೆಗಳು ಸ್ತ್ರೀಯರ ಅಭಿವೃದ್ಧಿಯನ್ನು ತಡೆಯುತ್ತವೆಯೆಂಬುದು ಕೌನ್ಸಿಲ್‌ನ ವಾದವಾಗಿತ್ತು.

ಳಲ್ಲಿ ಹೆಣ್ಣು ತನ್ನನ್ನು ಸಂಪೂರ್ಣ ತೊಡಗಿಸಿಕೊ
ವುಳ್ಳುದಕ್ಕೂ ಅವಕಾಶವಿಲ್ಲದೆ ಹೋಗುತ್ತದೆ.
ಹೆಣ್ಣು—ಗಂಡಿನ ಸಂಬಂಧಗಳೇ ಹಾಗೆ—ಸಂಕೀರ್ಣ
ಮತ್ತು ಜಟಿಲ, ಅದು ಪ್ರಕೃತಿಯೇ ತೀರ್ಮಾನಿಸಿರುವ
ಒಂದು ವ್ಯವಸ್ಥೆ ಎಂದು ಉಡಾಫೆಯ ಮಾತನ್ನಾಡಬ
ಹುದು. ಆದರೆ ಅದರಿಂದ ಸಮಸ್ಯೆಯನ್ನು ಎದುರಿಸಿ
ದಂತಾಗಲಿಲ್ಲ. ಹಸಿವು, ನೀರಡಿಕೆಗಳ ಹಾಗೆ ಹೆಣ್ಣು—
ಗಂಡಿನ ಸಂಬುಧವೆನ್ನುವುದೂ ಒಂದು ಸಹಜ ಹಾಗೂ
ಸಮಾನವಾದ ಜೈವಿಕ ಸಮಸ್ಯೆ ಎಂಬ ಸತ್ಯವನ್ನು
ಒಪ್ಪಿಯೇ ಉಳಿದೆಲ್ಲ ನೀತಿಗಳನ್ನು ರೂಪಿಸಬೇಕಾಗು
ತ್ತದೆ. ಹೆಣ್ಣಿನ ಮಾನಸಿಕ ವ್ಯಕ್ತಿತ್ವವನ್ನು ಗುರುತಿ
ಸಲು—ಪ್ರಾರಂಭಿಸಿದ ಒಡನೆಯೇ ದೈಹಿಕ ಮತ್ತು ಜೈವಿ
ಕವಾದ ಆಕೆಯ ಸಮಸ್ಯೆಗಳಲ್ಲಿ ಪುರುಷನ ಪಾತ್ರ
ಮತ್ತು ಹೊಣೆಗಾರಿಕೆ ಎಷ್ಟು ಎಂಬ ನಿಜಗಳೂ ಗೋಚರಿ
ಸತೊಡಗುತ್ತದೆ. ಇಂದಿಗೂ ಇದು ಸಮಸ್ಯೆಯೇ ಆಗಿರು
ವುದರಿಂದ ಜಗತ್ತಿನ ಇತರ ದೇಶಗಳಲ್ಲಿ ನಡೆದ, ನಡೆಯು
ತ್ತಿರುವ ಚಳವಳಿಗಳಲ್ಲಿ ಈ ಸಮಸ್ಯೆಯನ್ನು ಹೇಗೆ ಬಗೆಹ
ರಿಸಲಾಗಿದೆಯೆಂಬ ಸೂಕ್ಷ್ಮ ವಿವರಗಳನ್ನು ನಾವು ಅಧ್ಯ
ಯನ ಮಾಡುವುದೂ ಒಳಿತೆನಿಸುತ್ತೆ. ಹೆಣ್ಣು—ಗಂ
ಡಿನ ನಡುವಿನ ಸಂಬಂಧಗಳಿಂದೊದಗುವ ಸಮಸ್ಯೆ,
ಗರ್ಭ ಧರಿಸುವಿಕೆ, ಹೆರಿಗೆ ಮತ್ತು ಶೌಚ ಸಮಸ್ಯೆಗಳ
ನ್ನೆಲ್ಲ ಸಾಮಾಜಿಕ ಸಮಸ್ಯೆಗಳೆಂದು ಪರಿಗಣಿಸಿ, ಅವು
ಗಳಿಗೆ ರಾಜಕೀಯ ಸ್ವರೂಪದ ಪರಿಹಾರ ಕಂಡುಕೊ
ಳ್ಳುವ ದಿಕ್ಕಿನಲ್ಲಂತೂ ಆಲೋಚನೆ ಸಾಗದೆಹೋದರೆ
ಅಷ್ಟರಮಟ್ಟಿಗೆ ತಮ್ಮ ಮತ್ತು ತಾವಿರುವ ಸಮಾಜದ
ವಿಮೋಚನೆಯ ಬಗ್ಗೆ ಮಾತನಾಡುವುದೆಲ್ಲ ಪುರುಷವ
ರ್ಗದ ಅಪಾಢಭೂತಿತನ ಮಾತ್ರವಾಗುತ್ತದೆ. "ಲೈಂ
ಗಿಕತೆ" ಎನ್ನುವುದು ಕೇವಲ ಶರೀರಕ್ಕೆ ಮಾತ್ರ ಸಂಬಂ
ಧಿಸಿರುವುದಾಗಿರದೆ ಸಾಂಸ್ಕೃತಿಕ ಮತ್ತು ರಾಜಕೀಯ
ವಾದದ್ದೆಂಬ ತಿಳಿವಳಿಕೆಯಿಲ್ಲದ ಅಜ್ಞಾನವಾಗುತ್ತದೆ.

ತಾವೆದುರಿಸುವ ವೈರುಧ್ಯಗಳನ್ನು ಹೇಗೆ ಬಗೆಹ
ರಿಸಿಕೊಳ್ಳಬೇಕೆಂಬ ರಾಜಕೀಯ ಅರಿವು ಅನೇಕ ಮಹಿ
ಳೆಯರಿಗಿಲ್ಲದಿದ್ದ ಸಂದರ್ಭದಲ್ಲಿ ಪಾರ್ಟಿ ನೀಡಿದ ರಾಜ
ಕೀಯ ಶಿಕ್ಷಣ ಎಂತಹುದೆಂಬುದನ್ನೂ ಸ್ತ್ರೀ ಶಕ್ತಿ ಸಂಘ
ಟನೆಯವರು ಪರಿಶೀಲಿಸಿದ್ದಾರೆ,

ಸ್ತ್ರೀಯರಲ್ಲಿ ಹೇಗೆ ಜಾಗೃತಿಯನ್ನು ತರಬೇಕೆಂಬ
ವಿಷಯದಲ್ಲಿ ಪಾರ್ಟಿಗೂ ಹೆಚ್ಚಿನ ಸ್ಪಷ್ಟತೆ ಇರಲಿಲ್ಲ
ವೆಂದು ದ್ರೋಣವಲ್ಲಿ ಅನಸೂಯ ಹೇಳುತ್ತಾಳೆ.
ಹೆಚ್ಚಿನ ಸ್ತ್ರೀಯರು ನಾಯಕತ್ವ ಸ್ಥಿತಿಗೆ ಯಾಕೆ ತಲುಪ
ಲಾಗಲಿಲ್ಲವೆಂದರೆ ಸಂಪ್ರದಾಯದ ಸಂಕೋಲೆಗಳ
ಲ್ಲಿದ್ದ ಸ್ತ್ರೀಯರನ್ನು ಪಾರ್ಟಿ ರಾಜಕೀಯವಾಗಿ ತರ
ಬೇತುಗೊಳಿಸದಿದ್ದುದೇ ಕಾರಣವೆಂದು ದೂರುತ್ತಾಳೆ.
ಪಕ್ಷ ಸ್ತ್ರೀ ಸಮಸ್ಯೆಯನ್ನು ಅವರ ಹಿಂದುಳಿದಿರುವಿಕೆ
ಯೆಂದು ಪರಿಗಣಿಸಿತೋ ಅಥವ ತನ್ನ ರಾಜಕೀಯ ಶಿಕ್ಷ
ಣದಲ್ಲಿನ ಲೋಪವೆಂದು ಅರಿತುಕೊಂಡಿತೋ ಅರ್ಥ
ವಾಗುವುದಿಲ್ಲ. ಸ್ತ್ರೀಯರಿಗೆ ಅರ್ಥವಾಗದ ರಾಜ
ಕೀಯ ಶಿಕ್ಷಣಕ್ಕೆ ಯಾವ ಬೆಲೆ ಇದೆಯೆಂದು ಪ್ರಶ್ನಿಸ
ಬೇಕಾದ ಹೊಣೆ ಸ್ತ್ರೀಯರ ಮೇಲಿದೆಯೆಂದು ಸಂಘಟನೆ
ಭಾವಿಸುತ್ತದೆ. ರಾಜಕೀಯ ಶಿಕ್ಷಣವೆನ್ನುವುದು ಸ್ತ್ರೀ
ಸಮುದಾಯಕ್ಕೂ ಎಟುಕುವಂತಾಗಬೇಕಾದರೆ, ಅದು
ಪುರುಷ ಪ್ರಧಾನ ಮೌಲ್ಯಗಳ ಪಬ್ಲಿಕ್ ಪ್ರಪಂಚದ ಎಲ್ಲೆ
ಕಟ್ಟುಗಳನ್ನು ಮೀರಿ ಮಹಿಳೆಯರ ಪ್ರೈವೇಟ್ ಪ್ರಪಂ
ಚದ ವಿಚಾರಗಳನ್ನೂ ತಾತ್ವಿಕ ಸ್ವರೂಪದಲ್ಲಿ ಒಳಗೊ
ಳ್ಳುವಂತಾಗಬೇಕೆಂದು ಸ್ತ್ರೀ ಶಕ್ತಿ ಸಂಘಟನೆ ತನ್ನ ಖಚಿತ
ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ಮಹಿಳಾ ಚಳವಳಿ ಎತ್ತುವ ಮುಖ್ಯ ಪ್ರಶ್ನೆಗ
ಳಿವು: ಸ್ತ್ರೀ ಸಮಸ್ಯೆ ರಾಜಕೀಯ ಸಮಸ್ಯೆಯಾಗಿ
ಗುರುತಿಲ್ಪಡುತ್ತಿದಯೆ?, ಮಹಿಳೆಯರ ಪ್ರೈವೇಟ್
ಪ್ರಪಂಚದ ಸಮಸ್ಯೆಗಳ ಬಗ್ಗೆ ಆಲೋಚಿಸದೆಯೇ ಸಮ
ಸಮಾಜದ ಕನಸಿನತ್ತ ಹೆಜ್ಜೆ ಹರಿಸಲು ಸಾಧ್ಯವೆ?
ಹೀಗಾಗದೆ ಹೋದಾಗ ಚಳವಳಿಯ ನಂತರ ಮಹಿಳೆ
ಮತ್ತೆ ತನ್ನ ಹಳೆಯ ಸ್ಥಿತಿಗೇ ಮರಳುವಂತಾಗದೆ?
ಸಧ್ಯದ ಸ್ತ್ರೀ ಸಮಸ್ಯೆಗೆ ವಿಮುಖವಾದ ರಾಜಕಾರಣದ
ಪರಿಧಿಯನ್ನು ದಾಟಿ ಸುಧಾರಿತ ಸಿದ್ಧಾಂತಗಳನ್ನು ರೂಪಿ
ಸಿಕೊಳ್ಳಬೇಕಾದ ಅಥವಾ ಪುನರ್ ವ್ಯಾಖ್ಯಾನಿಸಿಕೊಳ್ಳ
ಬೇಕಾದ ಅಗತ್ಯ ಇದೆಯೆ? ಇಲ್ಲವೆ?

ಆದರೆ ಇಂದಿಗೂ ಯಾವುದೇ ಎಡಪಂಥೀಯ
ಸಂಘಟನೆಗಳು ಮಹಿಳೆಯ ಈ ಎಲ್ಲ ಸಮಸ್ಯೆಗಳನ್ನು
ಉನ್ನತ ನಾಗರಿಕ ಹಂತದಲ್ಲಿ ಪರಿಶೀಲಿಸಲು ಬೇಕಾದ
ಅಗತ್ಯ ಸಹನೆಯನ್ನು ಸಾಧಿಸಿಕೊಂಡಿಲ್ಲವೆಂದೇ ಅನಿ
ಸುತ್ತದೆ. ಜನ ಸಂಖ್ಯೆಯ ಅರ್ಧದಷ್ಟಿರುವ ಮಹಿಳಾ
ಪ್ರತಿಭೆ ವಿಕಸನಗೊಂಡು ಉಪಯೋಗಕ್ಕೊಳಪಟ್ಟ ದಿನ
ನಾವೂ ನೀವೂ ಇರುವ ಸಮಾಜ ಅದರ ಭವ್ಯ ಬದು
ಕಿನ ಸೋಪಾನದಲ್ಲಿರುತ್ತದೆಂಬ ತಿಳಿವಳಿಕೆಯನ್ನು ಎಡ
ಪಂಥೀಯ ಪಕ್ಷಗಳಷ್ಟೇ ಏಕೆ, ಎಲ್ಲರೂ ಅರಿಯಬೇ
ಕಾದ ಸತ್ಯವಾಗಿದೆ.

ಮೂಲ:— "ಮನಕು ತೆಲಿಯನಿ ಮನ ಚರಿತ್ರ"

ಸೂಜಾನೆ ಲೆಂಗಲೆನ್

೧೯೭೭ರಲ್ಲಿ "ವಿಂಬಲ್ಡನ್" ಕೇವಲ ಪುರುಷರ ಆಟವಾಗಿತ್ತು. ನಂತರ ೧೮೮೪ರಲ್ಲಿ ಪುರುಷ ಹಾಗೂ ಮಹಿಳಾ ಟೂರ್ನ್‌ಮೆಂಟ್ ಆರಂಭವಾದಾಗ ಮಹಿಳಾ ಟೂರ್ನ್‌ಮೆಂಟ್ ಕೂಡಾ ಆರಂಭವಾಯಿತು.

ಮೊನ್ನೆ ಮೊನ್ನೆ ತಾನೆ ವಿಂಬಲ್ಡನ್ ಕಿರೀಟ ಧರಿಸಿರುವ "ಸ್ಟೆಫಿ ಗ್ರಾಫ್" ಳ ಆಟವನ್ನು ದೂರದರ್ಶನದಲ್ಲಿ ವೀಕ್ಷಿಸಿದ ಸಾವಿರಾರು ಪ್ರೇಕ್ಷಕರಿಗೆ ವಿಂಬಲ್ಡನ್ ಇನ್ನೂ ಮನದಲ್ಲಿ ಹಚ್ಚ ಹಸಿರಾಗಿರಬಹುದು. ಸ್ಟೆಫಿ ಹಾಗೂ ಮಾರ್ಟಿನಾ ಮಧ್ಯದ ಈ ಆಟವನ್ನು ಗಮನಿಸಿದ ನಮ್ಮಲ್ಲಿ ಬಹುಮಂದಿಗೆ ಈ ಮಹಿಳಾ ಆಟದ ಅಂಕಣಕ್ಕೆ ದಿಟ್ಟ ಹೆಜ್ಜೆ ಇಟ್ಟು ಭದ್ರ ಅಡಿಪಾಯ ಹಾಕಿದ ಫ್ರಾನ್ಸ್‌ನ ಸೂಜಾನೆ ಲೆಂಗ್‌ಲೆಸ್‌ಳ ಹೆಸರು ಗೊತ್ತಿರಲಿಕ್ಕಿಲ್ಲ.

ಫ್ರಾನ್ಸಿನ ಸೂಜಾನೆ ಲೆಂಗ್‌ಲೆನ್ "ವಿಂಬಲ್ಡ್" ಮಹಿಳಾ ಆಟಗಾರ್ತಿಯರಲ್ಲಿ ಮೊದಲ ಹಾಗೂ ಅತ್ಯಂತ ಉತ್ತಮ ಆಟಗಾರ್ತಿಯಾಗಿ ಪ್ರಭುತ್ವ ಸಾಧಿಸಿದವಳು. ನಂತರದ ವರ್ಷಗಳಲ್ಲಿ ಹೆಲ್ಲ್ ವಿಲ್ಸ್ ಮೂಡಿ, ಮಾರ್ಗರೇಟ್ ಕೋರ್ಟ್ ಮತ್ತು ಬಿಲ್ಲಿ ಜೀನ್ ಕಿಂಗ್ ಇವರು ಸೂಜಾನೆ ಲೆಂಗ್‌ಲೆನ್‌ಳ ವಿಂಬಲ್ಡನ್ ಪ್ರಭುತ್ವಕ್ಕೆ ಸವಾಲೆಸೆದರು. ಆದರೂ ಲೆಂಗ್‌ಲೆನ್‌ಳು ಈ ಆಟಕ್ಕೆ ಪ್ರವೇಶಿಸಿದ್ದು ನಂತರದ ಆಟಗಾರ್ತಿಯರಿಗಿಂತ ಹೆಚ್ಚು ನಾಟಕೀಯ ಹಾಗೂ ಆಕರ್ಷಕ ಸುದ್ದಿಯಾಗಿದೆ.

ಸೂಜಾನೆ ಲೆಂಗ್‌ಲೆನ್ ಅವರ ತಂದೆ—ತಾಯಿಗೆ ಒಬ್ಬಳೇ ಮಗಳು. ಅವಳಿಗೆ ಹನ್ನೊಂದು ವರ್ಷವಾದಾಗ ಅವಳ ತಂದೆ ಅವಳಿಗೆ ಒಂದು ರಾಕೆಟ್ ಕೊಟ್ಟರು. ಆಗ ಅವಳು ತೋರಿಸಿದ ಸಹಜ ಆಸಕ್ತಿ ಗಮನಿಸಿ ಅವಳನ್ನು "ವಿಂಬಲ್ಡನ್" ನಲ್ಲಿ ಛಾಂಪಿಯನ್ ಮಾಡಲು ನಿರ್ಧರಿಸಿದರು. ಅವರು ಆಟದಲ್ಲಿ ಯಾವ ರೀತಿ ತರಬೇತಿಗೊಳಿಸಿದರೆಂದರೆ, ೧೯೧೯ರಲ್ಲಿ "ವಿಂಬಲ್ಡನ್" ನಲ್ಲಿ ಈಕೆ ಸುಂಟರಗಾಳಿಯಂತೆ ಆಡಿ ಒಮ್ಮೆಲೇ ಛಾಂಪಿಯನ್ ಆದಳು. ಅನಂತರ ೫ ವರ್ಷಗಳ ಕಾಲ ನಿರಂತರವಾಗಿ ೧೯೨೩ರವರೆಗೆ ಈಕೆ ಛಾಂಪಿಯನ್ ಆಗಿಯೇ ಮುಂದುವರೆದಳು. ೧೯೨೫ರಲ್ಲಿ ಈಕೆ ಈ ಪಟ್ಟ ಕಳೆದುಕೊಳ್ಳಬೇಕಾಯಿತು.

ಲೆಂಗ್‌ಲೆನ್ ಮಹಿಳಾ ಟೆನಿಸ್‌ನಲ್ಲಿ ಹೊಸ ಮಾದರಿಗಳನ್ನು ಸೃಷ್ಟಿಸಿದಳಲ್ಲದೇ, ಆಟದ ಉಡುಪುಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಳು. ೧೯೧೯ರಲ್ಲಿ ವಿಂಬಲ್ಡನ್‌ಗೆ ಮೊಣಕಾಲವರೆಗೆ ಮಾತ್ರವಿದ್ದ ನವಿರಾದ ಉಡುಪನ್ನು ಧರಿಸಿ ಬಂದಳು. ಈ ಉಡುಪು ಸುತ್ತಮುತ್ತಲಿನವರಲ್ಲಿ ಸಾಕಷ್ಟು ಗೊಂದಲ ಎಬ್ಬಿಸಿ ವಿರೋಧಾತ್ಮಕ ಪ್ರತಿಕ್ರಿಯೆಗಳು ಕೇಳಿಬಂದವು. ಯಾವುದಕ್ಕೂ ಈಕೆ ಜಗ್ಗಲಿಲ್ಲ. ಲೆಂಗ್‌ಲೆನ್ ವಿವಿಧ ನಮೂನೆಯ ಉಡುಪುಗಳನ್ನು ಧರಿಸುತ್ತಲೇ ಆಡಿ ಸುತ್ತಮುತ್ತಲಿನವರಿಗೆ ಈ ಉಡುಪುಗಳ ಅಗತ್ಯವನ್ನು ಮನಗಾಣಿಸಿದಳು. ನಂತರದಲ್ಲಿ ಈ ಪ್ರತಿಭಟನೆಯ ಮಾತುಗಳು ನಿಂತುಹೋದವು. ಹೀಗೆ ಮುಂದಿನ ಆಟಗಾರ್ತಿಯರು ಉಡುಪಿನ ವಿಚಾರದಲ್ಲಿ ಎದುರಿಸಬೇಕಾದ ಅಪಮಾನ, ಅವಹೇಳನಗಳು ಲೆಂಗ್‌ಲೆನ್ ಅವಳಿಂದಾಗಿ ತಪ್ಪಿ, ಆಟಕ್ಕೆ ಯೋಗ್ಯವಾದ ಉಡುಪು ಧರಿಸುವುದು ಆಟಗಾರ್ತಿಯರ ಹಕ್ಕು ಎಂಬಂತಾಯಿತು. "ವಿಂಬಲ್ಡನ್" ಆಟಗಾರ್ತಿಯರು ಲೆಂಗ್‌ಲೆನ್‌ಗೆ ಕೃತಜ್ಞರು.

"ಮಹಿಳೆ, ಸಾಹಿತ್ಯ, ಸಮಾಜ"

ದಿನಾಂಕ ೨೪. ೯. ೮೯ರಂದು ಡಾಕ್ಟರ್ ವಿಜಯಾ ದಬ್ಬೆಯವರು ಬರೆದ ಪುಸ್ತಕ "ಮಹಿಳೆ ಸಾಹಿತ್ಯ ಸಮಾಜ" ಅಭಿವ್ಯಕ್ತಿ ಹಾಗೂ ಅಚಲದದರು ಒಟ್ಟಾಗಿ ಸಂಘಟಿಸಿದ ಸಮಾರಂಭದಲ್ಲಿ ಬಿಡುಗಡೆಯಾಯಿತು. ಡಿ, ಆರ್. ನಾಗರಾಜ್,, ಸೀಮಂತಿನಿ ನಿರಂಜನ್ ಹಾಗೂ ಕೆ. ವಿ. ಎನ್. ಇವರು ಈ ಸಮಾರಂಭದಲ್ಲಿ ಮಾತನಾಡಿದರು.

ಪ್ರಾರಂಭದಲ್ಲಿ ಮಾತನಾಡಿದ ಡಿ. ಆರ್. ನಾಗರಾಜ್‌ರವರು ಅಮೇರಿಕಾದ ಪೀಟರ್ ಶಾರವರು ಬರೆದ "ಫೆಮಿನಿಸ್ಟ್ ಲಿಟರರಿ ಕ್ರಿಟಿಸಿಸಂ" ಲೇಖನದ ಅಭಿಪ್ರಾಯಗಳನ್ನು ಮಂಡಿಸಿದರು. ಎಲೈನ್ ಶೋವೆಲ್ಟರ್ ಹೇಳುವ ಓಲ್ಡ್ ಟೆಸ್ಟ್‌ಮೆಂಟ್ ಹಾಗೂ ನ್ಯೂ ಟೆಸ್ಟ್‌ಮೆಂಟ್ ನಡುವೆ ವ್ಯತ್ಯಾಸ ಹೇಳಿದರು. ಓಲ್ಡ್ ಟೆಸ್ಟ್‌ಮೆಂಟ್ ಕೋಪದಿಂದ ಹುಟ್ಟಿದ ವಿರೋಧಾತ್ಮಕ ಸಾಹಿತ ವಿಮರ್ಶೆ ಹುಟ್ಟು ಹಾಕಿದರೆ, ನ್ಯೂ ಟೆಸ್ಟ್‌ಮೆಂಟ್ ಸ್ತ್ರೀ ಕೇಂದ್ರಿತ ವಿಮರ್ಶೆಯಲ್ಲಿ "ಗ್ರೇಸ್ ಆಫ್ ಇಮ್ಯಾಜಿನೇಶ್ನ" ಬಯಸುತ್ತದೆ ಎಂದರು. ವಿಜಯಾರವರ ಬರಹಗಳು ಒಲ್ಡ್ ಟೆಸ್ಟ್‌ಮೆಂಟ್ ರೀತಿಯದು ಎಂದ ಇವರು, ಇವರ ವಿಮರ್ಶೆಯಲ್ಲಿ ತಾತ್ವಿಕ ಮುಗ್ಧತೆ ಇದೆ ಎಂದೂ ಸಹ ಹೇಳಿದರು. ವಿಶ್ವವಿದ್ಯಾನಿಲಯದ ಒಳಗೇ ಬೌದ್ಧಿಕವಾಗಿ ನಿಂತು ಬಿಡುವ ಇವರ ಬರಹಗಳು ಈ ಶತಕ ಬಯಸುವ ರಾಜಕಾರಣದ ತಾತ್ವಿಕ ಪ್ರಶ್ನೆಗಳಿಗೆ ಮುಖಾಮುಖಿಯಾಗುವುದಿಲ್ಲ ಎಂದರು.

ಸ್ತ್ರೀ ಬರವಣಿಗೆಯ ವಿಶ್ಲೇಷಣೆ ಲೈಂಗಿಕ ಸಿದ್ಧಾಂತದಿಂದ ಪ್ರಾರಂಭವಾಗುತ್ತದೆ ಎಂಬ ಜೂಲಿಯ ಕ್ರಿಸ್ತೆಳ ಅಭಿಪ್ರಾಯ ವ್ಯಕ್ತಪಡಿಸಿದ ಇವರು ಕೊನೆಗೆ ಲಿಂಗಾತೀತವಾದ ಸಾಹಿತ್ಯ ಅಪೇಕ್ಷಣೀಯ ಎಂದರು. ಹೀಗೆ ಅರ್ಧ ನಾರೀಶ್ವರತ್ವದ ಕಲ್ಪನೆ ಸಾಹಿತ್ಯದಲ್ಲಿ ಮೂಡಿ ಬರಬೇಕು ಎಂದ ಇವರು ಬೇಂದ್ರೆ, ನರಸಿಂಹಸ್ವಾಮಿ ಇವರ ಸಾಹಿತ್ಯದಲ್ಲಿ ಜೈವಿಕ ವ್ಯತ್ಯಾಸ ಏರಿದ ಸ್ತ್ರೀ — ಸಂವೇದನೆಯನ್ನು ಕಾಣಬಹುದಾಗಿದೆ ಎಂದರು.


ನಂತರ ಮಾತನಾಡಿದ ಸೀಮಂತಿನಿ ನಿರಂಜನ್‌ರವರು ಮಹಿಳೆಯರದು ಕಲೋನೈಸ್ಡ್ ಕಾನ್ಷಸ್‌ನೆಸ್ ಎಂದರು. ಈ ಹಂತದಲ್ಲಿ ಮಹಿಳಾ ಸಾಹಿತ್ಯ ಅಧ್ಯಯನ ಸಾಹಿತಿಗಳ ಅಧ್ಯಯನ ಹಾಗೂ ಹೆಣ್ಣಿನ ಅಧ್ಯಯನ ಅಗತ್ಯವಾಗುತ್ತಿದೆ ಎಂದು ನುಡಿದ ಇವರು ಈ ಬಗ್ಗೆ ವಿಶ್ಲೇಷಣಾತ್ಮಕವಾಗಿ ಮಾತನಾಡಿದರು.

ಕೊನೆಗೆ ಮಾತನಾಡಿದ ಕೆ, ವಿ. ನಾರಾಯಣ್‌ರವರು ಸಾಹಿತ್ಯದ ಮಾಧ್ಯಮ ಭಾಷೆ ಪುರುಷ ಸಂವೇದನೆಯಾಗಿದೆ, ಚಲನಶೀಲವಾಗಿರುವ ಸ್ತ್ರೀ — ಸಂವೇದನೆ ಅಥವಾ ಸ್ತ್ರೀತ್ವ ಎನ್ನುವುದು ಸಾಹಿತ್ಯದಲ್ಲಿ ಇನ್ನೂ ಅಭಿವ್ಯಕ್ತಿಗೊಂಡಿಲ್ಲ ಎಂದರು. ಈಗಿರುವ ಸಾಹಿತ್ಯದಲ್ಲಿ, ಸಾಂಪ್ರದಾಯಕ ಸ್ತ್ರೀ — ಸಂವೇದನೆ ಕಂಡು ಬಂದಿದೆಯೇ ಹೊರತು ಒಟ್ಟಾಗಿ ಸ್ತ್ರೀತ್ವದ ಸಂವೇದನೆ ಮೂಡಿಲ್ಲ ಎಂದರು. ಸಾಂಪ್ರದಾಯಕ ಸ್ತ್ರೀ — ಸಂವೇದನೆ ಹೆಣ್ಣಿನ ದೇಹ — ಮನಸ್ಸು ವಿಘಟಿಸುವ ಸಾಂಸ್ಕೃತಿಕ ಚಿಂತನ ಹುಟ್ಟು ಹಾಕಿದೆ. "ಮೈ ಮನಸ್ಸುಗಳ ಸುಳಿಯಲ್ಲಿ" ಮಂಜುಳೆಯ ತಂಬೂರಿಯ ದಂಡ ಸಾಂಕೇತಿಕವಾಗಿ ಪುರುಷನನ್ನು ಅಪೇಕ್ಷಿಸುವಲ್ಲಿ ಈ ರೀತಿಯ ಸಾಂಸ್ಕೃತಿಕ, ಛಾಪುಗಳನ್ನು ಕಾಣಬಹುದು ಎಂದು ಉದಾಃ ಹರಿಸಿದ ಇವರು, ಸ್ತ್ರೀ — ಸಂವೇದನೆಯ ವಿಮರ್ಶೆಯ ಚೌಕಟ್ಟಿನಲ್ಲಿ ಬೇಂದ್ರೆ, ಕುವೆಂಪುರವರಂತಹ ಸಾಹಿತ್ಯ ಕೂಡಾ ಪಲ್ಲಟವಾಗುವ ಸಾಧ್ಯತೆಗಳಿವೆ ಎಂದರು. ಸ್ತ್ರಿ — ಸಂವೇದನೆ ನಿಜವಾದ ಆಕಾರ ಕಂಡುಕೊಳ್ಳುವಲ್ಲಿ ಭಾಷೆ, ಆಕೃತಿಗಳು ಒಳಗಿನಿಂದ ಸ್ಫೋಟಿಸಬೇಕು ಎಂದರು.

ಕೊನೆಗೆ ಮಹಿಳಾ ಸಾಹಿತ್ಯ ಹಾಗೂ ಮಹಿಳಾ ವಿಮರ್ಶೆಯ ಬಗ್ಗೆ ತಣ್ಣನೆಯ ಹಾಗೂ ಅಸ್ಪಷ್ಟ ರೀತಿಯ ಚರ್ಚೆಗಳು ನಡೆದವು. ಮಹಿಳಾ ಸಾಹಿತ್ಯ ಹಾಗೂ ಮಹಿಳಾ ವಿಮರ್ಶೆಯ ಬಗ್ಗೆಗಿನ ಅಸ್ಪಷ್ಟತೆಗಳೂ ಈ ರೀತಿಯ ಗೊಂದಲಮಯ ಚರ್ಚೆಗೆ ಕಾರಣಗಳಿರಬಹುದು.. ಜೊತೆಗೆ ನಿರ್ಧಿಷ್ಟವಾಗಿ ಕನ್ನಡ ಸಾಹಿತ್ಯದಲ್ಲಿ ಮಹಿಳಾ ವಿಮರ್ಶೆಯ ಕೆಲಸ ಸಾಕಷ್ಟು ನಡೆದಿಲ್ಲವಾದ್ದರಿಂದ ಇದರ ಪರಿಭಾಷೆ, ಆಕೃತಿ, ಆಶಯಗಳು ಗೊಂದಲವನ್ನು ಹುಟ್ಟು ಹಾಕುವುದು ಸಹಜವೇ ಆಗಿದೆ.

ಗೆಳತಿಯೊಂದಿಗೆ

—ಸಂವಾದ



೧

ಕಣ್ಣೇ – ಮುಚ್ಚೇ ಆಡುವಾಗ
ಆಡಿದ್ದು – ನೆನಪಿಸುವಾಗ,
ಗಿರಿ ಗಿರಿ ಸುತ್ತಿ
ಗಿರಿಗಿಟ್ಟೆ ಆಡುವಾಗ,
ಮಳಲಿಡಿದು ಕೈಯಲ್ಲಿ
ಕಣ್ಣು – ಮುಚ್ಚಿ
ದಾರಿ – ಬಂತೆ ಅಜ್ಜಿ ಮನೆಗೆ
ಎನ್ನುವಾಗ
ದಡಂ – ದಡಕ್ಕಿಗೆಂದು
ದುಡು – ದುಡು
ಓಡುವಾಗ
ಹೊತ್ತಿದ್ದೆವೇ ಮುಂಬರುವ ಕರಾಳ ಬಾಧೆಗಳ?
ಬಾ ಗೆಳತೀ,
ಆಳಿಸಲಾರದ ನೋವು
ಭರಿಸುವ ನಗೆಯ ಭರವಸೆಯಲ್ಲಿ
ತಪ್ಪು ತಪ್ಪಾಗಿ ಹೆಜ್ಜೆ ಹಾಕಿ
ಮತ್ತೊಮ್ಮೆ ಮಾತನಾಡುವ
ಅಥವಾ
ಅಪ್ಪಾಲೇ – ತಿಪ್ಪಾಲೇ ಆಡಿದ್ದನ್ನಾದರೂ
ನೆನೆಸುವ!

೨

ಪುಟಿದು ಚಿಮ್ಮುವ
ಮೊಲೆಗಳಿಗೆ
ಹಸಿದು – ಕಾಡುವ
ನೂರಾರು ಕಣ್ಣುಗಳಲ್ಲಿ—,
ಹುಟ್ಟಿದ ಗುಟ್ಟು
ಬಚ್ಚಿಟ್ಟು
ತಬ್ಬಲಿ – ಬಸರಿಯು
ಬಸಿರ
ರಟ್ಟು ಮಾಡುವ
ನಿಗೂಢ – ಉತ್ಸಾಹದಲ್ಲಿ
ಮನಸ್ಸಿಗೆ ಪಿಚ್ಚೆನಿಸಿ
ಹರೆಯದ ಬೆಚ್ಚಗಿನ ಆಸೆಗಳು
ಹರಿಯುತ್ತಾ ಹೋದಾಗ
ಗೆಳತೀ
ದಿನಚರಿಯ ಬರಿಯ ಪುಟಗಳನ್ನೇ
ಅಪ್ಪುತ್ತಿದೆ – ಅಂತರಂಗ

೩

ನನ್ನಮ್ಮನ ಸತ್ಯದಿಂದ
ನನ್ನೊಂಬೆಯ ಉಸಿರಿನ ತಂತ್ರದಿಂದ
ಬಿಡಿಸಿಕೊಳ್ಳಬೇಕೆಂಬಾಸೆಗೆ—
ಗೆಳತೀ—
ಬರಿಗಾಲಲ್ಲಿ ನಿಂತು
ಸಿಕ್ಕು – ಸಿಕ್ಕಾಗಿರುವ ಬದುಕಿನಲ್ಲಿ
ಕಾಮದ – ಛಾಯೆ
ಆಳಿಸಬೇಕೆಂಬ ವಾಂಛಲ್ಯಕ್ಕೆ
ಹುಬ್ಬು – ಗಂಟಿಕ್ಕಿ
ಹಣೆಯಲ್ಲಿ – ನೆರಿಗೆಗಳು
ಗಡಿಯಾರದೊಂದೊಂದು ಮುಳ್ಳಿಗೂ
ಒಂದೊಂದು ಭಾವನೆಗಳು

೪

ಬೆನ್ನು ಹತ್ತಿದ ನೆರಳು
ಬೆಂಬತ್ತಿ ಕಾಡಿದಾಗ
ಪಕ್ಕನೇ ಹೆಡೆಯೆತ್ತಿ ನಿಲ್ಲುವ
ಹೆಣ್ತನಗಳು.
ಕೀ ಕೊಟ್ಟ ಗೊಂಬೆಯಂತೆ
ಸುತ್ತ – ಮುತ್ತ ತಿರುಗಿ
ಫಳಕ್ಕಂತ ಕಣ್ಣು – ಮಿಂಚಿಸಿ
ಹತ್ತಾರು – ಚೂರಿ ಚಿಗಿದು—
ಬದುವಿನ ಮೇಲೆ ಹೆಜ್ಜೆ ಹಾಕುತ್ತೇನೆ
ಆಚೆ – ಈಚೆ
ಬಸಿರ ಹೆಂಗಸಿನ ಹಾಗೆ!
ಹೀಗೆಲ್ಲ ಆದಾಗ
ಗೆಳತೀ
ಮೂಲೆಯಂಗಡಿಯಲ್ಲಿ
ನೇತಾಡುವ ಚರ್ಮದಲ್ಲಿ
ರುಂಡ – ಮುಂಡ, ಕಾಲು ಪತ್ತೆ ಹಚ್ಚಲು
ತಡವರಿಸಿ
ಹಳ ಹಳಿಸುತ್ತೇನೆ.
ಹುಟ್ಟಿದ್ದು ಪ್ಲಸ್ – ಮೈನಸ್‌ಗಳಿಂದಲೇ

ಇರಬಹುದು
ಬದುಕು ಪೂರ್ಣ
ಮೈನಸ್ಸೇ ಆಗುತ್ತಿರುವುದರ
ನೋವು ಚುಚ್ಚುತ್ತಿದೆ ಗೆಳತೀ
ಹೃದಯದಾಳದಲ್ಲಿ

೫

ಬದುಕು
ಒಳ ಹೊಕ್ಕು ನೋಡಬೇಕೆಂಬಾಸೆಗೆ
ಸತ್ಯ ಬೆನ್ನತ್ತಿ
ಈಡಿಪಸ್ಸಿನ ಸತ್ಯವಾದರೂ ಸರಿ
ಎಂಬ ಛಲದಲ್ಲಿ
ಇಟ್ಟ ಹೆಜ್ಜೆ ಗಟ್ಟಿಮಾಡಿ
ನಡೆದು
ಸಿಕ್ಕೇ –
ಬಾಯಿ ಕಟ್ಟಿದ ಗೋಣೀ ಚೀಲದಲ್ಲಿ
ಗೆಳತೀ –
ಸತ್ಯ – ಅಸತ್ಯ
ಭ್ರಮೆ – ವಾಸ್ತವ
ಎಲ್ಲಾ
ಸಿಕ್ಕು -- ಸಿಕ್ಕಾಗಿ
ಗೋಜಲಾಗಿ
ಸುಸ್ತಾಗುತ್ತಿದೆ.
ಹುಗಿದಿಟ್ಟ ನೋವುಗಳು
ಪಾಪ -- ಪರಿತಾಪಗಳಲ್ಲಿ
ಎಚ್ಚೆತ್ತು ಕುಣಿಯುವ
ಭಗ್ನ ಜೀವದೆಳೆಗಳ
ಬಿಚ್ಚಿ ಕೊಳ್ಳಲಾರದೇ
ಬಚ್ಚಿಟ್ಟು ಕೊಳ್ಳಲಾರದೇ
ನಿನ್ನೊಂದಿಗೇ
ಮಾತನಾಡುತ್ತಿದ್ದೇನೆ ಗೆಳತೀ

ಚಂಪಾವತಿ ಎಚ್. ಎಸ್.

ಪಕ್ಷಿ ನೋಟ

ಪಕ್ಷಿ ನೋಟದಂಥ
ಸವಲತ್ತಿನಿಂದ
ಸೆರೆ ಹಿಡಿಯಾಲಾಗಲಿಲ್ಲ
ನಿನ್ನ ಸ್ಪಷ್ಟ ಭಾವ ಚಿತ್ರವನ್ನ.

ದೂರದಿಂದ ತೋರಿದ
ಭಾವಿಯಲ್ಲಿ
ನೀರಿದೆಯೋ ಎಂದು
ನಿರುಕಿಸಲಿಲ್ಲ.

ಹಚ್ಚ ಹಸಿರಿನ ಸಿರಿಗೆ
ಹುಚ್ಚಾಳಾಗಿ
ಬೆರಗಾದೆನೇ ಹೊರತು
ಅದು ಬೆಳೆಯೋ ಕಳೆಯೋ ಎಂದು
ಕಳವಳ ಪಡಲಿಲ್ಲ.

ತೆನೆ ಕಂಡಿತ್ತಷ್ಟೇ
ಕಾಳುಗಳ
ಹಕ್ಕಿ ಹೆಕ್ಕಿದ್ದೀತೆಂಬ
ಕಲ್ಪನೆ ಬರಲಿಲ್ಲ.

ಅದ್ಭುತ ಮಿಥುನ ಶಿಲ್ಪಗಳ
ಗುಡಿ – ಗೋಪುರಗಳೊಳಗೆ
ದೇವರಿದ್ದಾನೆಂದು
ಭಾವಿಸಿದ್ದೆನೇ ವಿನಾ
ಶಿಲ್ಪ ಸಾಕ್ಷತ್ಕಾರವಲ್ಲ.

ಇಂದಿರಾ ಯುಗಟ



ಸ್ತ್ರೀ – ವಾದಿ ವಿಮರ್ಶೆಯ ಬಗ್ಗೆ ಪೀಟರ್ ಶಾರವರ ನಿಲುವುಗಳು.

'ಸ್ತ್ರೀವಾದಿ ವಿಮರ್ಶೆ', 'ಮಹಿಳಾ ವಿಮರ್ಶೆ' ಅಥವಾ 'ಸ್ತ್ರೀ ಸಂವೇದನಾ ವಿಮರ್ಶೆ' ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಈ ಬಗೆಯ ವಿಮರ್ಶೆ ಅಮೇರಿಕಾ ರಾಷ್ಟ್ರದಲ್ಲಿ ಸಾಕಷ್ಟು ಚರ್ಚೆಗೆ ಒಳಗಾಗಲ್ಪಟ್ಟಿರುವ ವಿಚಾರ. 70 ರ ದಶಕದ ಪೂರ್ವ ಭಾಗದಲ್ಲಿ ವೈಚಾರಿಕ ಚೌಕಟ್ಟಿನಲ್ಲಿ ಕಾಣಿಸಿಕೊಂಡ ಈ ಚಳವಳಿಯನ್ನು ಸ್ತ್ರೀ—ವಿಮರ್ಶೆಯ ಪ್ರಥಮ ಹಂತವೆಂದು ಕರೆದರೆ, 70 ನೇ ದಶಕದ ಉತ್ತರಾರ್ಧವನ್ನು ಈ ವಿಮರ್ಶಾ ಚಳವಳಿಯ ಎರಡನೆಯ ಹಂತವೆಂದು ಗುರುತಿಸಬಹುದು. ಪ್ರಥಮ ಹಾಗೂ ದ್ವಿತೀಯ ಹಂತದ ಚಳವಳಿಯ ವೈಫಲ್ಯದ ಪ್ರಯತ್ನಗಳು 80ರಲ್ಲಿ ಈ ಸ್ತ್ರೀ-ವಾದಿ ಚಳವಳಿಯ ಮೂರನೇ ಹಂತಕ್ಕೆ ನಾಂದಿ ಹಾಡಿತು. ಹೀಗೆ ಹಲವಾರು ಮಜಲುಗಳನ್ನು ಕಂಡ ಅಮೇರಿಕೆಯ ಈ ಸ್ತ್ರೀ-ವಾದಿ ವಿಮರ್ಶಾ ಚಳವಳಿಯ ವೈಫಲ್ಯ-ಕೊಡುಗೆಗಳು ಈ ದಿಕ್ಕಿನತ್ತ ಹೆಜ್ಜೆ ಇಡುತ್ತಿರುವ ಮೂರನೇ ರಾಷ್ಟ್ರಗಳ ಮಹಿಳಾ ವಿಮರ್ಶೆಯ ಚಳವಳಿಗಳಿಗೆ ಗೊತ್ತಿರುವುದು ಅಗತ್ಯ ಎನ್ನುವ ಕಾರಣಕ್ಕಾಗಿ ಪೀಟರ್ ಶಾರವರ 'ಫೆಮಿನಿಸ್ಟ್ ಲಿಟರರಿ ಕ್ರಿಟಿಸಿಸಂ'ನ ಆಯ್ದ ಭಾಗಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಅಮೇರಿಕೆಯ ಸ್ತ್ರೀ—ವಾದಿ ವಿಮರ್ಶೆಯ ಚಳವಳಿಯು ಒಳಗೇ ಆಂತರಿಕ ಒಡಕುಗಳಿವೆ. ಹಾಗಾಗಿ ಒಂದು ಸಮಗ್ರತೆ ಎನ್ನುವುದು ಈ ಚಳವಳಿಯಲ್ಲಿ ಕಂಡು ಬರುವುದಿಲ್ಲ. ಮಹಿಳಾ ಬರಹಗಳು—ಪುರುಷರ ಬರಹಗಳಿಂದ ಮೂಲಭೂತವಾದ ಭಿನ್ನತೆಗಳನ್ನು ಹೊಂದಿವೆಯೇ ಅಥವಾ ಇಲ್ಲವೇ ಎಂಬಂತಹ ಪ್ರಶ್ನೆಗಳಲ್ಲಿ ಈ ಆಂತರಿಕ ಒಡಕುಗಳಿರುವುದನ್ನು ಗಮನಿಸಬಹುದು.

ಲಿಂಗಾಧಾರಿತ ಭಿನ್ನತೆಗಳು (ಜೆಂಡರ್ ಡಿಫರೆನ್ಸಸ್) ಇರುವುದರಿಂದ ಸ್ತ್ರೀ—ವಾದಿ ಸಾಹಿತ್ಯ ಕೂಡಾ ಇರುವುದು ಅಗತ್ಯ ಎನ್ನುವುದು ಸಮರ್ಥನೆಯ ವಾದವಾದರೆ; ಈ ರೀತಿಯ ಭಿನ್ನತೆಗಳು ಇಲ್ಲ, ಹಾಗಾಗಿ ಸ್ತ್ರೀ ವಾದಿ ವಿಮರ್ಶೆ ಎನ್ನುವುದು ಒಂದು ಆದರ್ಶ ಕಲ್ಪನೆ ಎಂದು ಇದನ್ನು ತಳ್ಳಿಹಾಕುವ ಗುಂಪೂ ಸಹ ಇದೆ. ಸಾಹಿತ್ಯ ಸೌಂದರ್ಯ ಕಲ್ಪನೆ ಹಾಗೂ ಮಹಿಳಾ ಚಳವಳಿಯ ಆಜ್ಞಾಪನೆಗಳ ಸಂಘರ್ಷವನ್ನು ಒಟ್ಟಾಗಿ ಇಲ್ಲಿ ಗ್ರಹಿಸಬಹುದಾಗಿದೆ. ಮಹಿಳಾ ಚಳವಳಿ ಮಹಿಳಾ ಕಾರಣಕ್ಕೋಸ್ಕರ ಬಂಧಿತವಾಗುವುದಾಗಿದ್ದರೆ, ವಿಮರ್ಶೆಯು ಗುರಿ ಸಾಹಿತ್ಯಕ್ಕೆ ವಿಧೇಯಕವಾಗಿರುವುದಾಗಿದೆ. ಯಾರು ಮಹಿಳಾ ಪ್ರಶ್ನೆಗಳನ್ನು ಸಾಹಿತ್ಯಕ ಕಾರಣಗಳ ಮುಂದೆ ಎತ್ತಿ ಹಿಡಿಯುವರೋ ಅಂತಹವರು ತಮ್ಮ ಚಳವಳಿಯ ಉಪಯುಕ್ತತೆಗೋಸ್ಕರ ಸಾಹಿತ್ಯಕ ಮೌಲ್ಯಗಳ ಜೊತೆ ಒಪ್ಪಂದ ಮಾಡಿಕೊಳ್ಳುತ್ತಾರೆ. ಪ್ರತಿಫಲವಾಗಿ ಮಹಿಳಾ ಚಳವಳಿಯು ಕೇವಲ ಸಾಹಿತ್ಯಕ ಮೌಲ್ಯಗಳನ್ನು ಅಮುಖ್ಯ ಎಂದೇ ಪರಿಗಣಿಸುತ್ತದೆ. ಹಾಗಾದರೆ ಸ್ತ್ರೀ—ವಾದಿ ವಿಮರ್ಶೆಯು ಕೆಟ್ಟ ರೀತಿಯಲ್ಲಿ ಮಹಿಳಾ ಚಳವಳಿಯನ್ನು ಬೆಂಬಲಿಸಿರುವ ಕಾರಣ, ಸಾಹಿತ್ಯಕ ಮೌಲ್ಯಗಳು ಕೆಟ್ಟ ರೀತಿಯಲ್ಲಿ ಬಳಕೆಯಾಗಲ್ಪಟ್ಟಿವೆಯೇ? ಹೀಗಿದ್ದಾಗ ಮಹಿಳಾ ಚಳವಳಿಯ ಜೊತೆಗಿನ ಸ್ತ್ರೀ—ವಾದಿ ವಿಮರ್ಶೆಯ ಸಂಬಂಧ ಎಂತಹದು ಎಂಬ ಪ್ರಶ್ನೆ ಏಳುತ್ತದೆ. ಇದು ಒಪ್ಪಿಕೊಂಡ ಮನಸ್ಸಿನ ಪೇಚಾಟ ಎನ್ನುವುದೇ ಇದಕ್ಕೆ ಉತ್ತರವಾಗುತ್ತದೆ.

ಲಿಂಗಾಧಾರಿತ ಪ್ರಶ್ನೆಗಳು ಬಹಳ ಸಂಕೀರ್ಣ ಪ್ರಶ್ನೆಗಳು. ಹಾಗಾಗಿ ಸ್ತ್ರೀ-ವಾದಿ ವಿಮರ್ಶಾ ಚಳವಳಿಯು ಅಮೇರಿಕೆಯಲ್ಲಿ ಬದಲಾವಣೆಯನ್ನು ಹೊಂದುತ್ತಲೇ ಇದೆ. ಪ್ರಾರಂಭದಲ್ಲಿ ಹೇಳಿದಂತೆ ಸ್ತ್ರೀ—ವಾದಿ ವಿಮರ್ಶೆಯ ಚಳವಳಿಯಲ್ಲಿ ಮೂರು ಹಂತಗಳಲ್ಲಿ ವಿಂಗಡಿಸಬಹುದು.

1) 1970 ರ ಪೂರ್ವಾರ್ಧ: ವೈಫಲ್ಯದ ಹಂತ.

2) 1970 ರ ಉತ್ತರಾರ್ಧ: ತಿದ್ದುಪಡಿಯ ಹಂತ.

3) 1980 ರ:———— ಮೂರನೇ ಹಂತ.

ವೈಫಲ್ಯದ ಹಂತ: ಕತೆ, ಕಾದಂಬರಿಗಳಲ್ಲಿ ಚಿತ್ರಿಸಲಾದ ಸಾಂಪ್ರದಾಯಕ ಮಹಿಳಾ ಚಿತ್ರಣಗಳ ವಿರುದ್ಧ ಪ್ರತಿಭಟಿಸುವುದು ಈ ಹಂತದ ಸ್ತ್ರೀವಾದಿ ವಿಮರ್ಶೆಯ ಮುಖ್ಯ ಸಾಹಿತ್ಯಕ ಮಾನದಂಡವಾಗಿತ್ತು. ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿರುವ ಮಹಿಳೆಯರ ಬಗೆಗಿನ ಪೂರ್ವ ಪೀಡಿತ ಭಾವನೆಗಳನ್ನು ಸಾಹಿತ್ಯ ಪ್ರತಿಫಲಿಸುತ್ತದೆ ಎಂಬ ನಂಬಿಕೆ ಇವರದು. ಇಂತಹ ಸಾಹಿತ್ಯ ಮಹಿಳೆಯರಲ್ಲಿ ಅವಲಂಬನೆ ಹಾಗೂ ನಿಷ್ಕ್ರಿಯತೆಯನ್ನು ಹುಟ್ಟುಹಾಕಿ ತಪ್ಪು ದಾರಿಗೆಳೆಯುತ್ತದೆ ಎಂಬುದು ಇವರ ನಿಲುವಾಗಿತ್ತು. ಹಾಗಾಗಿ ಮಹಿಳೆಯರ ಸ್ಥಾನ, ಘನತೆ ಎತ್ತಿ ಹಿಡಿಯುವುದಕ್ಕೋಸ್ಕರ ಪ್ರಥಮ ಹಂತದ ಸ್ತ್ರೀ—ವಾದಿ ವಿಮರ್ಶಕಿಯರು ಯಾವುದೇ ಸಾಹಿತ್ಯದಲ್ಲಿನ ಈ ರೀತಿಯ ಸಾಂಪ್ರದಾಯಕ ಸ್ತ್ರೀ—ಪಾತ್ರ ಚಿತ್ರಣಗಳನ್ನು ಗುರುತಿಸಿ, ಅವುಗಳನ್ನು ವಿರೋಧಿಸಿ ಬರೆಯುವುದು ತಮ್ಮ ವಿಮರ್ಶೆಯ ಕರ್ತವ್ಯವೆಂದು ಭಾವಿಸಿದ್ದರು.

ಪರಿಣಾಮಗಳು: ಹೀಗೆ ಏಕ ಪ್ರಕಾರದ, ಏಕತಾನತೆಯ ಸ್ತ್ರೀ ಪಾತ್ರಗಳ ಋಣಾತ್ಮಕತೆಯನ್ನು ಗುರುತಿಸುವ, ವಿರೋಧಿಸುವ ವಿಮರ್ಶೆ ಇಚ್ಛಿಸಿದ ಪ್ರಭಾವವನ್ನಂತೂ ಖಂಡಿತಾ ಉಂಟುಮಾಡಲಿಲ್ಲ. ನಿಷ್ಕ್ರಿಯ, ಅವಲಂಬಿತ ಸ್ತ್ರೀ ಪಾತ್ರಗಳ ಪ್ರದರ್ಶನದಿಂದಾಗಿ ವಿಮರ್ಶೆಯ ಸ್ಫೂರ್ತಿಯ ಸೆಲೆಯೇ ಬತ್ತಿ ಹೋಯಿತು ಎಂದು ಟೋರಿಲ್ ಮೋಯಿ ಬರೆ

ಯುತ್ತಾಳೆ. ಒಂದಾದ ಮೇಲೊಂದರಂತೆ ಕತೆಗಳಲ್ಲಿ ಮಹಿಳಾ ಚಿತ್ರಣದ ಋಣಾತ್ಮಕವಾಗಿ ಎರಕ ಹೊಯ್ದ ಪಾತ್ರಗಳನ್ನು ಈ ವಿಮರ್ಶಕಿಯರು ಚಿತ್ರಿಸಿದ್ದರಿಂದ ಒಂದು ಬಗೆಯ ಭಿನ್ನತೆ ಸಂಸ್ಕೃತಿಯಲ್ಲಿ ಉಂಟಾಯಿತು ಎನ್ನುವ ಅಪವಾದವೂ ಇದೆ. ಚರ್ಚೆಯಲ್ಲಿ ಈ ಸ್ತ್ರೀ—ವಾದಿ ವಿಮರ್ಶೆ ಅನಿವಾರ್ಯ ಹಾಗೂ ಗೀಳಿನ ವಿಚಾರವಾಗಿ, ಮಹಿಳೆಯರು ಬಲಿಪಶುಗಳಾಗಿರುವುದನ್ನೂ ಸಹ ಸಹಜವಾಗಿಸುವಂತಹ ಒಂದು ಪ್ರವೃತ್ತಿಯನ್ನು ಸಹ ಈ ವಿಮರ್ಶೆ ಹುಟ್ಟು ಹಾಕಿತು ಎಂಬುದಾಗಿ ಎಲೈನ್ ಶೋವಲ್ಟರ್ ನುಡಿಯುತ್ತಾಳೆ.

ಹೀಗೆ ಸ್ತ್ರೀ—ಬಲಿಪಶು ಎಂಬಂತಹ ವಿಮರ್ಶಾ ವಿಧಾನ, ಗ್ರಹಿಕೆ ಮಹಿಳೆಯರ ಘನತೆ ಹೆಚ್ಚಿಸುವ ಬದಲು ಅವರ ಒಟ್ಟು ವ್ಯಕ್ತಿತ್ವಕ್ಕೆ ಧಕ್ಕೆಯನ್ನುಂಟುಮಾಡಿತು ಎಂಬುದಾಗಿ ಪೀಟರ್ ಶಾ ನುಡಿಯುತ್ತಾರೆ.

ತಿದ್ದುಪಡಿಯ ಹಂತ: 'ಸ್ತ್ರೀ— ಬಲಿಪಶು' ವಿಧಾನದ ವಿಮರ್ಶೆಯಿಂದಾಗಿ ಉಂಟಾದ ಋಣಾತ್ಮಕ ಪರಿಣಾಮವನ್ನು ಸರಿಪಡಿಸುವುದಕ್ಕೋಸ್ಕರ 70ರ ದಶಕದ ಉತ್ತರಾರ್ಧದಲ್ಲಿ ಈ ವಿಮರ್ಶೆಯ ಮತ್ತೊಂದು ದಿಕ್ಕನ್ನೇ— ಸ್ತ್ರೀ— ವಾದಿ ಚಳವಳಿಯ ಎರಡನೇ ಹಂತವೆಂದು ಗುರುತಿಸಬಹುದು.

ಒಪ್ಪಬಹುದಾದ ಅಥವಾ ಧನಾತ್ಮಕವಾಗಿರುವ ಹೆಣ್ಣಿನ ಸಾಹಿತ್ಯಕ ಚಿತ್ರಣವನ್ನು ವಿಮರ್ಶಿಸಿ ಬರೆಯುವುದು ಅಗತ್ಯ ಎಂದು ಇವರು ಒತ್ತಿ ನುಡಿದರು. ಈ ರೀತಿಯ ಚಿತ್ರಣದ ವಿಮರ್ಶೆ ಮಹಿಳಾ ಓದುಗರಿಗೆ ಹಾಗೂ ಪ್ರಸ್ತುತದಲ್ಲಿ ಬರೆಯುವ ಲೇಖಕಿಯರಿಗೆ ಮಾದರಿ ಪಾತ್ರಗಳಾಗಲಿ ಎಂದು ಇವರು ಅಪೇಕ್ಷಿಸಿದರು. ಈ ರೀತಿ 'ಮಾದರಿ ಪಾತ್ರ'ದ ಗ್ರಹಿಕೆ, ವಿಧಾನದ ವಿಮರ್ಶೆಯು ಯಾವುದೇ ಕಾದಂಬರಿ, ಕತೆಗಳಲ್ಲಿನ ನಾಯಕಿಯರಿಗಿಂತ, ಯಾವ ಲೇಖಕಿಯರು ತಮ್ಮ ಜೀವನದಲ್ಲಿ ಹೆಚ್ಚು ಸ್ವತಂತ್ರ್ಯ ಪ್ರವೃತ್ತಿ ವ್ಯಕ್ತ ಪಡಿಸಿದ್ದರೋ ಅಂತಹವರ ಮೇಲೆ ಹೆಚ್ಚು ತನ್ನ ಗಮನವನ್ನು ಕೇಂದ್ರೀಕರಿಸಿತು.

ಈ ರೀತಿಯ ವಿಮರ್ಶೆಯ ವಿಧಾನ ಒಂದು ರೀತಿಯ ಗೊಂದಲವನ್ನು ಹುಟ್ಟುಹಾಕಿತು ಎನ್ನುವ ನ್ಯಾನ್ಸಿ ಕೆ. ಮಿಲ್ಲರ್ ವಿಮರ್ಶಕಿಯರು ಒಬ್ಬ ನಾಯಕಿಯನ್ನು ಆ ಲೇಖಕಿಯ ತದ್ರೂಪ ಎನ್ನುವಂತೆ ಓದತೊಡಗಿದರು ಎನ್ನುತ್ತಾರೆ. ಹೀಗಾಗಿ ಮಹಿಳಾ ಸಾಹಿತ್ಯದ ವಿಮರ್ಶೆಯಲ್ಲಿ ಒಂದು ರೀತಿಯ ಶಿಥಿಲತೆಯೂ ಸಹ ಕಂಡುಬಂದಿತು ಎಂದೂ ಸಹ ಇವರು ನುಡಿಯುತ್ತಾರೆ.

ವಾಸ್ತವವನ್ನು ನೈಜವಾಗಿ ಪ್ರತಿನಿಧಿಸಬೇಕು ಎನ್ನುವ ಧೋರಣೆಯಿಂದಾಗಿ ಸ್ತ್ರೀ-ವಾದಿ ವಿಮರ್ಶೆಯ ಪರಿಧಿ ಮತ್ತಷ್ಟು ಸಂಕುಚಿತಗೊಂಡಿತು ಎನ್ನುವುದಾಗಿ ನ್ಯಾನ್ಸಿ ಕೆ. ಮಿಲ್ಲರ್ ನುಡಿಯುತ್ತಾರೆ. ಇವರು ಸಾಹಿತ್ಯದಲ್ಲಿನ ಫ್ಯಾಂಟಸಿ ಹಾಗೂ ಸಂಕೇತವನ್ನು (ಸಿಂಬಾಲಿಸಂ) ಪೂರ್ತಿಯಾಗಿ ತಳ್ಳಿ ಹಾಕಿದರು. ಸಾಹಿತ್ಯದ ಸೌಂದರ್ಯ ಕಲ್ಪನೆಯನ್ನು ನಿರಾಕರಿಸಿದ ಸ್ತ್ರೀ-ವಾದಿ ವಿಮರ್ಶಕಿಯರು ಮಹಿಳೆಯರ ಸ್ಥಿತಿ-ಗತಿಯ ಕುರಿತಾದ ಚಾರಿತ್ರಿಕ ಸುದ್ದಿ-ಸಂಗ್ರಹಣೆಯ ವಸ್ತುವಾಗಿ ಸಾಹಿತ್ಯವನ್ನು ಪರಿಗಣಿಸಿದರು ಎಂಬುದಾಗಿಯು ಇವರು ನುಡಿಯುತ್ತಿದ್ದಾರೆ.

ಈ ರೀತಿಯ ವಿಧಾನ, ಗ್ರಹಿಕೆಯ ಕುರಿತು ಮಾತನಾಡುತ್ತಾ ಟೋರಿಲ್ ಮೋಯಿ ಈ ಗ್ರಹಿಕೆಯ ವಿಮರ್ಶೆಯಲ್ಲಿಯೇ ವೈರುಧ್ಯಗಳಿವೆ ಎನ್ನುತ್ತಾರೆ. ಒಂದು ಕಡೆ ವಾಸ್ತವದಲ್ಲಿಯಂತೆ - ಸಾಹಿತ್ಯದಲ್ಲಿ ಮಹಿಳೆಯರು ಶೋಷಿತರಾಗಿಯೇ ಕಾಣಿಸಿಕೊಳ್ಳಬೇಕು ಎನ್ನುವ ಒತ್ತಾಯವಿಡುವ ಈ ಗ್ರಹಿಕೆ ಇನ್ನೊಂದು ಕಡೆ 'ಸ್ತ್ರೀ- ಮಾದರಿ ಪಾತ್ರ'ದ ಪ್ರಾತಿನಿಧ್ಯ ಸಾಹಿತ್ಯದಲ್ಲಿರಬೇಕು ಎನ್ನುತ್ತಾರೆ. ಸಾಹಿತ್ಯ ನೈಜವಾಗಿ ಹಾಗೂ ಆದರ್ಶದ ಬಿಂಬವಾಗಿ ಇರಲಾರದು ಎನ್ನುವುದು ಟೋರಿಲ್ ಮೋಯಿಯವರ ವಾದ.

ಕ್ಯಾರೊಲ್ ಇಯಾನೋಯಿ ಈ ದ್ವಂದ್ವ ಒಂದು ಇಬ್ಬಗೆಯ ಬಂಧನದ ರೀತಿ ಎನ್ನುತ್ತಾಳೆ. 1981 ರಲ್ಲಿ ಫೆಮಿನಿಸ್ಟ್ ಕ್ರಿಟಿಸಿಸಂ ನ ಬಗ್ಗೆ ಮಾಡಿದ ಪಿ. ಎಚ್. ಡಿ. ನಲ್ಲಿ ಆಕೆ ಹೀಗೆ ಹೇಳುತ್ತಾರೆ. ಲೇಖಕಿಯರು ಅಥವಾ ಪಾತ್ರಗಳು ನೈತಿಕವಾಗಿ ಅಥವಾ ಐಹಿಕವಾಗಿ ಸಾಕಷ್ಟು ಜಯಶಾಲಿಗಳಾಗಿದ್ದಲ್ಲಿ ಅವರು ಇನ್ನೂ ಶೋಷಿತ ಸ್ಥಿತಿಯಲ್ಲಿರುವ ಸ್ತ್ರೀಯರ ಬಗ್ಗೆ ಮಾತನಾಡಲು ಸಾಧ್ಯವಿಲ್ಲ, ಅಥವಾ ಸ್ವಂತಿಕೆ, ಸ್ವತಂತ್ರ್ಯವನ್ನು ಹೊಂದುವಲ್ಲಿ ವಿಫಲರಾಗಿದ್ದರೆ, ಅವರು ಇತರೇ ಹೆಂಗಸರಿಗೆ 'ಮಾದರಿ—ಪಾತ್ರ'ಗಳಾಗಲು ಸಾಧ್ಯವೇ ಇಲ್ಲ ಎನ್ನುವಂತಹ ಇಮ್ಮುಖ ಬಂಧನದ ವಿಮರ್ಶೆ ಇದು ಎನ್ನುತ್ತಾರೆ.

ಈ ರೀತಿಯ ಇಮ್ಮುಖ ಬಂಧನ ಮೊದಲ ಹಾಗೂ ದ್ವಿತೀಯ ಹಂತದ ವಿಮರ್ಶೆಯ ಸ್ತ್ರೀ-ರೂಪಕಗಳಲ್ಲೆಲ್ಲ ಕಂಡು ಬಂದಿತು ಎಂಬುದಾಗಿ ಇವರು ನುಡಿಯುತ್ತಾರೆ. ಹೀಗೆ ಸ್ತ್ರೀ-ಪಾತ್ರಗಳು, ರೂಪಕಗಳು-ಎಂದು ಕುರಿತಾಗಿ ಬಂದ ವಿಮರ್ಶಾ ವಿಧಾನ ಅಸಮರ್ಥ ವಿಮರ್ಶಾ ವಿಧಾನ ಎಂದು ನಿರೂಪಿಸಲ್ಪಟ್ಟಿತು.

ಮೂರನೇ ಹಂತದ ಸ್ತ್ರೀ-ವಾದಿ ವಿಮರ್ಶೆ: ಮೊದಲ ವಿಮರ್ಶಕಿಯರ ವೈಫಲ್ಯಕ್ಕೆ ಸಾಹಿತ್ಯಕ ವಿಮರ್ಶೆಯ ಗುಣಮಟ್ಟ ಉಳಿಸಿಕೊಳ್ಳದಿರುವುದು ಕಾರಣ ಎನ್ನುವ ಇವರು ಅವರ ವೈಫಲ್ಯಗಳನ್ನು ಹೀಗೆ ಗುರುತಿಸುತ್ತಾರೆ.

1) ಫ್ಯಾಂಟಸಿ ಅಥವಾ ಪ್ರತೀಕಗಳಿಗಿಂತ ನೈಜತೆಗೆ ಪ್ರಾಮುಖ್ಯತೆ ನೀಡಿದ್ದು.

2) ಲೇಖಕಿಯನ್ನು ಬರಹಗಳೊಂದಿಗೆ ಸಮೀಕರಿಸಿ ಗೊಂದಲಕ್ಕೀಡು ಮಾಡಿದ್ದು.

3) ಕತೆ ಅಥವಾ ಕಾದಂಬರಿ ಪಾತ್ರಗಳಿಗೆ ಗ್ರೇಡುಗಳನ್ನು ನೀಡುವಂತಹ ಅಪಕ್ವ, ಒಡ್ಡು ಒಡ್ಡಾದ ವಿಧಾನವನ್ನು ಬಳಸಿಕೊಂಡದ್ದು.

ಮಹಿಳೆಯಾಗಿರುವ ಕಾರಣ ಬರಹಗಾರ್ತಿಗೆ ಸಾಕಷ್ಟು ಪ್ರತಿಕೂಲ ಪರಿಸ್ಥಿತಿ ಇದೆ ಎನ್ನುವ ಇವರು ಬರಹಗಳಲ್ಲಿ ಹಾಗೂ ಬರೆಯುವ ಹಂತದಲ್ಲಿಯೇ ಒಂದು ಮೂಲಭೂತವಾದ ಲಿಂಗಾಧಾರಿತ ಭಿನ್ನತೆ ಇದೆ ಎನ್ನುತ್ತಾರೆ.

ಈ ಹಂತದಲ್ಲಿ ಕೆಲವು ಪ್ರಶ್ನೆಗಳು ಕಾಣಿಸಿಕೊಂಡವು.

1) ಲಿಂಗಾಧಾರಿತ ಭಿನ್ನತೆ ಬರಹಗಳಲ್ಲಿ ಕೇಂದ್ರೀಕೃತ ವಿಚಾರ-ಎಂದು ಗಮನಿಸಬೇಕೆ?

2) ಈ ಲಿಂಗಾಧಾರಿತ ಭಿನ್ನತೆ ಕಥಾಭಾಗದಲ್ಲಿದೆಯೇ?

3) ಶೈಲಿಯಲ್ಲಿದೇಯೇ?

4) ಪರಿಸರ ಚಿತ್ರಣದಲ್ಲಿದೆಯೇ?

ಸ್ತ್ರೀ-ವಾದಿ ವಿಮರ್ಶಕಿಯರು ಲೇಖಕ/ಲೇಖಕಿ ಎಂಬುದು ಶೈಲಿ ಅಥವಾ ಕಥಾವಸ್ತುವಿನಿಂದ ಕಂಡು ಹಿಡಿಯುವುದು ಸಾಧ್ಯವಿಲ್ಲ ಎನ್ನುತ್ತಾರೆ.

ಭಾಷೆಯಲ್ಲಿ ಲಿಂಗಭಿನ್ನತೆಯನ್ನು ಹುಡುಕುವುದು ವೈಚಾರಿಕ ಅಸಾಧ್ಯತೆಯಷ್ಟೆ ಅಲ್ಲ. ಇದು ಒಂದು ರಾಜಕೀಯ ತಪ್ಪು ಎಂದು ಟೋರಿಲ್ ಮೋಯಿ ಹೇಳುತ್ತಾಳೆ. ಈ ಹಂತದಲ್ಲಿ ವಿಮರ್ಶಕಿಯರಲ್ಲೇ ಸಾಕಷ್ಟು ವೈಚಾರಿಕ ಹಾಗೂ ವಾಸ್ತುವಿಕ ವಿರೋಧಗಳಿದ್ದಾಗ್ಯೂ ಸಹ ಸುಮಾರು ವಿಮರ್ಶಕಿಯರು ಲಿಂಗಾಧಾರಿತ ಭಿನ್ನತೆಗಳಿವೆ ಎಂಬಲ್ಲಿಯೇ ತಮ್ಮ ಬದ್ಧತೆಯನ್ನು ತೋರುತ್ತಾರೆ.

ಪ್ರಥಮ ಹಾಗೂ ದ್ವಿತೀಯ ಹಂತಗಳ ವಿಮರ್ಶಕಿಯರ ಗೊಂದಲಗಳಿಗೆ ಕಟುವಾಗಿ ಟೀಕಿಸಿದ ನ್ಯಾನ್ಸಿ ಕೆ. ಮಿಲ್ಲರ್ ಲಿಂಗಾಧಾರಿತ ಭಿನ್ನತೆ ಕಥಾವಸ್ತುವಿನಲ್ಲಿದೆ ಎನ್ನುತ್ತಾರೆ. ಓದುವಾಗ ವರ್ಣಿಸಿದ ಒಂದು ವಸ್ತುವನ್ನು ಪ್ರಜ್ಞಾಪೂರ್ವಕವಾಗಿ ಪುನಃ ಸೃಷ್ಟಿಸುವುದೇ ಲಿಂಗಾಧಾರಿತ ಭಿನ್ನತೆ' ಎಂದು ನುಡಿಯುವ ಈಕೆ, ಟಿ. ಎಸ್. ಇಲಿಯಡ್ ಹೇಳುವ ರೀತಿಯ 'ಪ್ರಾದೇಶಿಕ ವಾಸನೆ'ಯ ತರಹ 'ಸ್ತ್ರೀ-ಸಂವೇದನೆ' ಎಂಬುದೂ ಇರುತ್ತದೆ ಎನ್ನುತ್ತಾರೆ.

ಲಿಂಗಾಧಾರಿತ ಭಿನ್ನತೆಗಳಿಲ್ಲದ್ದರೂ ನಾವು ಅವುಗಳನ್ನು ಕಟ್ಟಬೇಕಾಗುತ್ತದೆ ಎಂದು ಈ ಮಹಿಳಾ-ವಾದಿ ವಿಮರ್ಶಕಿಯರು ನುಡಿಯುತ್ತಾರೆ ಎನ್ನುವ ಪೀಟರ್ ಶಾರವರು ಇವರೂ ಸಹ ಪುರುಷತ್ವ ಹಾಗೂ ಬಂಡವಾಳಶಾಹಿತ್ವದ ಗುಣಗಳನ್ನೇ ಪ್ರತಿನಿಧಿಸುತ್ತಾರೆ ಎನ್ನುತ್ತಾರೆ.

ವಾದ-ವಿವಾದಗಳು, ಆಂತರಿಕ ಒಡಕುಗಳು ಹಾಗೂ ಅನುಮಾನಗಳ ಮಧ್ಯೆ ಸಹ ಕೆಲವು ಮಹಿಳಾ-ವಾದಿ ವಿಮರ್ಶಕಿಯರು ಮಹಿಳಾ-ಹಾಗೂ ಪುರುಷರ ಬರವಣಿಗೆಯ ಮಧ್ಯೆ ಸೂಕ್ಷ್ಮವಾದ, ಮೂಲಭೂತವಾದ ಭಿನ್ನತೆ ಎಂದು ವಾದಿಸುತ್ತಾರೆ. ಈ ವಾದದ ಒಟ್ಟು ಹಿನ್ನೆಲೆ ಎಂದರೆ ಸ್ತ್ರೀವಾದಿ ವಿಮರ್ಶಕಿಯರಿಗಿರುವ ರಾಜಕೀಯ ಬದ್ಧತೆ ಎನ್ನುತ್ತಾರೆ ಪೀಟರ್ ಶಾ.

1970ರಲ್ಲಿ ಕಾಣಿಸಿಕೊಂಡ 'ಮಹಿಳೆ-ಬಲಿಪಶು'ಯಂತಹ ಗ್ರಹಿಕೆಗಳು, 'ಮಾದರಿ-ಪಾತ್ರ'ದ ಮಹಿಳಾ-ವಾದಿ ವಿಮರ್ಶೆಗಳು ಹುಟ್ಟಿಕೊಂಡಿದ್ದು ವಿಮರ್ಶಕಿಯರಿಗೆ ಮಹಿಳಾ ಚಳವಳಿಯ ಬಗ್ಗೆಗಿರುವ ರಾಜಕೀಯ ಧೋರಣೆಯೇ ಕಾರಣವೆಂದು ಪೀಟರ್ ಶಾ ನುಡಿಯುತ್ತಾರೆ. ಈ ಎರಡು ಹಂತಗಳ ವೈಫಲ್ಯದಿಂದ ಉದ್ಭವಿಸಿದ ಮೂರನೇ ಹಂತದ ಮಹಿಳಾ-ವಾದಿ ವಿಮರ್ಶೆಯ ಚಳವಳಿ ಹೆಚ್ಚು ರಾಜಕೀಯ ಬದ್ಧತೆಗೆ ಒಳಗಾಗಿತ್ತು ಎನ್ನುವುದು ಇವರ ಅಭಿಪ್ರಾಯ. ಮಹಿಳಾ-ವಾದಿ ಸಾಹಿತ್ಯ ವಿಮರ್ಶೆಯನ್ನು ರಾಜಕೀಯ ದೃಷ್ಟಿಯ ಹಿನ್ನೆಲೆಯಲ್ಲಿ ಓದುವುದು ಈ ದೃಷ್ಟಿಯಿಂದ ಅಗತ್ಯವಾಗುತ್ತದೆ. ಮೊದಲ ಹಾಗೂ ದ್ವಿತೀಯ ಹಂತದ ವೈಫಲ್ಯಗಳನ್ನು ಗುರುತಿಸಿ ಬರೆದ ವಿಮರ್ಶಕಿಯರೂ ಸಹ ಮಹಿಳಾ ಚಳವಳಿಯಲ್ಲಿನ ತಮ್ಮ ರಾಜಕೀಯ ಬದ್ಧತೆಯಿಂದಾಗಿ ಮಹಿಳಾ-ವಾದಿ ವಿಮರ್ಶೆಯನ್ನು ತಿರಸ್ಕರಿಸುವುದಿಲ್ಲ ಎಂದು ಪೀಟರ್ ಶಾ ನುಡಿಯುತ್ತಾರೆ. ಹಾಗಾಗಿ ಮೊದಲ ಹಂತಗಳ ಮಹಿಳಾ-ವಾದಿ ವಿಮರ್ಶೆಯನ್ನು ವೈಚಾರಿಕವಾಗಿ ತಳ್ಳಿಹಾಕಿದ್ದಾಗ್ಯೂ ಸಹ, ವಾಸ್ತವದಲ್ಲಿ ಈ ವಿಮರ್ಶೆಯನ್ನು ಸಹಿಸುವಂತಹ ಪ್ರವೃತ್ತಿಯನ್ನು ಮಹಿಳಾ-ವಿಮರ್ಶಕಿಯರಲ್ಲಿ ಹುಟ್ಟಿಹಾಕಿತು. ಅಂದರೆ ವಿಮರ್ಸಕಿಯರು ವಾಸ್ತವದಲ್ಲಿ ಈ ಬಗ್ಗೆ ಮೌನವಾಗಿ ಬಿಡುತ್ತಾರೆ. ಇದಕ್ಕೆ ರಾಜಕೀಯವೇ ಕಾರಣ ಎಂದು ಪಿಟರ್ ಶಾ ಗುರುತಿಸುತ್ತಾರೆ. ಮಹಿಳಾ ಚಳವಳಿಯ ಬಗೆಗಿನ ರಾಜಕೀಯ ಬದ್ಧತಿಯಿಂದಾಗಿ ಮೌನವಾಗಿ ಬಿಡುವ ವಿಮರ್ಶಕಿಯರು ವೈಚಾರಿಕವಾಗಿ ಒಗ್ಗಟ್ಟನ್ನು ಉಳಿಸಿಕೊಂಡಿರುವಂತೆ ಕಾಣಿಸಲು ಪ್ರಯತ್ನಿಸುತ್ತಾರೆ. ಆಗ ಮಾತ್ರ ಮಹಿಳಾ ಚಳವಳಿ ರಾಜಕೀಯವಾಗಿ ಒಟ್ಟು ಸಂಸ್ಕೃತಿಯಲ್ಲಿ ಪ್ರಭಾವ ಬೀರಲು ಸಾಧ್ಯ ಎಂಬುದು ವಿಮರ್ಶಕಿಯರ ಅಭಿಪ್ರಾಯ.

ಟೋರಿಲ್ ಮೋಯಿ ಮಹಿಳಾ ವಿಮರ್ಶಕಿಯರ ಮೂಲ ಉದ್ದೇಶ ರಾಜಕೀಯ ಎನ್ನುತ್ತಾಳೆ. ಈ ಚಳವಳಿಯ ಒಳಗೆ ಮಾತನಾಡುವಾಗ ಈ ರೀತಿಯ ವಿಮರ್ಶೆ ಕೋಪದಿಂದ, ತಾವೇ ಸರಿ ಎಂಬ ಹಟದಿಂದ ಫೆಮಿನಿಸ್ಟರ ಉಗ್ರವಾದದಿಂದ ಹುಟ್ಟಿದ್ದು ಎನ್ನುವ ವಿಮರ್ಶಕಿಯರು, ತಮ್ಮ ಪುರುಷ ಸಹೋದ್ಯೋಗಿಗಳೊಂದಿಗೆ ಈ ಬಗ್ಗೆ ಸಮರ್ಥಿಸಿಕೊಳ್ಳುತ್ತಾರೆ ಅಥವಾ ಮೌನವಾಗಿ ಬಿಡುತ್ತಾರೆ.

ಈ ರೀತಿಯ ವಿಮರ್ಶೆ ಗೊಂದಲ, ಸಂಘರ್ಷದಲ್ಲಿ ಕೊನೆಗೊಳ್ಳಬಹುದು ಎನ್ನುವ ಜೀನ್ ಬೆಥಕ್ ಎಲ್ಸ್‌ಸ್ಟೇನ್ — ಲೈಂಗಿಕತೆಯ ತಂತ್ರಗಳು, ಬಲಿಯಾಗುವ/ಬಲಿತೆಗೆದುಕೊಳ್ಳುವ, ಮುಗ್ಧತೆ/ ಪಾಪಪ್ರಜ್ಞೆ, ಶುದ್ಧಿ/ಅಶುದ್ಧತೆಯಂತಹ ಯಾಂತ್ರಿಕ, ಮನಃಖೇದಗೊಳ್ಳುವ ವಾದವಿವಾದಗಳಿಗೆ ಕಾರಣವಾಗಬಹುದು ಎನ್ನುತ್ತಾರೆ. ಈ ಮೇಲಿನ ವಿಚಾರಗಳನ್ನೇ ವಿಮರ್ಶೆಯಲ್ಲಿ ಉಳಿಸಿಕೊಳ್ಳುವುದಕ್ಕಾಗಿ ವಿಮರ್ಶಕಿಯರು ತಮ್ಮ ಆಳವಾದ ಕೋಪದ ಹೊರೆಯನ್ನು ಹೊತ್ತಿರಲೇಬೇಕಾದಂತಹ ಸಂದರ್ಭವನ್ನು ಈ ವಿಮರ್ಶೆ ನಿರೀಕ್ಷಿಸುತ್ತದೆ. ಆಗ ಅದು ಪ್ರಾಮಾಣಿಕವಾದ ವಿರೋಧವಾಗಿರುವುದಿಲ್ಲ ಎಂದು ಈಕೆ ನುಡಿಯುತ್ತಾಳೆ.

ಹೀಗೆ ಸ್ತ್ರೀ-ವಾದಿ ವಿಮರ್ಶಕಿಯರು ತಮ್ಮ ರಾಜಕೀಯ ಧೋರಣೆಗೋಸ್ಕರ 'ಸ್ತ್ರೀ-ಪಾತ್ರ'ಗಳು ರೀತಿಯಂತಹ ಕೆಟ್ಟ ವಿಮರ್ಶಾ ಧೋರಣೆಯನ್ನು ಹುಟ್ಟು ಹಾಕುತ್ತಾರೆ ಎಂದು ಪೀಟರ್ ಶಾ ನುಡಿಯುತ್ತಾರೆ.

ಇಂತಹ ಸಂದರ್ಭದಲ್ಲಿ ಫೆಮಿನಿಸ್ಟ್ ಎಂದು ಕರೆಸಿಕೊಳ್ಳಬೇಕಾದರೆ ಮಹಿಳೆಯರು ತಾವು ಬರೆದ ಬರಹಗಳಲ್ಲಿ ಕೆಲವು ರಾಜಕೀಯ ಉದ್ದೇಶ ಹಾಗೂ ಗುರಿಗಳಿಗೆ ಬದ್ಧರಾಗಿರಬೇಕಾಗುತ್ತದೆ. ಇನ್ನೂ ಮುಂದುವರೆದು ಕಾವ್ಡ್ ರೋಸಾಲಿಂಡ್ 'ಪುಸ್ತಕ ಓದುವ ಕ್ರಿಯೆಯೇ ಒಂದು ರಾಜಕೀಯ ಕ್ರಿಯೆ' ಎನ್ನುತ್ತಾರೆ. ಸ್ತ್ರೀ-ವಾದಿ ವಿಮರ್ಶೆಯು ಒಂದು ರಾಜಕೀಯ ವಿಮರ್ಶೆ, ಎಲ್ಲ ರೀತಿಯ ಪಿತೃ ಪ್ರಧಾನ ಸಮಾಜವೇ ಹಾಗೂ ಲೈಂಗಿಕತೆಯ ಎಲ್ಲ ರೂಪಗಳನ್ನು ವಿರೋಧಿಸುವುದೆ ಈ ವಿಮರ್ಶೆಯ ಮುಖ್ಯ ಉದ್ದೇಶವಾಗಿರುತ್ತದೆ.

ಈ ರೀತಿಯ ಉದ್ದೇಶಗಳಿಂದ ಸ್ತ್ರೀ-ವಾದಿಗಳು ಸಾಹಿತ್ಯಕ ಸೌಂದರ್ಯ ಮೌಲ್ಯಗಳನ್ನು ನಿರಾಕರಿಸುತ್ತಾರೆ. ಕ್ರಾಂತಿಕಾರಕ ರಾಜಕೀಯವನ್ನು ಎತ್ತಿ ಹಿಡಿಯುವುದೇ ಇವರ ಸ್ತ್ರೀ-ವಾದಿ ವಿಮರ್ಶೆಯ ಪರಿಪಾಠವಾಗಿ ಬಿಡುತ್ತದೆ. ಸಂಸ್ಕೃತಿ, ಬರಹ, ಭಾಷೆ ಇವೆಲ್ಲವೂ ಸ್ತ್ರೀ-ವಾದಿ ವಿಮರ್ಶಕಿಯರು ವಾದಿಸುವ ರೀತಿ ಆಂತರಿಕವಾಗಿಯೇ, ಮೂಲಭೂತವಾಗಿಯೇ ರಿಪುಸೀವ್ ಆಗಿದ್ದರೆ, ಇವುಗಳ ವ್ಯಾಖ್ಯಾನ ಕೂಡಾ ಹಾಗೆಯೇ ಆಗಿರುತ್ತದೆ ಎನ್ನುವ ಪೀಟರ್ ಶಾ ಸ್ತ್ರೀ-ವಾದಿ ವಿಮರ್ಶೆ ಎನ್ನುವುದು ಇರುವುದು ಸಾಧ್ಯವೇ ಇಲ್ಲ ಎನ್ನುತ್ತಾರೆ.

ಇಂಗ್ಲೆಂಡಿನಲ್ಲಿ ಸ್ತ್ರೀ-ವಾದಿ ವಿಮರ್ಶೆ ಅದರ ವಿರೋಧಿ ಸಂವಾದವನ್ನು ಮಾರ್ಕ್ಸಿಸಂನಿಂದ ಕಲಿಯಿತು. ಹಾಗಾಗಿ ಮಾರ್ಕ್ಸ್‌ವಾದಿಗಳು ಸ್ತ್ರೀ—ವಾದಿ ವಿಮರ್ಶೆಯನ್ನು ಕ್ರಾಂತಿಯ ಅಡ್ಡಗಾಲು ಎಂದು ಭಾವಿಸುತ್ತಾರೆ.

ಅಮೇರಿಕಾದ ಮಹಿಳೆಯರು ರ್‍ಯಾಡಿಕಲ್ಸ್‌ರ ರಾಜಕೀಯದಿಂದ ಪ್ರೇರೇಪಿತರಾದವರು, ಶೋಷಣೆಯನ್ನು ಸಾಹಿತ್ಯಕ ಮೌಲ್ಯಗಳ ಮುಂದೆ ರ್‍ಯಾಡಿಕಲ್ಸ್‌ರು ಎತ್ತಿ ಹಿಡಿದರೆ, ಲಿಂಗಾಧಾರಿತ ರಾಜಕೀಯದಿಂದ ಮಹಿಳೆಯರ ಸ್ಥಿತಿ-ಗತಿಯನ್ನು ಸುಧಾರಿಸಲು ಸ್ತ್ರೀ—ವಾದಿ ವಿಮರ್ಶಕಿಯರು ಮಹಿಳಾ ಪ್ರಶ್ನೆಗಳನ್ನು ಸಾಹಿತ್ಯಕ ಮೌಲ್ಯಗಳ ಮುಂದೆ ಎತ್ತಿ ಹಿಡಿಯುತ್ತಾರೆ.

ಈ ರೀತಿ ರ್‍ಯಾಡಿಕಲ್ಸ್‌ರ ರಾಜಕೀಯದಿಂದ ಪ್ರಭಾವಿತರಾದ ಮಹಿಳಾ ವಾದಿಗಳು ಲಿಂಗಾಧಾರಿತ ಭಿನ್ನತೆಗಳು ಎಂದರೆ ಲೈಂಗಿಕತೆಯ ರಾಜಕೀಯ ಎಂದೇ ಭಾವಿಸುತ್ತಾರೆ,

1) ಪ್ರತ್ಯೇಕ ಮಹಿಳಾ ಪ್ರಜ್ಞೆ.

2) ಪ್ರತ್ಯೇಕ ಮಹಿಳಾ ಬರವಣಿಗೆಯ ಶೈಲಿ.

3) ಪ್ರತ್ಯೇಕ ಮಹಿಳಾ ವಿಮರ್ಶೆ.

4) ಲೈಂಗಿಕತೆ—ಕೆಲವು ನಿರ್ದಿಷ್ಟ ಸಾಹಿತ್ಯಕ ಮೌಲ್ಯಗಳನ್ನು ತಳ್ಳಿ ಹಾಕುವುದು.

5) ರ್‍ಯಾಡಿಕಲ್ ರಾಜಕೀಯ ಒಟ್ಟಾಗಿ ಸಾಹಿತ್ಯಕ ಮೌಲ್ಯಗಳನ್ನು ತಳ್ಳಿ ಹಾಕಿ ಬಿಡುತ್ತದೆ.

ಇವು ಅಮೇರಿಕಾದ ಸ್ತ್ರೀ—ವಾದಿ ವಿಮರ್ಶಕಿಯರು ಹುಟ್ಟು ಹಾಕಿದ ಸಂಗತಿಗಳು. ಸ್ತ್ರೀ—ವಾದಿ ವಿಮರ್ಶಕಿಯರು ಸಾಹಿತ್ಯಕ ಮೌಲ್ಯಗಳನ್ನು ಮಹಿಳಾ ಚಳವಳಿಗೆ ಅಡಿಯಾಳಾಗಿ ಬೆಳಸಿಕೊಳ್ಳುತ್ತಾರೆ. ಯಾವಾಗ ಹಾಗೂ ಎಲ್ಲಿಯವರೆಗೆ ಸ್ತ್ರೀ—ವಾದಿ ವಿಮರ್ಶೆ ಎನ್ನುವುದು ಸೌಂದರ್ಯ ಮೌಲ್ಯಕ್ಕೆ, ಪ್ರಜ್ಞೆಗೆ ಬದ್ಧವಾಗಿರುವುದಿಲ್ಲವೋ—ಅಲ್ಲಿಯವರೆಗೆ ಈ ವಿಮರ್ಶೆ ತನ್ನ ಕಡೆಗೆ ತಾನೇ ತಿರುಗಿಕೊಂಡಿರುತ್ತದೆ ಎನ್ನುತ್ತಾರೆ ಪೀಟರ್ ಶಾ. ಜೊತೆಗೆ ತನ್ನ ಅಪ್ರಬುದ್ಧ ವಾದಗಳಿಂದ ಒಂದಾದ ಮೇಲೊಂದರಂತೆ ಅನೇಕ ಹಂತಗಳನ್ನು ಈ ಸ್ತ್ರೀವಾದಿ ವಿಮರ್ಶೆ ಹುಟ್ಟು ಹಾಕುತ್ತದೆ ಎಂದೂ ಸಹ ಅಭಿಪ್ರಾಯ ಪಡುತ್ತಾರೆ.

ಸ್ತ್ರೀ—ವಾದಿ ವಿಮರ್ಶೆಯ ಮುಖ್ಯವಾದ ಸೋಲೆಂದರೆ ಮಹಿಳೆಯರ ಸ್ಥಾನ—ಮಾನ ಉತ್ತಮ ಪಡಿಸುವ ಬದಲು ಅವರ ಅವನತಿಗೆ ಕಾರಣವಾಗಿದ್ದು. ಸಂಪ್ರದಾಯಬದ್ಧ ಸಮಾಜ ಸ್ತ್ರೀ—ವಾದಿ ವಿಮರ್ಶಕಿಯರ ತರಹ ಮಹಿಳೆಯರನ್ನು ಯಾವಾಗಲಾದರೂ ದುಃಸ್ಥಿತಿಗೆ ತಳ್ಳಿದೆಯೇ ಎಂದು ಶಾರವರು ಪ್ರಶ್ನಿಸುತ್ತಾರೆ.

ಸ್ತ್ರೀ—ವಾದಿ ವಿಮರ್ಶೆಯ ಸ್ವ-ವೈರುದ್ಧ್ಯಗಳಿಗೆ ಇದರ ತೀವ್ರ ಸ್ವರೂಪದ ರಾಜಕೀಯವೇ ಕಾರಣ ಎನ್ನುವ ಲೇಖಕ ಈ ವಿಮರ್ಶೆ ಕಾಲಕ್ರಮದಲ್ಲಿ ಒಟ್ಟು ಸಾಹಿತ್ಯದ ಮೇಲೆ ಯಾವ ರೀತಿಯ ಪ್ರಭಾವ ಬೀರಲು ಸಾಧ್ಯ ಎನ್ನುತ್ತಾರೆ.


ಎಲ್ಲಿಯವರೆಗೆ ಪ್ರತ್ಯೇಕ ಭಾಷೆ, ಪ್ರತ್ಯೇಕ ಸೌಂದರ್ಯ ಪ್ರಜ್ಞೆ—ಹೀಗೆ ಪ್ರತ್ಯೇಕತೆಗಳನ್ನು ಸ್ತ್ರೀ—ವಾದಿ ವಿಮರ್ಶೆ ಉಳಿಸಿಕೊಳ್ಳುತ್ತದೆಯೋ ಅಲ್ಲಿಯವರೆಗೆ ಇದು ಒಂದು(ಐಸೋಲೇಟೆಡ್ ಫಿನಾಮಿನಾ) ಪ್ರತ್ಯೇಕ ವಿಮರ್ಶೆಯಾಗಿಯೇ ಉಳಿಯುತ್ತದೆ ಎನ್ನುವ ಪೀಟರ್ ಶಾ ಈ ಕೆಳಗಿನ ಅಪಾಯಗಳನ್ನು ಗುರುತಿಸುತ್ತಾರೆ.

1) ಸ್ತ್ರೀ—ವಾದಿ ವಿಮರ್ಶೆ ಮಹಿಳೆಯರನ್ನು ಸಾಹಿತ್ಯದಿಂದ ಪ್ರತ್ಯೇಕಿಸುತ್ತದೆ.

2) ಮಾನವನ ಅಭಿವ್ಯಕ್ತಿ ಪ್ರಜ್ಞೆಯನ್ನು ಪ್ರಬುದ್ಧಗೊಳಿಸುವುದಿಲ್ಲ.

3) ಸ್ತ್ರೀ—ವಾದಿ ವಿಮರ್ಶಕಿಯರು ಈ ಮಾನವೀಯ ಸಂಸ್ಕೃತಿಯ ಅಭಿವೃದ್ಧಿಯಲ್ಲಿ ಯಾವುದೇ ಮಹತ್ವವಾದ ಕೊಡುಗೆ ನೀಡಲಾಗುವುದಿಲ್ಲ ಎನ್ನುತ್ತಾರೆ ಪೀಟರ್ ಶಾ.

ಎಚ್. ಎಸ್. ಚಂಪಾವತಿ.



ಸ್ತ್ರೀ -- ಸೆನ್ಸಾರ್ – ಸಮೂಹ

-- ಕಲೆ ಇತ್ಯಾದಿ............

—ವಿಜಯಾ.

ಯಾವುದೇ ಕಲಾಮಾಧ್ಯಮದ ಬಗ್ಗೆ ಹೇಳುವಾಗ "ಕಲೆ" - "ರೂಕ್ಷತೆ" ಗಳ ನಡುವೆ ಇರುವ ಪಾರದರ್ಶಕವಾದ ತೆರೆಯನ್ನು ಮರೆಯುವಂತಿಲ್ಲ. ಇದು ಯಾವ ಕ್ಷಣದಲ್ಲೂ ಒಂದನ್ನೊಂದು ಉಲ್ಲಂಘಿಸಿಬಿಡಬಹುದು. ಇಂಥ ಮಾಧ್ಯಮದಲ್ಲಿ ಸ್ತ್ರೀಯ ಚಿತ್ರಣ ಹೇಗಿರುತ್ತದೆ ಎಂಬ ಬಗ್ಗೆ ನಮ್ಮೆದುರು ಇರುವ ಅನೇಕ ದ್ವಂದ್ವಗಳನ್ನು ವಿಸ್ತರಿಸಿ ಸಾಧಾರಣೀಕರಿಸುವಂತಿಲ್ಲ. ವಾಸ್ತವ–ಅವಾಸ್ತವಗಳ ಗಡಿಯನ್ನು ಗುರುತಿಸಿಕೊಂಡಿರದ ಸಮಗ್ರ ವಿಶ್ವದ ಸಂದರ್ಭದಲ್ಲೇ ಸ್ತ್ರೀಯ ಯಥಾವತ್ ಚಿತ್ರಣ ಸಾಧ್ಯವಾಗಿಲ್ಲ ಎಂಬುದು ನಗ್ನಸತ್ಯ. ಆಕೆಯ ಸಂಕೀರ್ಣ ಮನಸ್ಸನ್ನು ಗುರುತಿಸದ ಭಾರತೀಯ ಸಂದರ್ಭದಲ್ಲಂತೂ ಅನೇಕ ವಿರೋಧಾಭಾಸಗಳೇ ತುಂಬಿರುವ ಚಿತ್ರ ಮಾಧ್ಯಮದ ಕೆಲವು ವಿಚಾರಗಳನ್ನು ಇಲ್ಲಿ ಗುರುತಿಸಲು ಪ್ರಯತ್ನಿಸುತ್ತಿದ್ದೇನೆ.

ಪುರುಷ ಸಮಾಜದಿಂದಾಗುವ ಶೋಷಣೆ ಎಂಬ ಕ್ಲೀಷೆಯನ್ನು ಬಳಸಿ ಕೊಡು–ಕೊಳ್ಳುವ ಕ್ರಿಯೆಗೆ ಎರಡೂ ದಿಕ್ಕಿನಿಂದ ಬೇರೆ ಬೇರೆ ಕಾರಣಗಳ ಹಿನ್ನೆಲೆಯಲ್ಲಿ ಸಂಭವಿಸುತ್ತಿರುವ ಪ್ರಕ್ರಿಯೆಗೆ ಕೇವಲ "ಶೋಷಣೆ" ಎಂಬ ಹಣೆಪಟ್ಟಿಯಾದರೆ ಏಕಪಕ್ಷೀಯವಾಗುವ ಅಪಾಯ ಇದೆ. ಇಲ್ಲಿ ಸಮಾಜದ ಆರೋಗ್ಯದ ಬಗ್ಗೆ ಕಳಕಳಿ ಮುಖ್ಯ.

ಒಂದು ಬಹುದೊಡ್ಡ ಸಮೂಹ ಕೆಲವು "ರೀತಿ" ಗಳನ್ನು ಒಪ್ಪಿ, ನಡೆಸಿಕೊಂಡು ಬರುತ್ತದೆ. ಆ ಸಮೂಹದ ನಿರ್ಣಯ ಅಥವಾ ನಮ್ಮ ವ್ಯಾಖ್ಯಾನಗಳಿಗೆ ಒತ್ತುಕೊಡುತ್ತ ಬಹುಜನರ ಒಪ್ಪಿಗೆಯನ್ನೇ "ಜನವಿರೋಧಿ" ಎಂದು ಬಿಡುತ್ತಿದ್ದೇವೆಯೇ ಎಂಬ ಪ್ರಶ್ನೆ ಎಲ್ಲ ಗಂಭೀರವಾದ ಆಲೋಚನೆಯ ಹಿಂದೆ ಕಾಡುತ್ತಲೇ ಇರುತ್ತದೆ. ಇಂಥ ದ್ವಂದ್ವವನ್ನೇ ನಮ್ಮ ವ್ಯಾಪಾರೀ ಚಿತ್ರರಂಗದ ಜನ ಪದೇ ಪದೇ ಬಳಸುತ್ತ "ಜನಪ್ರಿಯತೆ" ಯನ್ನು ವ್ಯಾಖ್ಯಾನಿಸಿಕೊಳ್ಳುತ್ತ, ಪ್ರಶ್ನಿಸುವವರ ಬಾಯಿ ಮುಚ್ಚಿಸುವುದುಂಟು. ಪ್ರಶ್ನೆಗಳಿವೆ — ಸಿದ್ಧ ಉತ್ತರಗಳೂ ಇವೆ ಎಂದ ಕಾರಣಕ್ಕೇ ನಮ್ಮ ಬದುಕು – ಅನುಭವ – ನಂಬಿಕೆ – ನಿರೀಕ್ಷೆಗಳಿಂದ ಏರ್ಪಟ್ಟ ನಿರ್ಣಯಗಳನ್ನು ಕೈಬಿಡಬೇಕೆಂದು ಅರ್ಥವಲ್ಲ. ಈ ಕಾರಣಕ್ಕಾಗೇ ಒಂದು ವ್ಯಕ್ತಿಯ ಅಭಿಪ್ರಾಯವೇ ಇಡೀ ಸಮೂಹದ್ದಾಗಬೇಕಿಲ್ಲ. ಆದರೆ ಅನೇಕ ವ್ಯಕ್ತಿಗಳ ಅನುಭವ-ನಿರ್ಣಯಗಳು ಸಮೂಹ ತನ್ನ ಅಗತ್ಯದ ಆಧಾರದ ಮೇಲೆ, ಹಿತಕ್ಕಾಗಿ "ನೀತಿ" ಗಳನ್ನು ರೂಪಿಸುತ್ತದೆ. ಆದರೆ ಇದು ಕಾಲಕಾಲಕ್ಕೆ ಬದಲಾಗಬೇಕಾದ ಅನಿವಾರ್ಯಗಳನ್ನು ಸಮೂಹ-ಸಮಾಜ ನೆನಪಿನಲ್ಲಿಡದೇ ಯಥಾಸ್ಥಿತಿವಾದೀ ಸಮೂಹವೆಂದು ಸದಾ ಅಸ್ತಿತ್ವದಲ್ಲಿರುತ್ತಾದ್ದರಿಂದ ಮತ್ತು ಹೊಸ ಬದಲಾವಣೆಗಳನ್ನು ಸ್ವೀಕರಿಸದೆ ತನ್ನ ಒಂದು ಕಾಲದ "ಸಂಸ್ಕೃತಿ" ಯ ಪೋಷಕ ರಕ್ಷಕ ಎಂಬಂತೆ ವರ್ತಿಸುತ್ತಿರುತ್ತದೆ. ಮತ್ತು ಇಂಥ ಹಳೆಯ ಮೌಲ್ಯ ಪ್ರತಿಪಾದಕರನ್ನು ವಿರೋಧಿಸದೆ, ಒಪ್ಪುವುದರಲ್ಲಿ ಕ್ಷೇಮವಿದೆ ಎಂಬ ಕಾರಣಕ್ಕಾಗಿಯೇ ಸುಲಭವಾಗಿ ಇವನ್ನು ಸ್ಥಿರಮೌಲ್ಯಗಳಾಗಿ, ಮಾದರಿಗಳಾಗಿ ಮಾಡಿಕೊಳ್ಳುತ್ತವೆ ನಮ್ಮ ಅನೇಕ ಕಲಾಮಾಧ್ಯಮಗಳು. ಇಲ್ಲಿ ನಿವಾರಣೆಕ್ಕೆ ಹೆಚ್ಚಿನ ಕ್ರಮ, ಸಿದ್ಧತೆ, ಅನ್ವೇಷಣೆಗಳೂ ಅಗತ್ಯವಿಲ್ಲ!

ಈ ಹಿನ್ನೆಲೆಯಲ್ಲಿ ಈ ಹೊತ್ತು ನಮ್ಮ ಭಾರತೀಯ ಸ್ತ್ರೀ ಕಲಾಮಾಧ್ಯಮಗಳಲ್ಲಿ, ಅದೂ ಬಹು ಬಂಡವಾಳ ತೊಡಗಿಸಿ ಅದನ್ನು ಹಿಂದಕ್ಕೆ ಪಡೆಯಲು ಹಾತೊರೆಯುವ ಸಿನಿಮಾದಂತಹ ಮಾಧ್ಯಮದಲ್ಲಿ ಬರುವ ಸ್ತ್ರೀಗೆ ಕೆಲವು ವಿಶಿಷ್ಟ "ಮಾದರಿ" ಗಳನ್ನು ಸೃಷ್ಟಿಸಲಾಗಿದೆ, ಸಣ್ಣ ಪುಟ್ಟ ಬದಲಾವಣೆಗಳೊಡನೆ ಅಚ್ಚುಗಳಿಂದ ಹೊರಬರುವ ಈ ಪಾತ್ರಗಳು ಸಮುದಾಯವನ್ನು ಎಂದೂ ಚಿಂತನೆಗೆ ಹಚ್ಚಲಾರವು. ಹೀಗೆ ಸಿನಿಮಾದಲ್ಲಿ ಬರುವ ತಾಯಿ, ಅಜ್ಜಿ, ಅತ್ತಿಗೆ, ನಾದಿನಿ, ಹೆಂಡತಿಗಳೇ ಅಲ್ಲದೆ ಆ ಪಾತ್ರಗಳನ್ನು "ಕರಿ - ಬಿಳಿ" ಆಗಿಸಲು ಬೇಕಾದ ಬೇರೆ, ಬೇರೆ ಗೆಶ್ಚರ್‌ಗಳ ನಮೂನೆಗಳೂ ಇವೆ.

೧) ಸದಾ ತಾಂಬೂಲ ಜಗಿಯುತ್ತ, ಕೈಬೀಸಿ ಮಾತಾಡುವ ಹೆಂಗಸು ಗಟಾಣಿಯೋ, ಕುಂಟಲಗಿತ್ತಿಯೋ ಆಗಿರುತ್ತಾಳೆ.

೨) ಸಾಧಾರಣ ಬಣ್ಣದ ವಾಯಿಲ್ ಸೀರೆ ಉಟ್ಟು, ಮೈತುಂಬ ಸೆರಗು ಹೊದ್ದು, ಉದ್ಯೋಗಸ್ಥೆಯಾಗಿರುವಾಕೆ ಒಳ್ಳೆಯ ಹುಡುಗಿ, ಕುಟುಂಬಕ್ಕಾಗಿ ತ್ಯಾಗ ಮಾಡುವವಳು.

೩) ತಲೆಗೆ ಟವಲ್ ಸುತ್ತಿಕೊಂಡು, ತುಳಸಿಕಟ್ಟೆ ಸುತ್ತಿ, ಹೊಗೆಯೇಳುವ ಕಾಫಿ ಹಿಡಿದು ಗಂಡನನ್ನೆಬ್ಬಿಸುವ, ಆ ಕ್ಷಣದ ಆಕೆಯ ದೈವೀಕ (!) ಸೌಂದರ್ಯಕ್ಕೆ ಮಾರುಹೋಗಿ ಬರಸೆಳೆದು. ....ವ ಗಂಡ ಹುಸಿಮುನಿಸು ತೋರುವ ಆಕೆ............... ಇತ್ಯಾದಿ ಕೆಲವು ಮುತ್ತೈದೆ, ಸೊಸೆ, ಮಡದಿಯರ ನಮೂನೆಗಳು.

೪) ರಾತ್ರಿ ಕುಡಿದುಬಂದು ಜೊಲ್ಲುಸುರಿಸುತ್ತ ಕತ್ತೆಯ ಹಾಗೆ ಬಿದ್ದುಕೊಳ್ಳುವ ಗಂಡನ ಆರೋಗ್ಯದ ಕಾಳಜಿ ಮಾಡಿ, ಕಣ್ಣೀರು ಹಾಕುತ್ತ ಸದ್ದಿಲ್ಲದೆ ಆತನ ಬೂಟುಗಳನ್ನ ಬಿಚ್ಚಿಟ್ಟು, ಹೊದಿಸಿ ಮಲಗಿಸುವ ಶ್ರೀಮಂತ ಗರತಿ!

ಅಥವಾ ಕುಡಿದು ಬರುವ ಗಂಡನ ಸ್ಥಿತಿಗೆ ಕಣ್ಣೀರಿಟ್ಟು ಬರಿದಾದ ಪಾತ್ರೆಯಲ್ಲಿ ಕುಡಿಯಲು ನೀರೂ ಇಲ್ಲದಾಗ ಬಸವಳಿದು ಕಣ್ಣೀರಿಡುವ ಪತಿವ್ರತೆ .... ಮಕ್ಕಳನ್ನು ತಬ್ಬಿ ನಿಶ್ಯಬ್ದವಾಗಿ ಅಳುವ ಹೆಣ್ಣು........ ಹೀಗೇ ಪಟ್ಟಿ ಬೆಳೆಸಬಹುದು...............

ಪ್ರಜ್ಞಾವಂತ - ದಿಟ್ಟ ಮಹಿಳೆಯಾಗಿ ತೋರುವ ಸ್ತ್ರೀ ಪಾತ್ರಗಳೂ ಅಂತಿಮವಾಗಿ ತಮ್ಮ "ತಪ್ಪ" ತಿದ್ದಿಕೊಂಡು ಈ ಮೇಲಿನ "ಮಾದರಿ" ಗಳ ಹಾಗೇ ಬದಲಾಗುತ್ತಾರೆ. ಈ ಗರತಿಯರು ಕೊಲೆಗಡುಕ, ಅತ್ಯಾಚಾರಿ ಗಂಡನನ್ನೂ ಉಳಿಸಲು ಹೆಣಗುತ್ತಾರೆ. ತಮ್ಮ "ತಾಳಿ" ಯ ಸೆಂಟಿಮೆಂಟ್ ಬಳಸಿ ಒಂದು ರೀತಿಯ ಎಮೋಷನಲ್ ಬ್ಲ್ಯಾಕ್‌ಮೇಲ್ ಮಾಡಿ ಗಂಡನನ್ನು ಉಳಿಸಿಕೊಳ್ಳುತ್ತಾರೆ. ಗಂಡನ ಖಾಯಿಲೆಗೆ ಕೊರಗುವುದರಲ್ಲಿ ಹೆಚ್ಚಿನಂಶ ತಮ್ಮ ಮಾಂಗಲ್ಯ ರಹಿತ ಬರಿ ಕೊರಳಿನ ಬಗ್ಗೆ ಆತಂಕ!

ಇದಕ್ಕೆ ತದ್ವಿರುದ್ಧವಾದ ಗಂಡನನ್ನು ಗುಲಾಮನಾಗಿಸಿಕೊಳ್ಳುವ, ಸೀರೆ, ಒಡವೆಗೆ ಹಟಮಾಡುವ ಮಡದಿಯರೂ, ಒಳ್ಳೆಯವರನ್ನು ಹಿಂಸಿಸುವ ಹೆಂಗಸರು, ಇತ್ಯಾದಿಗಳೂ ಇರುತ್ತಾರೆ. ಇವರೆಲ್ಲ ಕೊನೆಯ ದೃಶ್ಯದ ವೇಳೆಗೆ "ಪಳಗಿಸ" ಲ್ಪಟ್ಟು ಮೂಲ "ಮಾದರಿ" ಗಳೇ ಆಗುತ್ತಾರೆ. ಒದ್ದೆ ಮೈಯಲ್ಲಿ ಉರುಳುಸೇವೆ ಮಾಡಿ ಸಾಬೀತು ಮಾಡುತ್ತಾರೆ. ಕೊಲೆ, ಕಳ್ಳತನ ಭ ಇರ, ದುಷ್ಕೃತ್ಯಗಳು ಎಲ್ಲವೂ ಸಂಭವಿಸುವುದೇ ಸ್ತ್ರೀಯರಿಂದ ಎಂಬ ತೀರ್ಮಾನ ಕೂಡಾ ಮಾಡುತ್ತಿವೆ ಸಿನಿಮಾಗಳು. ಹೀಗೇ ಮೂಢನಂಬಿಕೆ, ದೇಹ ಪ್ರದರ್ಶನ ಇತ್ಯಾದಿಗಳ ಬಗ್ಗೆ ವಿವರ ಹೇಳಬೇಕಿಲ್ಲ.

ಇಂಡಿಯಾದ ಚರಿತ್ರೆಯಲ್ಲೇ ಇರುವ ಊಳಿಗಮಾನ್ಯ ಪದ್ಧತಿಯ ಅಡಿಯಲ್ಲಿ ಬರುವ ಜಾತೀಯತೆ, ಆರ್ಥಿಕ ಅಸಮಾನತೆಗಳ ಸಂಕಟದಲ್ಲಿ ಬದುಕುತ್ತಿರುವ ಶ್ರೀಸಾಮಾನ್ಯನಿಗೆ ಈ ಮೇಲಿನ "ಮಾದರಿ" ಗಳನ್ನು ಕೊಡುವ ಅವಾಸ್ತವವಾದೀ ಯಜಮಾನರುಗಳೇ ಆದರ್ಶವಾಗಿ ಬಿಡುತ್ತಾರೆ! ಬದುಕಿನಲ್ಲಿಯ ಅಸಹನೀಯ ಸ್ಥಿತಿ ಮನಸ್ಸನ್ನು ಪಲಾಯನ ಮಾಡಲು ಪ್ರೇರಿಸುತ್ತದೆ. ವ್ಯಾಪಾರೀ ಚಿತ್ರಗಳ "ಭ್ರಮಾಲೋಕ" ದಲ್ಲಿ ತೃಪ್ತಿಯನ್ನು ಕಾಣಲು ತವಕಿಸುತ್ತಾನೆ. ಹೀಗಾಗಿಯೇ ಸಿನಿಮಾದಲ್ಲಿಯ ಸೆಕ್ಸ್-ಹಿಂಸೆಗಳು ಜನಪ್ರಿಯವಾಗುತ್ತಿವೆ! ತಾನು ಮಾಡಲಾಗದ್ದನ್ನು ತೆರೆಯಮೇಲೆ ಕಂಡು ತನ್ನನ್ನು ಆರೋಪಿಸಿಕೊಂಡು ಸುಖಿಸುವ ಪ್ರವೃತ್ತಿಯಿಂದಾಗಿ ಅಗತ್ಯಗಳು ಮರೆಯಾಗುತ್ತಿವೆ. ಮತ್ತು ಅದಕ್ಕಾಗಿ ಕೊಟ್ಟದ್ದನ್ನೆಲ್ಲ "ಹಸಾದ" ವೆಂದು ಸ್ವೀಕರಿಸದೆ "ಗ್ರಾಹಕರ ಅಸಹಕಾರ" ದ ಮೂಲಕ ಬೇಕಾದ್ದನ್ನು ಪಡೆಯುವ ಎಚ್ಚರ ಇಲ್ಲವಾಗಿದೆ.

"ಕ್ಯಾಬರೆ" ಯಂಥ ಕಲೆ ವಿರೂಪ-ವಿಕೃತ ಅನಿಸುವುದಾಗಲೀ, ಸೆಕ್ಸ್-ಹಿಂಸೆ ಎಂದಾಗ ಪ್ರಧಾನವಾಗಿ ಬರುವುದು ಸ್ತ್ರೀಯಲೇ ಆದ್ದರಿಂದ ಆಕೆ ಹೀಗೆ ಬಳಸಲ್ಪಡುತ್ತಿದ್ದಾಳೆ ಎಂಬುದಕ್ಕಿಂತ ತನ್ನೊಳಗಿನ ಅಸಹಾಯಕತೆ, ಅಸಹನೀಯತೆಗೆ ನಮ್ಮ ಜನಾಂಗ ಈ ಮೂಲಕ ಕಂಡುಕೊಳ್ಳ ಬಯಸುವ ಸಮಾಧಾನದ ಹಿಂದೆ ಈ ಸಮಾಜದ ದೊಡ್ಡ ದುರಂತವೇ ಇದೆ. ಇಲ್ಲಿಯ ಆಕೆಯ "ಶೋಷಣೆ" ಎಂಬುದಕ್ಕಿಂತ ಅಥದರ ಪರಿಣಾಮ, ಅದರ ಹಿಂದಿರುವ ರೋಗಗ್ರಸ್ತ ಮನಸ್ಸುಗಳ ಬಗ್ಗೆ ಆತಂಕವಾಗುತ್ತದೆ. ಇಲ್ಲಿ ತೆರೆಯ ಮೇಲಿನ "ಶೋಷಣೆ" ಗಿಂತ ಅದರ ಹಿಂದಿನದು ಮತ್ತೂ ಭಯಂಕರ. ೧೬ ವಯಸ್ಸೂ ಆಗಿರದ ಬಾಲೆಯನ್ನು (ಪ್ರೀತಿ, ಸ್ನೇಹದ ಬಗ್ಗೆ ಉದ್ದುದ್ದ ಮಾತಾಡುವ ಬುದ್ಧಿವಂತರು) "ಖಂಡವಿದೆಕೊ ಮಾಂಸವಿದೆಕೊ" ನಲ್ಲಿ ಹೇಗೆ ಬಳಸಿಕೊಂಡರು ಎಂಬುದನ್ನು ನೆನೆದಾಗ, ಈ ವ್ಯಗ್ರಗೊಂಡ ಮನಸ್ಸುಗಳು ಕೇವಲ ಒಂದು ವರ್ಗದಲ್ಲಿಲ್ಲ, ಅದು ಬೇರೆ ಬೇರೆ ವರ್ಗಗಳಲ್ಲೂ ಅದರದೇ ಆದ ಮನಸ್ಸಿನ ಅಭಿರುಚಿಯ ಹಿನ್ನೆಲೆಯಲ್ಲಿ ರೂಪಿತವಾಗುತ್ತಿರುವುದೆ ಎಂಬುದೂ, ಇಂಥದರಿಂದ ತೃಪ್ತಿ ಪಡೆಯ ಬಯಸುವ ಅಸ್ವಸ್ಥ ಯುವಜನಾಂಗದ

ಮೇಲೆ ಆಗುವ ಪರಿಣಾಮಗಳೇನೆಂಬುದನ್ನು ಈ ಹೊತ್ತಿನ ನಮ್ಮ ಸಮಾಜದಲ್ಲಿ ನಡೆಯುತ್ತಿರುವ ಅನೇಕ ಅಮಾನುಷ ಎನ್ನಿಸುವಂಥ ದುರ್ಘಟನೆಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದಾಗಿದೆ.

ವ್ಯಕ್ತಿಯ ಅತೃಪ್ತಿಯನ್ನು ಈ ವಿಕೃತದಿಂದ ಸಮಾಧಾನ ಪಡಿಸಿದ ಹಾಗೆ (ರೊಚ್ಚಿಗೆಬ್ಬಿಸೋದೂ ಕೂಡ) ಅವನೊಳಗಿನ ಮೃದುತ್ವಕ್ಕೆ ಬೇಕಾದ ತ್ಯಾಗಮಯಿ, ವಾತ್ಸಲ್ಯಮಯಿ, ಪ್ರೇಮಮಯಿ, ಪಾತ್ರಗಳು ಇರುತ್ತವೆ. ಆದರೆ ಸ್ತ್ರೀಯು ಕೇವಲ ಈ ಬಗೆಯ "ಮುತ್ತೈದೆ" ಯೂ ಅಲ್ಲ, ಆ ಬಗೆಯ ಗಯ್ಯಾಳಿಯೂ ಅಲ್ಲ, ಇತ್ತ ವ್ಯಾಂಪ್‌ಗೂ ಅಲ್ಲ, ಕ್ಯಾಬರೆಯವಳು ಅಲ್ಲ............ಆ ಬಗೆಯ ಪಾತ್ರ ನಿರ್ವಹಿಸುತ್ತಿರುವ ಹೆಣ್ಣಿಗೂ ಅವಳದೇ ಆದ ವಾಸ್ತವ ಇನ್ನೊಂದಿರುತ್ತದೆ. ಇದನ್ನೆಲ್ಲ ಅರ್ಥಮಾಡಿಕೊಂಡು ಬಂದ ಚಿತ್ರಗಳೆಷ್ಟು.

ಗಳ ಒತ್ತಡವನ್ನು ದೂರಸರಿಸಿ ಕೆಲಸ ಮಾಡಬೇಕಾದ್ದು ಮೂಲಭೂತ ವಿಚಾರ. ಅವನಿಗೆ ಅವನೊಳಗೇ ಔಚಿತ್ಯ ಪರಿಜ್ಞಾನ ಇರಬೇಕು. ಹೊರಗಿನಿಂದ ಹೇಳಿದುದಲ್ಲ. ಈ ನಿಯಮಗಳ ಅಸಾಂಗತ್ಯವನ್ನು ಪ್ರಶ್ನಿಸಿ ನಿರ್ದೇಶಕ ಕೆ. ಎಂ. ಶಂಕರಪ್ಪನವರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ. ಆದರೆ ಇದು ಸಂವಿಧಾನಿಕ ಬದಲಾವಣೆಯ ಪ್ರಶ್ನೆಯಾದ್ದರಿಂದ ಧೈರ್ಯಮಾಡದ ಪ್ರಭುತ್ವ — ನ್ಯಾಯಾಂಗಗಳು ನೆನೆಗುದಿಗೆ ತಳ್ಳಿವೆ. ಕಪ್ಪುಹಣದ ವಹಿವಾಟಿನ ಹಿನ್ನೆಲೆಯಲ್ಲಿ, ವಿಧ್ವಸ್ಥಗೊಂಡ ಸಮಾಜಿಕ ಸಂದರ್ಭಗಳ ನಡುವೆ ಸೆಲ್ಫ್ ಸೆನ್ಸಾರ್‌ನಂಥ ವಿವೇಚನೆಗೆ ಸ್ಥಾನ ಸಿಗುವುದು ಕಷ್ಟ. ಅದರಾಚೆಗೆ ಜಗಿದು ಮುಗಿಯ ತೃಪ್ತಿಯ ದಾರಿ ತೋರುವ ಮೂಲಕ ದುರ್ಬಲರ ಮೇಲಿನ ಬಲಪ್ರಯೋಗದಿಂದ ತನ್ನ ಅತೃಪ್ತಿಗೆ ಸಮಾಧಾನ ದೊರಕಿಸಬಹುದೆಂಬ

'ಕ್ಯಾಬರೆ' ಯಂಥ ಕಲೆ ವಿರೂಪ – ವಿಕೃತ ಅನಿಸುವುದರಿಂದ, ಸೆಕ್ಸ್ – ಹಿಂಸೆ ಎಂದಾಗ ಪ್ರಧಾನವಾಗಿ ಬರುವುದು ಸ್ತ್ರೀಯಳೇ ಆದ್ದರಿಂದ ಆಕೆ ಹೀಗೆ ಬಳಸಲ್ಪಡುತ್ತಿದ್ದಾಳೆ ಎಂಬುದಕ್ಕಿಂತ ತನ್ನೊಳಗಿನ ಅಸಹಾಯಕತೆ, ಅಸಹನೀಯತೆಗೆ ನಮ್ಮ ಜನಾಂಗ ಈ ಮೂಲಕ ಕಂಡುಕೊಳ್ಳ ಬಯಸುವ ಸಮಾಧಾನದ ಹಿಂದೆ ಈ ಸಮಾಜದ ದೊಡ್ಡ ದುರಂತವೇ ಇದೆ. ಇಲ್ಲಿಯ ಆಕೆಯ 'ಶೋಷಣೆ' ಎಂಬುದಕ್ಕಿಂತ ಅಂಥದರ ಪರಿಣಾಮ – ಅದರ ಹಿಂದಿರುವ ರೋಗಗ್ರಸ್ಥ ಮನಸ್ಸುಗಳ ಬಗ್ಗೆ ಆತಂಕವಾಗುತ್ತದೆ. ಇಲ್ಲಿ ತೆರೆಯ ಮೇಲಿನ "ಶೋಷಣೆ" ಗಿಂತ ಅದರ ಹಿಂದಿನದ್ದು ಮತ್ತೂ ಭಯಂಕರ. ಹದಿನಾರು ವಯಸ್ಸೂ ಆಗಿರದ ಬಾಲೆಯನ್ನು (ಪ್ರೀತಿ, ಸ್ನೇಹದ ಬಗ್ಗೆ ಉಪ್ಪುದ್ದ ಮಾತಾಡುವ ಬುದ್ಧಿವಂತರು.) "ಖಂಡವಿದೆಕೊ, ಮಾಂಸವಿದೆಕೊ" ನಲ್ಲಿ ಹೇಗೆ ಬಳಸಿಕೊಂಡರು ಎಂಬುದನ್ನ ನೆನೆದಾಗ, ಈ ವ್ಯಗ್ರಗೊಂಡ ಮನಸ್ಸುಗಳು ಕೇವಲ ಒಂದು ವರ್ಗದಲ್ಲಿಲ್ಲ, ಅದು ಬೇರೆ ಬೇರೆ ವರ್ಗಗಳಲ್ಲೂ ಅದರದೇ ಆದ ಮನಸ್ಸಿನ ಅಭಿರುಚಿಯ ಹಿನ್ನೆಲೆಯಲ್ಲಿ ರೂಪಿತವಾಗುತ್ತಿರುವುದೆ ಎಂಬುದೂ, ಇಂಥದರಿಂದ ತೃಪ್ತಿ ಪಡೆಯ ಬಯಸುವ ಅಸ್ವಸ್ಥ ಯುವಜನಾಂಗದ ಮೇಲೆ ಆಗುವ ಪರಿಣಾಮಗಳೇನೆಂಬುದನ್ನು, ಈ ಹೊತ್ತಿನ ನಮ್ಮ ಸಮಾಜದಲ್ಲಿ ನಡೆಯುತ್ತಿರುವ ಅನೇಕ ಅಮಾನುಷ ಎನ್ನಿಸುವಂಥ ದುರ್ಘಟನೆಗಳ ಹಿನ್ನೆಲೆಯಲ್ಲಿ ಕಂಡುಕೊಳ್ಳಬಹುದಾಗಿದೆ.

ಅಂದೆಂದೋ ದುನಿಯಾ ನಾಮಾನೆ, ಆಧ್ಮಿಯಂಥ ಚಿತ್ರ ನೀಡಿದವರ ಜನಪರ ನಿಲುವುಗಳೇಕೆ ನಮಗೆ "ಮಾದರಿ" ಯಾಗುವುದಿಲ್ಲ!

ಒಂದೆರಡು ಅಪವಾದಗಳಿರಬಹುದಾದರೂ ಬಹುತೇಕ ಇಡೀ ಚಾಲ್ತಿಯಲ್ಲಿರುವ ಚಿತ್ರಜಗತ್ತಿನ ನಿಯಮ ಎನ್ನಲು ಸಂಕೋಚವಾಗುತ್ತದೆ. ಮೇಲೆ ಹೇಳಿದ ಎಲ್ಲ ದ್ವಂದ್ವಗಳೂ ನಿಯಂತ್ರಿಸಬೇಕಾದ ಸೆನ್ಸಾರ್ ನಿಯಮಗಳಲ್ಲೂ ಇದೆ. ಇನ್ನೂ ವಸ್ತುರೂಪಗಳ ಬಗ್ಗೆ ಖಚಿತವಿಲ್ಲ. ವ್ಯಾಪಾರವೂ ಸೇರಿದಾಗ ಬರೀ ಗೊಂದಲ ಇಂಥಲ್ಲಿ ಸರ್ಕಾರ ಸಮಾಜದ ಬಗ್ಗೆ ಕಳಕಳಿ ಇರುವಂತೆ ತೋರುತ್ತ, ಆ ಉದಾರತೆಯ ಹಿಂದೆ ನಾವು ಸುಲಭವಾಗಿ ಗುರುತಿಸಲಾಗದಂಥ ಸೋಗಲಾಡಿಯ ಮುಖವಾಡ ಹಾಕಿಕೊಂಡಿರುತ್ತದೆ.

ಕ್ರಿಯಾಶೀಲ ಮಾಧ್ಯಮವೊಂದು ಈ ನಿಯಮ ತಂತ್ರವನ್ನ "ಕಲೆ" ಯನ್ನ ಬಳಸಿ ವಂಚಿಸುತ್ತಿರುವ ಬಂಡವಾಳಶಾಹಿಗಳ ಮಧ್ಯೆ ಸ್ವನಿಯಂತ್ರಣದ ಸಾಧ್ಯತೆ ಕಷ್ಟ; ಆದರೆ ಯಾವುದೂ ಅಸಾಧ್ಯ ಆಗಬೇಕಾಗಿಲ್ಲ.

ರಾಜಕೀಯ ಪ್ರಜ್ಞೆಯನ್ನು ಮೂಡಿಸುತ್ತ, ಆಗಬೇಕಾದ ಕೆಲಸಗಳ ಬಗ್ಗೆ ಎಚ್ಚರ ಆಗುವುದನ್ನು ತಪ್ಪಿಸಿ ಕ್ಯಾರಿಕೇಚರ್ಡ್ ರಾಜಕಾರಣಿಗಳನ್ನು ಸೃಷ್ಟಿಸಿ ನಗೆಪಾಟಲು ಮಾಡುವ ಸಿನಿಮಾ ಪ್ರವೃತ್ತಿಯು ಸಂಘಟನೆಯಿಂದ ಹೊರತಾಗಿ ತನಗೆ ತಾನೇ ನಿಲ್ಲುವ ವ್ಯಕ್ತಿಯಿಂದ ಪ್ರಭುತ್ವ ಕ್ಷೇಮವಾಗಿರಬಲ್ಲದು. ಸರಕಾರದ ನಿಯಮಗಳು ಅದರ ರಕ್ಷಣೆಗಾಗಿಯೆ ಕೆಲಸಮಾಡಿ, ಜನರ ಸ್ವಾತಂತ್ರ್ಯವನ್ನು ಮುಷ್ಠಿನಲ್ಲಿರಿಸಿ ಬಿಡುತ್ತವೆ. ಅಘೋಷಿತವಾಗಿ ಪ್ರಭುತ್ವ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳು ಹಿಂದೆ ಇರುವ ಒಪ್ಪಂದವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಗುರುತಿಸಬಹುದಲ್ಲವೆ?

ಮುಟ್ಟ ಹಾಕುವ ಬದಲು ಇನ್ನೂ ಫ್ಯೂಡಲ್ ವ್ಯವಸ್ಥೆಯ ಕಟ್ಟುಗಳಿಂದ ಕಳಚಿಕೊಳ್ಳದ ನಾವು ನಮ್ಮ ನಮಗೊಬ್ಬ ಯಜಮಾನನನ್ನು "ಕಲೆ"ಯ ವಿಚಾರದಲ್ಲಿ ಒಪ್ಪಿಕೊಂಡು ಔದಾರ್ಯ ಬೇಡುತ್ತೇವೆ. ಇಲ್ಲಿ ನಮ್ಮ ಜಗಳಗಳೆಲ್ಲ ಹುಸಿನೆಲೆಗಟ್ಟಿನ ಮೇಲೆ ನಿಂತಿರುತ್ತವೆ.

ಇಲ್ಲಿ ನೇಮಿಸಲ್ಪಟ್ಟ ಅಧಿಕಾರಿಗಳು ನಿಯಮಗಳ ಚೌಕಟ್ಟಿನಲ್ಲಿ ಕೆಲಸಮಾಡುತ್ತಾರಾಗಲೀ, ಅದರಾಚೆಗೆ ಅವರು ಆಲೋಚನೆ ಹಾಯ್ದರೂ ಅನುಷ್ಠಾನಕ್ಕೆ ತರುವ ಸ್ವಾತಂತ್ರ್ಯ ಅವರಿಗಿಲ್ಲ. ಅಧಿಕಾರವೇ ಇಲ್ಲದ "ಅಧಿಕಾರಿ" ಗಳಾದ್ದರಿಂದ ಪ್ರಶ್ನೆ ಅವರತ್ತ ಇಲ್ಲ, ಮೂಲಭೂತವಾದ್ದರ ಕಡೆಗೇ ಇರಬೇಕು.

ಬ್ರಿಟಿಷರ ಆಳ್ವಿಕೆಯಿಂದಾಗಿ ಭಾರತದ ಸೆನ್ಸಾರ್ ನಿಯಮ ಬ್ರಿಟಿಷ್ ನಿಯಮಾವಳಿಯ ಹಾಗೇ (ಬಹುತೇಕ) ಇದೆ. ಆದರೆ ನಮಗೆ ಚಿತ್ರನಿರ್ಮಾಣದ ಮಾದರಿಗಳು ಹಾಲಿವುಡ್‌ನಿಂದ ಪ್ರೇರಿತ. ವಿರೋಧಾಭಾಸಗಳ ಸ್ವರೂಪ ಹೀಗಿದೆ. ಬ್ರಿಟನ್ನಿನ ರಂಗಭೂಮಿಯ ಕಾರಣವಾಗಿ ಹುಟ್ಟಿಕೊಂಡ ಸೆನ್ಸಾರ್ ನಿಯಮ ಸಿನಿಮಾಗೂ ಬಂದಿದ್ದರ ಇತಿಹಾಸ ಇಲ್ಲಿ ಬೇಡ. ಈವರೆಗೆ ಈ ನಿಯಮಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಈ ಎಲ್ಲಾ ಬದಲಾವಣೆಗಳೂ ಬಹ್ವಂಶ ಸೆಕ್ಸ್, ಸ್ತ್ರೀ ಹಿಂಸೆ ಕುರಿತಂತೆಯೇ ಆದವುಗಳು. ನಗ್ನತೆ, ಮಾದಕ ದ್ರವ್ಯಗಳ ಸೇವನೆ ಕುರಿತಂತೆಯೂ ಆಗಿದೆ. ಆದರೆ ಯಾವುದೇ ನಿಯಮ ಅದರ ಗರ್ಭದಲ್ಲೇ ಉಲ್ಲಂಘಿಸಬಲ್ಲ ಸಡಿಲುತನವನ್ನೂ ಹೊಂದಿರುತ್ತದೆ. ನಮ್ಮ "ಜಾಣರು" ಅವನ್ನೆಲ್ಲ ಬಳಸಿಕೊಳ್ಳುತ್ತಾರೆ. ನಮ್ಮೆದುರು ವಿವಾದಾಸ್ಪದವಾಗಿ ನಿಂತ ಅನೇಕ ಚಿತ್ರಗಳು ತೆರೆಕಾಣಲು ಇಂಥ ಸಡಿಲುತನ, ಜಾಣತನಗಳು ಕಾರಣ. "ಕಲೆ" - ವಾಸ್ತವಗಳ ಬಗ್ಗೆ ಸುಂದರವಾದ ಮಾತುಗಳ ಮಾಲೆ ಕಟ್ಟಿ ಅಶ್ಲೀಲ - ನಗ್ನತೆ ಎಲ್ಲವನ್ನೂ ತಂದ ಅನೇಕ ಉದಾಹರಣೆಗಳು ನಮ್ಮೆದುರು ಇವೆ. ಭಾರತದಲ್ಲಿ ಪ್ರಾಂತೀಯ ಸಂಸ್ಕೃತಿಯ ವೈವಿಧ್ಯಗಳ ಹಿಂದೆ ಇಂಥ ಜಾಣತನಕ್ಕೆ ಹೆಚ್ಚಿನ ಅವಕಾಶ ಇದೆ. ಕನ್ನಡದಲ್ಲಿ ಮಲೆಯಾಳದ ಒಂದು ಕಾಲದ ಹೆಂಗಸನ್ನು ತಂದರೆ ಧಾರಾಳವಾಗಿ ತೆರೆದೆದೆಯನ್ನು ಪ್ರದರ್ಶಿಸಿ, ಅದನ್ನು ಕಿತ್ತು ಹಾಕದ ಹಾಗೆ ಸೆನ್ಸಾರ್‌ನವರ ಬಳಿ ವಾದಿಸಬಲ್ಲರು. ತೆರೆಕಂಡ ಚಿತ್ರಗಳಲ್ಲಿ ಇನ್ನೂ ಇರುವ ಅಶ್ಲೀಲಗಳನ್ನು ಕಂಡು ಹುಬ್ಬೇರಿಸುತ್ತೇವೆ. ಆದರೆ ಅದಕ್ಕಿಂತ ಹೊಲಸಾದ ಅನೇಕ ಅಂಶಗಳನ್ನು ಕತ್ತರಿಸಿ ಇದ್ದುದರಲ್ಲಿ ಪರವಾಗಿಲ್ಲದ್ದನ್ನು ಬಿಟ್ಟಿರುತ್ತಾರೆ. ಕನ್ನಡ ಚಿತ್ರ "ಅಂಜದ ಗಂಡು" ನಲ್ಲಿ ಜಿಪ್ ಎಳೆವ ಪ್ರಸಂಗದ ಬಗ್ಗೆ ಹೀಗೇ ಆಯಿತು. ತೀರಾ ನೇರವಾಗಿ ಬರದೆ ಕೊಂಚ ಒರೆಯಾದ್ದನ್ನು ಉಳಿಸಿದಾಗ ಅಂಥ ಹಲವು ಅಂಶಗಳನ್ನು ಕತ್ತರಿಸಿದ್ದಾಗಿತ್ತು. ನಿರ್ದೇಶಕ ಹೇಳುವ ಕಥೆಯ ಚೌಕಟ್ಟಿಗೆ ಇದು ಅಗತ್ಯ ಎಂಬ ವಾದ, ತೊಂದರೆಗಳಿಗೆ ಮುಸುಕರಗುವುದೊಂದೆಡೆಯಾದರೆ, ಕಲಾತ್ಮಕ ಚಿತ್ರಗಳು ಬುದ್ಧಿವಂತರ ವಾಸ್ತವತೆ - ಕಲೆಯ ವಾದಕ್ಕೆ ಪ್ರತ್ಯುತ್ತರ ಕೊಡಲಾಗದೆ ಅಸಹಾಯಕರಾಗಿ ಬಿಡುವುದುಂಟು. ಇವರಲ್ಲೂ ಪ್ರತಿಭಟನೆ ಇಲ್ಲ ನೋಡಿ! ರಿವೈಸಿಂಗ್ ಕಮಿಟಿ, ಟ್ರಿಬ್ಯೂನಲ್ ಎಲ್ಲಿಗೇ ಹೋಗಿ, ಹೇಗೇ ಬರಲಿ ಅಂತೂ ಹೊಣೆ ಎಲ್ಲರದೂ ಆಗಿರುತ್ತದೆ.

ಇಂಥ ಅಶ್ಲೀಲ — "ಕಲಾತ್ಮಕ" ಚಿತ್ರಗಳನ್ನು ಪ್ರದರ್ಶಿಸಲು ಪ್ರತ್ಯೇಕ ಚಿತ್ರಮಂದಿರಗಳಿವೆ ಬ್ರಿಟನ್ನಿನಲ್ಲಿ. ವಯಸ್ಕರು ಮಾತ್ರ ನೋಡುತ್ತಾರೆ. ಅವು ಕಾನೂನು ಉಲ್ಲಂಘಿಸಿ ಬೇರೆ ಕಡೆ ಪ್ರದರ್ಶಿತವಾದರೆ ಕಟುವಾದ ಟೀಕೆಗೆ ಒಳಗಾಗುತ್ತವೆ. ಅಲ್ಲೂ ಲೈಂಗಿಕ ಶಿಕ್ಷಣ, ಆರೋಗ್ಯ, ಸೌಂದರ್ಯ ಇತ್ಯಾದಿ ಜಾಣ ಮಾತುಗಳು ಕೆಲಸಮಾಡುತ್ತವೆ! ಉದಾಹರಣೆಗೆ:

ಮರಣದಂಡನೆಗೆ ಗುರಿಯಾದ ಖೈದಿಯೊಬ್ಬನನ್ನು ಅವನ ಪ್ರೇಯಸಿ ಭೇಟಿಯಾಗಲು ಬಯಸಿ,

---

ಕ್ರಿಯಾಶೀಲ ಮಾಧ್ಯಮವೊಂದು ಈ ನಿಯಮಗಳ ಒತ್ತಡವನ್ನ ದೂರ ಸರಿಸಿ ಕೆಲಸ ಮಾಡಬೇಕಾದ್ದು ಮೂಲಭೂತ ವಿಚಾರ. ಅವನಿಗೆ ಅವನೊಳಗೆ ಔಚಿತ್ಯ ಪರಿಜ್ಞಾನ ಇರಬೇಕು. ಹೊರಗಿನಿಂದ ಹೇಳಿದುದಲ್ಲ. ಈ ನಿಯಮಗಳ ಅಸಾಂಗತ್ಯವನ್ನು ಪ್ರಶ್ನಿಸಿ ನಿರ್ದೇಶಕ ಕೆ. ಎಂ. ಶಂಕರಪ್ಪನವರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ. ಆದರೆ ಇದು ಸಂವಿಧಾನಿಕ ಬದಲಾವಣೆಯ ಪ್ರಶ್ನೆಯಾದ್ದರಿಂದ ಧೈರ್ಯಮಾಡದ ಪ್ರಭುತ್ವ ನ್ಯಾಯಾಂಗಗಳು ನೆನೆಗುದಿಗೆ ತಳ್ಳಿವೆ. ಕಪ್ಪುಹಣದ ವಹಿವಾಟಿನ ಹಿನ್ನಲೆಯಲ್ಲಿ, ವಿಧ್ವಸ್ತಗೊಂಡ ಸಾಮಾಜಿಕ ಸಂದರ್ಭಗಳ ನಡುವೆ ಸೆಲ್ಫ್ ಸೆನ್ಸಾರ್‌ನಂಥ ವಿವೇಚನಗೆ ಸ್ಥಾನ ಸಿಗುವುದು ಕಷ್ಟ. ಅದರಾಚೆಗೆ ಜಿಗಿದು ಮೃಗೀಯ ವೃತ್ತಿಯ ದಾರಿ ತೋರುವ ಮೂಲಕ ದುರ್ಬಲರ ಮೇಲಿನ ಬಲ ಪ್ರಯೋಗದಿಂದ ತನ್ನ ಅತೃಪ್ತಿಗೆ ಸಮಾಧಾನ ದೊರಕಿಸಬಹುದೆಂಬ ತಂತ್ರವನ್ನು 'ಕಲೆ'ಯನ್ನು ಬಳಸಿ ವಂಚಿಸುತ್ತಿರುವ ಬಂಡವಾಳಶಾಹಿಗಳ ಮಧ್ಯೆ ಸ್ವನಿಯಂತ್ರಣದ ಸಾಧ್ಯತೆ ಕಷ್ಟ, ಆದರೆ ಯಾವುದೂ ಅಸಾಧ್ಯ ಆಗಬೇಕಾಗಿಲ್ಲ.

ಬಹುಶ್ರಮದಿಂದ ಸಾಧಿಸುತ್ತಾಳೆ. ಆ ಭೇಟಿ ಕೂಡ ಒಂದು ಗಾಜಿನ ತೆರೆಯ ಆಚೆಯಿಂದ, ಬಹುಕಾಲದ ಏಕಾಂತ ಹಸಿವು - ತುಡಿತದಿಂದಾಗಿ ಆತ ಉದ್ರೇಕನಾಗಿದ್ದ, ಆಕೆಯನ್ನು ಆ ಗಾಜಿನ ಮುಖಾಂತರವೇ ಬೆತ್ತಲಾಗಿ ನೋಡಲು ಬಯಸಿದ, ಆ ಗಾಜಿನ ಮೇಲೆ ಕೈಯಾಡಿಸುತ್ತಲೇ ಆಕೆಯ ಸೂಕ್ಷ್ಮವಾಧ ಅಂಗಗಳನ್ನು ಸ್ಪರ್ಶಿಸಿದ. ಉದ್ರೇಕಗೊಂಡು ಮುಷ್ಟಿ ಮೈಥುನ ನಡೆಸಿದ.

ಯಾವುದೇ ಕಾರಣಕ್ಕೂ ಈ ದೃಶ್ಯ ಸೆನ್ಸಾರ್ ಆಗುವಂತಿಲ್ಲ. ಅದು ಆ ಸಂದರ್ಭಕ್ಕೆ ಅಗತ್ಯವಾಗಿತ್ತು. ಆದರೆ ಭಾರತಕ್ಕೆ ಬಂದಾಗ ಆ ದೃಶ್ಯಗಳು ಕತ್ತರಿಸಲ್ಪಟ್ಟು ಅರ್ಥ ಕಳೆದುಕೊಂಡಿತ್ತು ಚಿತ್ರ! ಮೃಗವಾಗುತ್ತಿದ್ದ ಆತ ಪ್ರೀತಿಯ ಅನುಭೂತಿಯಿಂದ ಸಮಸ್ಥಿತಿಗೆ ಬರುವ ದೊಡ್ಡ ಮಾತಿನ ಅರ್ಥವೇ ಈ ಸೆನ್ಸಾರ್ ಕತ್ತರಿಯಿಂದಾಗಿ ಹಾರಿಹೋಗಿತ್ತು.

ವರ್ಜಿನ್‌ಸ್ಪ್ರಿಂಗ್, ರೋಂಬಾ ಮೊದಲಾದ ಶ್ರೇಷ್ಠ ಚಿತ್ರಗಳಿಗೆ ನಮ್ಮ ದೇಶದ ಸೆನ್ಸಾರ್ ನಿಯಮದಿಂದಾಗಿ ಮಂಕು ಬಡಿಯಿತು. "ರೂಮ್ ಅಟ್ ದಿ ಟಾಪ್" ಚಿತ್ರದ ಸಂಭಾಷಣೆಯಲ್ಲಿಯ ಲೈಂಗಿಕ ಪ್ರಚಾರಕ್ಕೆ ಕತ್ತರಿ ಬಿದ್ದದ್ದೂ ಹೀಗೇ. ಕೆಲವು ಕನ್ನಡ

ಈ ಎಲ್ಲ ಬದಲಾವಣೆಗಳೂ ಬಹ್ವಂಶ ಸೆಕ್ಸ್, ಸ್ತ್ರೀ, ಹಿಂಸೆ ಕುರಿತಂತೆಯೇ ಆದವುಗಳು: ನಗ್ನತೆ, ಮಾದಕ ದ್ರವ್ಯಗಳ ಸೇವನೆ ಕುರಿತಂತೆಯೂ ಆಗಿದೆ. ಆದರೆ ಯಾವುದೇ ನಿಯಮ ಅದರ ಗರ್ಭದಲ್ಲೇ ಉಲ್ಲಂಘಿಸಬಲ್ಲ ಸಡಿಲುತನವನ್ನೂ ಹೊಂದಿರುತ್ತದೆ. ನಮ್ಮ 'ಜಾಣ"ರು ಅವನ್ನೆಲ್ಲ ಬಳಸಿಕೊಳ್ಳುತ್ತಾರೆ. ನಮ್ಮೆದುರು ವಿವಾದಾಸ್ಪದವಾಗಿ ನಿಂತ ಅನೇಕ ಚಿತ್ರಗಳು ತೆರೆ ಕಾಣಲು ಇಂಥ ಸಡಿಲುತನ, ಜಾಣತನಗಳು ಕಾರಣ. 'ಕಲೆ' — ವಾಸ್ತವಗಳ ಬಗ್ಗೆ ಸುಂದರವಾದ ಮಾತುಗಳ ಮಾಲೆ ಕಟ್ಟಿ ಅಶ್ಲೀಲ — ನಗ್ನತೆ ಎಲ್ಲವನ್ನೂ ತಂದ ಅನೇಕ ಉದಾಹರಣೆಗಳು ನಮ್ಮೆದುರು ಇವೆ. ಭಾರತದಲ್ಲಿ ಪ್ರಾಂತೀಯ ಸಂಸ್ಕೃತಿಯ ವೈವಿಧ್ಯಗಳ ಹಿಂದೆ ಇಂಥ ಜಾಣತನಕ್ಕೆ ಹೆಚ್ಚಿನ ಅವಕಾಶ ಇದೆ. ಕನ್ನಡಚಿತ್ರದಲ್ಲಿ ಮಲೆಯಾಳದ ಒಂದು ಕಾಲದ ಹೆಂಗಸನ್ನು ತಂದರೆ ಧಾರಾಳವಾಗಿ ತೆರೆದೆದೆಯನ್ನು ಪ್ರದರ್ಶಿಸಿ, ಅದನ್ನು ಕಿತ್ತು ಹಾಕದ ಹಾಗೆ, ಸೆನ್ಸಾರ್‌ನವರ ಬಳಿ ವಾದಿಸಬಲ್ಲರು,

ಚಿತ್ರಗಳು ಈ ಹೊಡೆತ ತಪ್ಪಿಸಿಕೊಂಡು, ಉಳಿದುಬಂದ ಉದಾಹರಣೆ ಮತ್ತೆ ಕೊಡಬೇಕಾಗಿಲ್ಲ.

ಫ್ರಾನ್ಸಿನ "ಲೆಸ್ ಅಮಂಟ್ಸ್" ಎಂಬ ಸಂಗೀತ ಪ್ರಧಾನ ಚಿತ್ರದಲ್ಲಿ ಸೆಕ್ಸ್ — ನಗ್ನತೆ ಇತ್ತು. ದೃಶ್ಯಕ್ಕೆ ಕತ್ತರಿ ಹಾಕಿದರೆ ಬಳಸಲಾದ ಸಂಗೀತಕ್ಕೆ ಧಕ್ಕೆ......... - ಸಂದಿಗ್ಧ ಸ್ಥಿತಿ - ಅನಂತರ ಹಾಗೇ ಕೈಬಿಡಲಾಯಿತು. ಈ ಚಿತ್ರದ ಪ್ರಚಾರದ ಸಲುವಾಗಿ ಅಲ್ಲಿಯ ಖ್ಯಾತ ಶಿಲ್ಪವಾಗಿದ್ದ ನ್ಯೂಡ್ ಸಲ್ಪ್ಚರ್‌ಗಳನ್ನು ಬಳಸಿಬಿಟ್ಟರು. ಲಂಡನ್ನಿನಲ್ಲಿ ಚಿತ್ರ ಪ್ರದರ್ಶಿತವಾದಾಗ ಅಲ್ಲಿಯ ಟ್ರಾನ್ಸ್‌ಪೋರ್ಟ್ ಕಂಪನಿ ಆ ಪೋಸ್ಟರ್ಸ್‌ಗಳನ್ನು ಬ್ಯಾನ್ ಮಾಡಿಸಿತು. ಸೆನ್ಸಾರ್ ಅಂದರೆ ನಗ್ನತೆ ಇತ್ಯಾದಿಗಳನ್ನು ಕತ್ತರಿಸುವುದಕ್ಕೆ ಅಲ್ಲ — ಸನ್ನಿವೇಶದ ಪ್ರಸ್ತುತತೆ ಗಮನಿಸಬೇಕಾಗುತ್ತದೆ. ಸೌಂದರ್ಯವನ್ನು ವ್ಯಾಖ್ಯಾನಿಸಿಕೊಳ್ಳಬಲ್ಲ ಜನಮಂಡಳಿಯಲ್ಲಿ ಇರಬೇಕಾಗುತ್ತದೆ. ಕೇವಲ ಸಮಾಜವನ್ನು ಉದ್ಧಾರ ಮಾಡುತ್ತೇವೆಂಬ ಹುಸಿ ಘೋರಣೆಯಲ್ಲ.

ಇಂಥ ಅಶ್ಲೀಲ — 'ಕಲಾತ್ಮಕ' ಚಿತ್ರಗಳನ್ನು ಪ್ರದರ್ಶಿಸಲು ಪ್ರತ್ಯೇಕ ಚಿತ್ರಮಂದಿರಗಳಿವೆ ಬ್ರಿಟನ್ನಿನಲ್ಲಿ. ವಯಸ್ಕರು ಮಾತ್ರ ನೋಡುತ್ತಾರೆ. ಅವು ಕಾನೂನು ಉಲ್ಲಂಘಿಸಿ ಬೇರೆ ಕಡೆ ಪ್ರದರ್ಶಿತವಾದರೆ ಕಟುವಾದ ಟೀಕೆಗೆ ಒಳಗಾಗುತ್ತವೆ. ಅಲ್ಲೂ ಲೈಂಗಿಕ ಶಿಕ್ಷಣ, ಆರೋಗ್ಯ, ಸೌಂದರ್ಯ ಇತ್ಯಾದಿ ಜಾಣ ಮಾತುಗಳು ಕೆಲಸ ಮಾಡುತ್ತವೆ.

ತಾವು ಚಿತ್ರಕ್ಕೆ ಎಷ್ಟು ಕಟ್ಸ್ ಕೊಟ್ಟೆವು ಎಂಬ ವೈಭವ ಹೇಳುವವರೊಂದು ಕಡೆ. ಹೇಗೆ ಹೇಗೋ ಟ್ರಿಬ್ಯೂನಲ್ ಇತ್ಯಾದಿ ಓಡಾಡಿ ಉಳಿಸಿದ್ದನ್ನು ವೈಭವಿಸುವವರು ಇನ್ನೊಂದು ಕಡೆ. ಇವರಲ್ಲಿ ಯಾರಿಗಾದರೂ ಕಲೆ — ಮಾಧ್ಯಮ — ಅಭಿವ್ಯಕ್ತಿ ಕುರಿತ ವಿಚಾರ ಇವೆಯೆ? ನಮ್ಮಲ್ಲಿ ಎಷ್ಟು ಚಿತ್ರ "ಭ್ಯಾನ್" ಆಗಿದೆ ಹೇಳಿ? (ಕೆಲವು ಅಪವಾದಗಳನ್ನುಳಿದು) ಬಹುಪಾಲು ಬಂಡವಾಳ ಶಾಹಿಯ ಹಿತಾಸಕ್ತಿಯನ್ನು ಕಾಪಾಡುವುದೇ ಗುರಿಯಾಗಿದೆಯಲ್ಲವೆ?

"ಅನಂತನ ಅವಾಂತರ"ದ ಅಶ್ಲೀಲ, "ಬಂಧಮುಕ್ತ" "ಅಮಾನುಷ" ಗಳಲ್ಲಿ ಇತ್ತು ಎನ್ನಲಾದ ಹಿಂಸೆಗಿಂತ, ಮನಶ್ಶಾಸ್ತ್ರದ ಹೆಸರಿನಲ್ಲಿ ಕೆಲವು ಪ್ರಚೋದಕ ದೃಶ್ಯಗಳನ್ನು ಅತಿದೀರ್ಘಕಾಲ ಹಾಗೂ ಛಾಯಾಗ್ರಾಹಕನ ಜಾಣತನ ಬಳಸಿ ತೀವ್ರ ಪರಿಣಾಮ ಬೀರುವಂತೆ ಚಿತ್ರಿಸಿದ "ಕಾಡಿನ ಬೆಂಕಿ", ರೂಕ್ಷ ಹಾಗೂ ಪರಪೀಡನ ಪ್ರವೃತ್ತಿಯನ್ನು ಎತ್ತಿ ಹಿಡಿಯುವ "ತರ್ಕ" ಚಿತ್ರದ ಕೆಲ ದೃಶ್ಯಗಳು ಹಾಗಲ್ಲದೆ ಬೇರೆ

ಯಾಗಿರಲು ಸಾಧ್ಯವಿತ್ತು ಎಂಬುದು ಮುಖ್ಯ. "ಸಂಸ್ಕಾರ" ದ ಚಂದ್ರಿ — ಪ್ರಾಣೇಶಾಚಾರ್ಯರು ಕೊಡುವ ದೃಶ್ಯಗಳು ಇತ್ಯಾದಿ ಕೆಲವು ಚಿತ್ರಗಳಲ್ಲಿಯ ರೇಪ್ ಸೀನ್‌ಗಳು ಅವು ಹಾಗಲ್ಲದೆ ಬೇರೆಯಾಗಿದ್ದರೂ ಸಂವಹನ ಸಾಧ್ಯವಿತ್ತು ಎಂಬುದು ಕಂಡಾಗ ಇಂಥ ಚಿತ್ರ ನಿರ್ಮಾಣದ ಮನಸ್ಸಿನೊಳಗಿನ ಅಪೇಕ್ಷೆಗಳ ಬಗ್ಗೆ ಅನುಮಾನಗಳೇಳುತ್ತವೆ.

ಈ "ಅತಿ" ಯಿಂದಾಗಿ ಹೆಂಗಸು ತನ್ನ ಶಕ್ತಿ — ತನ್ನಿಂದ ಸಿಗಬಹುದಾದ ಸಮಾಧಾನದ ಬಗ್ಗೆ ಹಿಗ್ಗಬಹುದೆ? ಅಥವಾ ಈ "ಅತಿ" ಗಳ ಪರಿಣಾಮದಿಂದಾಗಿ ಪುರುಷ ನಿರ್ವೀರ್ಯನಾಗಿ ಯಾವುದಕ್ಕೂ ಸ್ಪಂದಿಸಲಾಗದ ಕ್ಷಣ ಸನಿಹ ಬರುತ್ತಿದೆ ಎನ್ನಬಹುದೆ? ಬದುಕಿನ ಅತ್ಯಂತ ಮಹತ್ತರ ತೀರಾ ವೈಯಕ್ತಿಕ ಆಗಬಹುದಾದ ಕ್ಷಣಗಳನ್ನು ಸಾರ್ವತ್ರಿಕಗೊಳಿಸಿ ಹೀಗೆ ಸಂತೆಯಲ್ಲಿ ಬೆತ್ತಲು ಮಾಡುವ ಮೂಲಕ ಏನನ್ನು ಕಳೆದುಕೊಳ್ಳುತ್ತಿದ್ದೇವೆ ನಾವು ಎಂಬ ಬಗ್ಗೆ ಎಚ್ಚರವಾಗಿರಬೇಕಲ್ಲವೆ? ಒಬ್ಬ ಬೆಲೆವೆಣ್ಣು ಕೂಡಾ ತನ್ನ ವೃತ್ತಿಯ ಆಚೆಗೆ ತನ್ನದೇ ಆದ ವೈಯಕ್ತಿಕ ಕ್ಷಣದಲ್ಲಿ ಮಾತ್ರ ಅನುಭವಿಸಬಲ್ಲ ಈ ಸತ್ಯವನ್ನು ಅರಿಯದೆ ವೈಯಕ್ತಿಕತೆಯನ್ನೂ ಬಂಡವಾಳಶಾಹಿಗಳ ಹಿತಕ್ಕಾಗಿ ಬಿಕರಿಗಿಟ್ಟ ಸ್ಥಿತಿಗೆ ವಿಷಾದವೆನಿಸುತ್ತಿದೆ.

"ಅರ್ಥ್" ದಂಥ ಚಿತ್ರಮಾಡಿ ವಿವಾಹೇತರ ಸಂಬಂಧದ ಅನಿವಾರ್ಯ, ಪುರುಷನ ಬಗ್ಗೆ ಅನುಕಂಪ ಬರುವ ಹಾಗೆ ಚಿತ್ರದ ಕೊನೆಯ ದೃಶ್ಯದಲ್ಲಿಯ ನಾಯಕಿಯ ಒಂದು ಮಾತಿಗೆ ಇಡೀ ಚಿತ್ರವನ್ನು "ಫೆಮಿನಿಸ್ಟ್" ಎಂದು ಘೋಷಿಸಿಕೊಂಡವರ ವಂಚನೆಯ ಬಗ್ಗೆ ನಾವು ಆತಂಕಗೊಳ್ಳಬೇಕಿದೆ.

ಸ್ಮಿತಾ ಪಾಟೀಲ್ ಅಭಿನಯಿಸಿದ್ದ ಹಿಂದಿ — ಮರಾಠೀ ಭಾಷೆಗಳಲ್ಲಿಯ ಚಿತ್ರವೊಂದು ಸಮಾಜದ ಸಲುವಾಗಿ ದುಡಿಯುವುದು ಎಂದರೆ ವೈಯಕ್ತಿಕ ಬದುಕಿಗೆ ಎರವಾಗುವುದು ಎಂಬಂಥ ಪಾಠ ಮಾಡುತ್ತಾ ಏಕಾಕಿತನದ ಭಯಂಕರತೆ ಸೃಷ್ಟಿಸಿ ಇದೊಂದು "ಪ್ರಗತಿಪರ" ಚಿತ್ರ ಎಂಬುದರ ಹಿಂದಿನ ಅಪಾಯ ಗುರುತಿಸಿಕೊಳ್ಳಬೇಕಿದೆ.

"ನಾವು ವಿವಾಹದಂಥ ಸಂಸ್ಥೆಯನ್ನು ಉಳಿಸಬೇಕಾಗಿದೆ" ಎಂಬ ಹೇಳಿಕೆಯನ್ನು ಉತ್ತರವಾಡಿಕೊಂಡ ಕೆ. ಬಾಲಚಂದರ್ ಅವರ ಚಿತ್ರಗಳೆಲ್ಲವು (ಸಿಂಧುಭೈರವಿ, ಬೆಂಕಿಯಲ್ಲಿ ಅರಳಿದ ಹೂವು ಇತ್ಯಾದಿ) ಸ್ತ್ರೀ ಸಮುದಾಯವನ್ನು ಅಪಾಯದ ಹಾದಿಗೆ ತಳ್ಳುತ್ತವೆ. ಅದೇ ರೀತಿಯ ಅಪಾಯ ಸದಾ ಸಂಸ್ಕೃತಿ ಮೌಲ್ಯ, ಸ್ತ್ರೀಯರಿಗೆ ಗೌರವ ಎಂದು ಬೊಬ್ಬೆ ಹಾಕುತ್ತಿದ್ದ ಪುಟ್ಟಣ್ಣ ಕಣಗಾಲರಿಂದಲೂ ಆಗಿದೆ. ಈ ನಿರ್ದೇಶಕರಿಗೆ ಮಾಧ್ಯಮದ ಮೇಲೆ ಇರುವ ಹಿಡಿತದಿಂದಾಗಿ ತುಂಬ ಪರಿಣಾಮ ಬೀರುತ್ತವೆ. ಇವರ ಪಾತ್ರಗಳು ಇತರರಿಗೆ ಆದರ್ಶವಾದ ಉದಾಹರಣೆಗಳಿವೆ. ಇಂಥ ಅಪಾಯಕ್ಕಿಂತ ವಾಣಿಜ್ಯ ಪ್ರಧಾನ ಚಿತ್ರಗಳಲ್ಲಿ ಉದ್ದಕ್ಕೂ ಇದು ಸಿನಿಮಾ—ಅವಾಸ್ತವ ಎಂಬ ವಿಚಾರ ಇರುವ ಹಾಗೇ ಚಿತ್ರಿತವಾದ ಗಾಢ ಪರಿಣಾಮ ಬೀರದ ಅಶ್ಲೀಲ, ಸಮಾಜ ವಿರೋಧೀ ನಿಲುವುಗಳು ಕಡಿಮೆ ಅಪಾಯಕಾರಿ ಎನ್ನಬಹುದಾಗಿದೆ.

ಸ್ವ ನಿಯಂತ್ರಣ ಇಲ್ಲದೆ, ನಮಗೇ ನಾವು ಕಟ್ಟುಪಾಡು ಹಾಕಿಕೊಳ್ಳದೇ ಕಲೆಯ ಬಗ್ಗೆ ಗಂಧಗಾಳಿ ಇಲ್ಲದ ಪ್ರಭುತ್ವ ನಿಯಂತ್ರಣ ಹೇರುವ ಹಾಗೆ ಮಾಡಿಕೊಂಡಿದ್ದಕ್ಕೆ ನಾವೇ ತಲೆತಗ್ಗಿಸಬೇಕಾಗಿದೆ, ಪತ್ರಿಕೆ, ಸಾಹಿತ್ಯ, ಇತ್ಯಾದಿ ಕಲೆಗಳಿಗೆ ಇಲ್ಲದ ನಿಯಂತ್ರಣ ಇಲ್ಲೇಕೆ ಎಂಬ ಪ್ರಶ್ನೆ ಒಂದು ಕಾಲಕ್ಕೆ ವಿಹಿತವಾಗಿತ್ತು. ಈಗ ಇಲ್ಲೂ ಅದರ ಪ್ರವೇಶ ಆಗಿದೆ,

---

'ಅನಂತನ ಅವಾಂತರ'ದ ಅಶ್ಲೀಲ, 'ಬಂಧಮುಕ್ತ, 'ಅಮಾನುಷ, ಗಳಲ್ಲಿ ಇತ್ತು ಎನ್ನಲಾದ ಹಿಂಸೆಗಿಂತ ಮನಶ್ಶಾಸ್ತ್ರೀದ ಹೆಸರಿನಲ್ಲೂ ಕೆಲವು ಪ್ರಚೋದಕ ದೃಶ್ಯಗಳನ್ನು ಅತಿ ದೀರ್ಘ ಕಾಲ ಹಾಗೂ ಛಾಯಾಗ್ರಹಕನ ಜಾಣತನ ಬಳಸಿ ತೀವ್ರ ಪರಿಣಾಮ ಬೀರುವಂತೆ ಚಿತ್ರಿಸಿದ 'ಕಾಡಿನಬೆಂಕಿ' ರೂಕ್ಷ ಹಾಗೂ ಪರಪೀಡನ ಪ್ರವೃತ್ತಿಯನು ಎತ್ತಿ ಹಿಡಿಯವ 'ತರ್ಕ' ಚಿತ್ರದ ಕೆಲ ದೃಶ್ಯಗಳು ಹಾಗಲ್ಲದೆ ಬೇರೆಯಾಗಿರಲು ಸಾಧ್ಯವಿತ್ತು ಎಂಬುದು ಮುಖ್ಯ. 'ಸಂಸ್ಕಾರ' ದ ಚಂದ್ರಿ – ಪ್ರಾಣೇಶಚಾರ್ಯರು ಕೊಡುವ ದೃಶ್ಯಗಳು ಇತ್ಯಾದಿ. ಕೆಲವು ಚಿತ್ರಗಳಲ್ಲಿಯ ರೇಪ್ ಸೀನ್‌ಗಳು ಅವು ಹಾಗಲ್ಲದೆ ಬೇರೆಯಾಗಿದ್ದರೂ ಸಂವಹನ ಸಾಧ್ಯವಿತ್ತು ಎಂಬುದು ಕಂಡಾಗ ಇಂಥ ಚಿತ್ರ ನಿರ್ಮಾಣದ ಮನಸ್ಸಿನೊಳಗಿನ ಅಪೇಕ್ಷಗಳ ಬಗ್ಗೆ ಅನುಮಾನಗಳೇಳುತ್ತವೆ.

ಸ್ಮಿತಾ ಪಾಟೀಲ್ ಅಭಿನಯಿಸಿದ್ದ ಹಿಂದಿ -- ಮಾರಾಠಿಗಳಲ್ಲಿಯ ಚಿತ್ರವೊಂದು ಸಮಾಜದ ಸಲುವಾಗಿ ದುಡಿಯುವುದು ಎಂದರೆ ವೈಯುಕ್ತಿಕ ಬದುಕಿಗೆ ಎರವಾಗುವುದು ಎಂಬಂಥ ಪಾಠ ಮಾಡಿತ್ತು. ಏಕಾಕಿತನ ಭಯಂಕರತೆ ಪ್ರಶ್ನಿಸಿ ಇನ್ನೊಂದು 'ಪ್ರಗತಿಪರ' ಚಿತ್ರ ಎಂದುದರ ಹಿಂದಿನ ಅಪಾಯ ಗುರುತಿಸಿಕೊಳ್ಳಬಹುದುದಾಗಿದೆ.

ನೋಡುವ ಭಾಷೆಯನ್ನು ಮೀರಿಸಿ ಓಡುವ ಭಾಷೆ, ಶಕ್ತಿಯುತ-ರೋಚಕ ಆಗುತ್ತಿದೆ, ಇಲ್ಲಿಗೂ ನಿಯಂತ್ರಣ ನಿಯಮ ಬರಲು ಬಹಳ ಕಾಲ ಹಿಡಿಯಬಾರದು. ಬೇಗ ಎಚ್ಚೆತ್ತರೆ ವಿಹಿತ.

ಕ್ಯಾಬರೆ ನೃತ್ಯಗಾತಿಯ ಶೋಷಣೆಗಿಂತ, ಆಕೆ ನರ್ತಿಸುವಾಗ ಅವಳ ಪಾದದ ಬಳಿ ಕೂತ ಕೋತಿಯ ಹಾಗಾಡುತ್ತಾ, ಜೊಲ್ಲು ಸುರಿಸುವ ಸಮಾಜದ ವಿವಿಧ ವರ್ಗಗಳ ಪ್ರತಿನಿಧಿಗಳಾಗಿ ಬರುವ ಪಾತ್ರಗಳ ರೀತಿಯನ್ನು ಗಮನಿಸಿದಾಗ ಹೆಚ್ಚು ಅಪಾಯ ಇರುವುದು ಇವರಿಗೇ ಅನ್ನಿಸುತ್ತದೆ. ಅವರೇಕೆ ಇದಕ್ಕಾಗಿ ನಾಚುವುದಿಲ್ಲ, ಪ್ರತಿಭಟಿಸುವುದಿಲ್ಲ. ಹೆಂಗಸರಿಗೆ ಅಪಮಾನ ಆಗುತ್ತಿದೆ. ಮಹಿಳಾ ಸಂಸ್ಥೆಗಳು ಎಚ್ಚೆತ್ತುಕೊಳ್ಳಲಿ ಎನ್ನುವ ಗಂಡುಗಳಿಗೆ ಅವರಿಗಾಗುತ್ತಿರುವ ಅಪಮಾನದ ಅರಿವಿಲ್ಲವೆ?


ಶುದ್ಧ ಆರೋಗ್ಯವಂತ ಸಮಾಜವನ್ನು ಕಟ್ಟ ಬಯಸುವ ಜವಾಬ್ದಾರಿಯುತ ನಾಗರಿಕರಾಗಿ ನಮ್ಮ ಕರ್ತವ್ಯ, ಒಟ್ಟು ಪರಿಣಾಮವನ್ನು ಗಮನಿಸುವ ಕಡೆಗಿರಬೇಕು. ಪುರುಷನಿಗೆ ಎಲ್ಲಿಯುವರೆಗೆ ಹೆಣ್ಣು ಒಂದು 'ಕಮಾಡಿಟಿ' ಮಾತ್ರ ಎಂದು ಭಾವಿಸುತ್ತಾನೊ ಅಲ್ಲಿಯವರೆಗೆ ಅದನ್ನು ಬಳಸುವ ಮೂಲಕವೇ ಅಭಿವ್ಯಕ್ತಿಗೆ ಮಾರ್ಗ ಕಂಡುಕೊಳ್ಳುತ್ತಿರುತ್ತವೆ ಮಾಧ್ಯಮಗಳು. ಆದರೆ ಅದರ ಒಳಗೇ ಹೆಣ್ಣು ಕೂಡಾ ಗಟ್ಟಿಯಾಗಿ ಹೇಳದೆಯೇ ಆತನನ್ನು ತನ್ನ 'ಕಮಾಡಿಟಿ' ಮಾಡಿಕೊಳ್ಳುತ್ತಾಳೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಸೃಜನ ಶೀಲತೆಯ ದುರಂತ ಇರುವುದೇ ಇಂಥಲ್ಲಿ. ಒಂದು ರೋಗಗ್ರಸ್ತ ಸಮಾಜವನ್ನು ರಂಜಿಸಲು ಬಳಸುತ್ತಿರುವ ಸ್ತ್ರೀ ಎಂಬ ಕಲ್ಪನೆಯ ಅವಾಸ್ತವತೆಯೆ ನಮ್ಮ ದೌರ್ಭಾಗ್ಯ.

ವಿರೋಧ ಕೇವಲ ಹೆಣ್ಣು ಹಾಗೆ ಬಳಸಲ್ಪಟ್ಟಳು ಎಂಬುದಕ್ಕಾಗಿ ಸೀಮಿತವಾಗಬೇಕಿಲ್ಲ. ಶುದ್ಧ — ಆರೋಗ್ಯವಂತ ಸಮಾಜವನ್ನು ಕಟ್ಟ ಬಯಸುವ ಜವಾಬ್ದಾರಿಯುತ ನಾಗರಿಕರಾಗಿ ನಮ್ಮ ಕರ್ತವ್ಯ ಒಟ್ಟು ಪರಿಣಾಮವನ್ನು ಗಮನಿಸುವ ಕಡೆಗಿರಬೇಕು. ಪುರುಷನಿಗೆ ಎಲ್ಲಿಯವರೆಗೆ ಹೆಣ್ಣು ಒಂದು "ಕಮಾಡಿಟಿ" ಮಾತ್ರ ಎಂದು ಭಾವಿಸುತ್ತಾನೋ ಅಲ್ಲಿಯವರೆಗೆ ಅದನ್ನು ಬಳಸುವ ಮೂಲಕವೇ ಅಭಿವ್ಯಕ್ತಿಗೆ ಮಾರ್ಗ ಕಂಡುಕೊಳ್ಳುತ್ತಿರುತ್ತವೆ ಮಾಧ್ಯಮಗಳು. ಆದರೆ ಅದರ ಒಳಗೇ ಹೆಣ್ಣು ಕೂಡಾ ಗಟ್ಟಿಯಾಗಿ ಹೇಳದೆಯೇ ಆತನನ್ನು ತನ್ನ "ಕಮಾಡಿಟಿ" ಮಾಡಿಕೊಂಡಿರುತ್ತಾಳೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಸೃಜನಶೀಲತೆಯ ದುರಂತ ಇರುವುದೇ ಇಂಥಲ್ಲಿ. ಒಂದು ರೋಗಗ್ರಸ್ತ ಸಮಾಜವನ್ನು ರಂಜಿಸಲು ಬಳಸುತ್ತಿರುವ ಸ್ತ್ರೀ ಎಂಬ ಕಲ್ಪನೆಯ ಅವಾಸ್ತವತೆಯೇ ನಮ್ಮ ದೌರ್ಭಾಗ್ಯ. ಪ್ರತೀಕಾರಕ್ಕಾಗಿ ಪುರುಷನ ಜನನಾಂಗವನ್ನು ಕತ್ತರಿಸುವ "ಜಾಕ್ಮಿ ಔರತ್" ಗಳಿಗಿಂತ ಮಿಗಿಲಾದ್ದನ್ನು ಈಗಿರುವ ಸ್ಥಿತಿಯೇ ಪುರುಷನಿಗೆ ಮಾರಕಸ್ಥಿತಿಯನ್ನು ತಂದಿತ್ತಿದೆ. ಹೀಗಿರುವಾಗ "ಆಕೆ" ಯ ಆತ್ಮಗೌರವಕ್ಕೆ ಧಕ್ಕೆಯ ಮಾತು ಕೇವಲ ನಿಯಮದಲ್ಲಿ ಅದೂ ಅಸ್ಪಷ್ಟವಾಗಿ ವ್ಯಾಖ್ಯಾನದ ಜಾಣತನದ ತೆಕ್ಕೆಯಲ್ಲಿ ಅಡುವ ಕೂಸಾಗಿ ಮಾತ್ರ ಇರುತ್ತದೆ. ಹೀಗೆ;

IV a) Visulas or words dipicting woman n ignoble servinity to man or glorifying such servinity as a praise worthy quality in woman are not presented "

IV Human sensibalities are not offended by vulgarities obscenity and depraivity.

ಯುನೈಟೆಡ್ ಸ್ಟೇಟ್ಸ್ ಇಂಥ ಅಂಕಗಳನ್ನು ಗಮನಿಸಿ ಅಶ್ಲೀಲ ಮತ್ತು ಪೋರ್ನೋಗ್ರಫಿಯಂಥವನು ರಾಷ್ಟ್ರದ ಸಮಸ್ಯೆಯಾಗಿ ಭಾವಿಸಿ ಒಂದು ಕಮಿಷನ್ ಮಾಡಿ – ನಿರ್ಧಾರಗಳಿಗೆ ಬರುತ್ತಿದೆ. ನಮ್ಮ ಸಂದರ್ಭಕ್ಕೆ ಅಶ್ಲೀಲ ಇತ್ಯಾದಿಗಳನ್ನು ಮೀರಿದ ಧಾರ್ಮಿಕ ನಂಬಿಕೆಗಳು, ಪಾತಿವ್ರತ್ಯ, ಶೀಲಗಳ ಬಗ್ಗೆ ಕಳೆದ ಏಕಪಕ್ಷೀಯ ಮೌಲ್ಯ ರೂಪಣ ಇತ್ಯಾದಿಗಳನ್ನು ಬೇರೆ ಬೇರೆ ರಾಷ್ಟ್ರೀಯ ಹಿನ್ನೆಲೆಯಲ್ಲಿ ತುಲನೆ ಮಾಡುವ ತುರ್ತು ಇವತ್ತಿನದು!



ಕಾನೂನು

ಮೀರಾ ಸಾಹಿಬ್ ಫಾತಿಮಾ ಬೀವಿ ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶೆಯಾಗಿ ಪ್ರಮಾಣವಚನ ಸ್ವೀಕರಿಸುವುದರ ಮೂಲಕ ಚರಿತ್ರಾರ್ಹವಾದ ಮೈಲಿಗಲ್ಲನ್ನು ಸ್ಥಾಪಿಸಿದ್ದಾರೆ. ಮೀರಾ ಸಾಹಿಬ್ ಮಹಿಳೆಯರ ಸಾಧನೆಯ ಸಂಕೇತವಾಗಿದ್ದಾರೆ,

೧೯೫೦ರಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದ ಫಾತಿಮಾ ಎಲ್ಲ ಸಾಧಾರಣ ಮಹಿಳೆಯರಂತೆ ಹೆಜ್ಜೆ ಹೆಜ್ಜೆಗೂ ಅಡೆತಡೆಗಳನ್ನು ಎದುರಿಸಬೇಕಾಯಿತು. ಕೇವಲ ೩ ಜನ ಮುಸ್ಲಿಂ ಮಹಿಳೆಯರು ಕಾನೂನು ಅಭ್ಯಸಿಸುತ್ತಿದ್ದರು, ಇವರ ಜತೆಯಲ್ಲಿ ಅಧ್ಯಯನ ಮಾಡುತ್ತಿದ್ದ ಶ್ರೀಮತಿ ಅನ್ನಾ ಚಾಂಡಿ ಭಾರತದಲ್ಲಿ ನೇಮಕವಾದ ಮೊದಲ ನ್ಯಾಯಾಧೀಶೆ.

೧೯೫೦ರಲ್ಲಿ ಫಾತಿಮಾ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದಾಗ ಅವರ ಉತ್ಸಾಹಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆಯದಷ್ಟು ವಾತಾವರಣ ಪಕ್ಷಪಾತದಿಂದ ಕೂಡಿತ್ತು. ಪುರುಷ ಪ್ರಧಾನವಾದ ನಡವಳಿಕೆ, ನಂಬಿಕೆಗಳ ಹಿನ್ನೆಲೆಯಲ್ಲಿ ಫಾತಿಮಾ ತಮ್ಮ ವೃತ್ತಿಯನ್ನು ಸಾಕಷ್ಟು ಹಿಂಜರಿಕೆಯಿಂದ ಪ್ರಾರಂಭಿಸಿದರು.

ಅವರ ಈ ಅಸಾಧಾರಣ ಯಶಸ್ಸಿಗೆ ಬೆನ್ನೆಲುಬಾದದ್ದು ಅವರ ಆತ್ಮಸ್ಥೈರ್ಯ ಹಾಗೂ ಅವರು ತಮ್ಮ ತಂದೆಯಿಂದ ಪಡೆದ ಪ್ರೋತ್ಸಾಹ. ಮೊಟ್ಟಮೊದಲು ಜಿಲ್ಲಾ ನ್ಯಾಯಾಲಯದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದಾಗ ಫಾತಿಮಾ ಬಂಧು ಬಾಂಧವರಿಂದ ಕಟುಟೀಕೆಗಳನ್ನೆದುರಿಸಬೇಕಾಯ್ತು.

ತಮ್ಮ ವಿದಾಭ್ಯಾಸಕ್ಕೆ ನೀರೆರೆದ ತ್ರಿವಾಂಕೂರಿನ ಮಹಾರಾಜನ ಬಗ್ಗೆ ಫಾತಿಮಾಗೆ ಅಪಾರವಾದ ಗೌರವವಿದೆ. ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಅದರಲ್ಲೂ ಮುಸ್ಲಿಂ ಮಹಿಳೆಯರ ವಿದ್ಯಾಭ್ಯಾಸಕ್ಕೆ ಮಹಾರಾಜನು ಪ್ರೋತ್ಸಾಹ ನೀಡುವುದು ಜೊತೆಯಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ವಿದ್ಯಾಭ್ಯಾಸದ ಫೀಯನ್ನೂ ಮನ್ನಾ ಮಾಡಿದ್ದ. ಮಹಾರಾಜನು ನೀಡಿದ ಈ ಸೌಲಭ್ಯದಿಂದಾಗಿ ಫಾತಿಮಾ ಉಚಿತ ವಿದ್ಯಾಭ್ಯಾಸವನ್ನೂ ಪಡೆಯಲು ಸಹಕಾರಿಯಾಯಿತು.

ಫಾತಿಮಾ ೫ ವರ್ಷಗಳ ಕಾಲ ಜಿಲ್ಲಾ ನ್ಯಾಯಾಲಯದಲ್ಲಿ ಕೆಲಸಮಾಡಿದರು, ಇನ್‌ಕಂಟ್ಯಾಕ್ಸ್ ಅಪಾಲೇಟ್ ಟ್ರಿಬ್ಯೂನಲ್‌ನ ಸದಸ್ಯೆಯಾಗಿ ಆಯ್ಕೆಯಾದ ಪ್ರಥಮ ಮಹಿಳೆ ಫಾತಿಮಾ ೧೯೮೩ರಲ್ಲಿ ಆಕೆ ಹೈಕೋರ್ಟಿನ ನ್ಯಾಯಾಧೀಶೆಯಾಗಿ ನೇಮಕವಾಗಿ ಈ ವರ್ಷ ನಿವೃತ್ತಿ ಹೊಂದಿದ್ದರು. ನಿವೃತ್ತಿ ಹೊಂದಿದ ನಂತರ ನ್ಯಾಯಾಧೀಶೆಯಾಗಿ ನೇಮಕಹೊಂದಿದ ಕೆಲವೇ ಜನರಲ್ಲಿ ಫಾತಿಮಾ ಒಬ್ಬರು.

ನ್ಯಾಯಾಂಗ ವ್ಯವಸ್ಥೆ ಸಾಂಪ್ರದಾಯಕವಾಗಿ ಪುರುಷ ಪ್ರಧಾನವಾಗಿದೆಯೆನ್ನುವ ಫಾತಿಮಾ ಸ್ತ್ರೀಯರು ಈ ವೃತ್ತಿಯಲ್ಲಿ ಹೆಚ್ಚು ಧೈರ್ಯವಂತರೂ, ಆತ್ಮವಿಶ್ವಾಸವುಳ್ಳವರೂ ಆಗಿರಬೇಕು. ಇಲ್ಲದಿದ್ದರೆ ಹತಾಶೆಯನ್ನು ಅನುಭವಿಸಬೇಕಾಗುತ್ತದೆಯೆನ್ನುತ್ತಾರೆ.

ಮಹಿಳಾ ವಕೀಲರಿಗೆ ಸಾಕಷ್ಟು ಪ್ರೋತ್ಸಾಹ ಸಿಗುತ್ತಿಲ್ಲ. ಕೆಲವರು ವಿವಾಹವಾಗುತ್ತಾರೆ. ಕೌಟುಂಬಿಕ ಒತ್ತಡಗಳಿಂದ ಅವರು ಉದ್ಯೋಗದಿಂದ ಹಿಂದ ಸರಿಯುತ್ತಾರೆ. ತಾವು ಸ್ತ್ರೀ ನ್ಯಾಯಾಧೀಶೆಯಾಗಿ ಪಕ್ಷಪಾತಕ್ಕೆ ಗುರಿಯಾಗಿಲ್ಲವೆನ್ನುವ ಫಾತಿಮಾ ಹೆಚ್ಚು ಹೆಚ್ಚು ಮಹಿಳೆಯರು ಈ ಕ್ಷೇತ್ರಕ್ಕೆ ಬರುವುದರಿಂದ ಮಹಿಳೆಯರ ಬಗೆಗಿರುವ ಧೋರಣೆ ಬದಲಾಯಿಸಲು ಸಾಧ್ಯವಿದೆಯೆಂದು ಭಾವಿಸುತ್ತಾರೆ.

ಮಹಿಳಾ ಸಮಸ್ಯೆಗಳು ಕಾನೂನಿನ ಪ್ರಕಾರ ನಿರ್ಧಾರವಾದರೂ, ಮಹಿಳಾ ನ್ಯಾಯಾಧೀಶರು ಸ್ತ್ರೀಯರ ಸಮಸ್ಯೆಗಳನ್ನು ಹೆಚ್ಚು ಅರ್ಥಮಾಡಿಕೊಳ್ಳಬಲ್ಲರೆನ್ನುವ ಫಾತಿಮಾ ಮಹಿಳೆಯರಲ್ಲಿರುವ ಸಾಮರ್ಥ್ಯಕ್ಕೆ ಪ್ರತಿನಿಧಿಯಾಗಿದ್ದಾರೆ.

ಓದುಗರಲ್ಲಿ ಮನವಿ

ಶತಮಾನಗಳಿಂದ ತುಳಿತಕ್ಕೊಳಗಾದ ಸ್ತ್ರೀಯರ ಧ್ವನಿಯಾದ ಮಾನಸ ಪತ್ರಿಕೆಯನ್ನು ಕ್ರಮವಾಗಿ ಪ್ರಕಟಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಪ್ರಾರಂಭಿಸಿದರೂ, ಆರ್ಥಿಕ ಕಾರಣಗಳಿಂದಾಗಿ ಪತ್ರಿಕೆಯನ್ನು ಕ್ರಮವಾಗಿ ಪ್ರಕಟಿಸಲು ಸಾಧ್ಯವಾಗದೆ ಇರುವುದನ್ನು ನೀವು ಈಗಾಗಲೇ ಗಮನಿಸಿರಬಹುದು.

ನಮ್ಮೆಲ್ಲರ ಪ್ರಾಮಾಣಿಕ ಪ್ರಯತ್ನವನ್ನೂ ಮೀರಿ ಅಡಿಗಡಿಗೆ ಎದುರಾಗುವ ಸಮಸ್ಯೆಯಿಂದಾಗಿ ಪತ್ರಿಕೆ ತುಂಬಾ ವಿಳಂಬ ಗತಿಯಲ್ಲಿ ಪ್ರಕಟವಾಗುತ್ತಿದೆ. ಪತ್ರಿಕೆಯ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶದಿಂದ ಒಂದು ಪುಟ್ಟದಾದ ಅಚ್ಚುಮೊಳೆಯ ಕೇಂದ್ರವನ್ನು ಈಗಾಗಲೇ ಪ್ರಾರಂಭಿಸಿದ್ದೇವೆ. ಇದರ ಖರ್ಚು ವೆಚ್ಚಗಳೊಂದಿಗೆ ಬಾಡಿಗೆಗೆ ಹಣ ಹೊಂದಿಸುವುದು ದುಸ್ತರವಾಗುತ್ತಿದೆ. ಈ ಹಂತದಲ್ಲಿ ಪತ್ರಿಕೆಯ ಆತ್ಮೀಯ ಹಿತೈಷಿಗಳಾದ ನಿಮಗೆ ಈ ಕೆಳಗಿನ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇವೆ. ಪ್ರತಿ ತಿಂಗಳೂ ಮಾನಸ ಆಫೀಸ್ ಬಾಡಿಗೆಗೆಂದು ರೂ. 5-00 ಕಳಿಸಲು ಸಾಧ್ಯವೆ? ಪ್ರತಿ ತಿಂಗಳೂ ಕಳಿಸುವುದು ಸಮಸ್ಯೆಯೆನಿಸಿದರೆ, ಅರ್ಧ ವರ್ಷದ ಅಂದರೆ ರೂ. 30-00 ಅಥವಾ ಒಂದು ವರ್ಷದ ರೂ. 60-00 ಒಟ್ಟಿಗೆ ಕಳಿಸಬಹುದು. ನಮ್ಮ ಈ ಕಿರು ಪ್ರಯತ್ನಕ್ಕೆ ನಿಮ್ಮ ಬೆಂಬಲ ಮತ್ತು ಪ್ರೋತ್ಸಾಹವಿದೆಯೆಂಬ ಭರವಸೆ ನಮಗಿದೆ.

'ಮಾನಸ' ದೊಡನೆ ನಿಮ್ಮ ಪತ್ರ ವ್ಯವಹಾರದಲ್ಲಿ ಪ್ರತಿ ಬಾರಿಯೂ ನಿಮ್ಮ ವಿಳಾಸವನ್ನು ಬರೆಯಿರಿ. ಅನಾವಶ್ಯಕವಾಗಿ ಗೊಂದಲ ಕಡಿಮೆ ಆಗುವುದಲ್ಲದೇ, ತಕ್ಷಣ ಪತ್ರಿಸಲು ನಮಗೂ ಸಹಾಯಕವಾಗುತ್ತದೆ. ಜೊತೆಗೆ ವಿಳಾಸದಲ್ಲಿನ ಬದಲಾವಣೆಗಳು ಗಮನಕ್ಕೆ ಬರುತ್ತವೆ.

ಚಂದಾದಾರರಾಗಿ

ನಿಮ್ಮ ಪ್ರೋತ್ಸಾಹ ಮತ್ತು ಸಹಕಾರಗಳಿಂದಲೇ 'ಮಾನಸ' ವನ್ನು ಪ್ರತಿತಿಂಗಳು ಕ್ರಮಬದ್ಧವಾಗಿ ಪ್ರಕಟಿಸಲು ಸಾಧ್ಯ. ನಿಮ್ಮ ಗೆಳೆಯ, ಗೆಳತಿಯರಿಗೆ ಪತ್ರಿಕೆಯನ್ನು ಪರಿಚಯಿಸಿ ಚಂದಾದಾರರನ್ನಾಗಿಸಿ. ಅಜೀವ ಚಂದಾದಾರರಾಗಿ (250 ರೂ) ಪತ್ರಿಕೆಯ ಸ್ವಾವಲಂಬನೆಗೆ ಸಹಾಯಕರಾಗಿ.

ಗ್ರ್ಯಾಫಿಕ್ಸ್

ನೀವು ಮಾನಸ ತಿಂಗಳ ಪತ್ರಿಕೆಯ ಮುಖಪುಟ ಹಾಗೂ ಒಳಗಿನ ಪುಟಗಳ ಗ್ರ್ಯಾಫಿಕ್ಸ್ ಗಮನಿಸಿರಬಹುದು. ಪ್ರತಿ ಸಂಚಿಕೆಯಲ್ಲೂ ಹೀಗೆ ಪ್ರತಿ ಲೇಖನಕ್ಕೆ ಹಾಗೂ ಅಂಕಣಗಳಿಗೆ ಸಂಬಂಧಿಸಿದಂತೆ ಚಿತ್ರಗಳನ್ನು ಪ್ರಕಟಿಸಲಾಗುವುದು. ನೀವು ಕಲಾವಿದರಾಗಿದ್ದರೆ ನಿಮ್ಮ ರಚನೆಗಳನ್ನು 'ಮಾನಸ' ಪ್ರಕಟಣೆಗೆ ಕಳಿಸಿ.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್. ರಾಜೇಶ್ವರಿ, ಮಾನವಿ ಮುದ್ರಣಾಲಯ, ಪಂಚಾಯತಿ ರಸ್ತೆ ಕಾಡುಗೋಡಿ ಅಂಚೆ ಬೆಂಗಳೂರು 560 067

ನಂ ಮ್ಯಾಗ್ (5) ಪಿಆರ್‌ಬಿ ಡಿಕ್ಲೇರ್ಡ್ : 284/8889

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ : " ಮಾನಸ "
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು – 560067

ಸೂಚನೆ:

ಬಿಡಿಪ್ರತಿ: 2 ರೂ.
ವಾರ್ಷಿಕ ಚಂದಾ : 20 ರೂ.
ಆಜೀವ ಚಂದಾ : 250ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ. ಮೂಲಕ ಸ್ವೀಕರಿಸಲಾಗುವುದು.